
ಸಂಪುಟ 20 ಸಂಚಿಕೆ 36
ಸೆಪ್ಟೆಂಬರ್ 5, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಕರ್ನಾಟಕದ ಸಮಗ್ರ, ಸಮಾನ ಅಭಿವೃದ್ಧಿ ಪಥಕ್ಕಾಗಿ ಜಾತ್ಯಾತೀತ ಕರ್ನಾಟಕಕ್ಕಾಗಿ



ಇಲ್ಲಿದೆ ನೋಡಿ ಅಭಿವೃದ್ಧಿಗೆ ಪರ್ಯಾಯ ಹಾದಿ



ವಿಷದ ದೇಹವೊಂದೇ–ನಾಲಗೆಗಳು ಹಲವು

ಸಂಪಾದಕೀಯ

ವಿಷಪೂರಿತ ದೇಹವೊಂದು, ನಾಲಗೆಗಳು ಹಲವು

೧೯೯೮ ರ ಚುನಾವಣೆಯ ಸಮಯ. ಸಿಕ್ಕ ಸಿಕ್ಕವರ ಜೊತೆ ಮೈತ್ರಿ ಮಾಡಿಕೊಳ್ಳುತ್ತಾ ಇದ್ದ ಬಿಜೆಪಿ ಪಕ್ಷ ತನ್ನ ಪ್ರಣಾಳಿಕೆಯನ್ನು ಬಿಡುಗಡೆಯೇ ಮಾಡಿರಲಿಲ್ಲ. ನಾಮಪತ್ರ ಸಲ್ಲಿಸುವ ದಿನ ಬಂತು; ವಾಪಸು ತೆಗೆಯುವ ದಿನವೂ ಮುಗಿದು ಹೋಯಿತು. ಮೈತ್ರಿ ಮಾಡಿಕೊಂಡ ಪಕ್ಷಗಳು ಬಿಜೆಪಿಗೆ ಸ್ಥಾನಗಳನ್ನು ಬಿಟ್ಟುಕೊಟ್ಟಾಗಿತ್ತು. ಇನ್ನು ಅವರು ಮನಸ್ಸು ಬದಲಾಯಿಸಿದರೂ ಏನೂ ಮಾಡುವಂತಿರಲಿಲ್ಲ. ಆಗ ದಿಢೀರನೆ ಹೊರಬಂತು ಬಿಜೆಪಿ ಪ್ರಣಾಳಿಕೆ. ಆಯೋಧ್ಯೆಯಲ್ಲಿ ರಾಮಮಂದಿರ ಕಟ್ಟುತ್ತೇವೆ, ಜಮ್ಮು ಕಾಶ್ಮೀರಕ್ಕೆ ಹೆಚ್ಚು ಸ್ವಾಯತ್ತತೆ ನೀಡುವ ೩೭೦ ನೇ ವಿಧಿಯನ್ನು ತೆಗೆದೊಗೆಯುತ್ತೇವೆ, ದೇವಾಲಯಗಳ ಸಂರಕ್ಷಣಾ ಕಾಯಿದೆ ತಂದೇ ತರುತ್ತೇವೆ ಇತ್ಯಾದಿ ಇತ್ಯಾದಿ. ದೇಶವನ್ನೆಲ್ಲಾ ಸುಡುವ ಬೆಂಕಿಯನ್ನು ಕಟ್ಟಿಕೊಂಡೇ ಬಂದ ಈ ಪ್ರಣಾಳಿಕೆಯನ್ನು ದೇಶ ಶೇ ೭೫ ಭಾಗ ಮತದಾರರು ತಿರಸ್ಕರಿಸಿದ್ದರು.

೨೨ ಪಕ್ಷಗಳ ಜೊತೆ ಸೇರಿ ಸರ್ಕಾರ ರಚಿಸಬೇಕಾಯಿತು. ಆಗ ಸರ್ಕಾರಕ್ಕೊಂದು 'ಅಜೆಂಡಾ' ತಯಾರಾಯಿತು. ಅದರಲ್ಲಿ ಬಿಜೆಪಿಯ ಅಜೆಂಡಾದ ಈ ಅಂಶಗಳನ್ನು ಕೈಬಿಡಲಾಗಿತ್ತು. ಲೋಕಸಭೆಯಲ್ಲಿ ವಿಶ್ವಾಸಮತ ಯಾಚಿಸುವಾಗ ವಾಜಪೇಯಿ ಇದನ್ನೇ ದೊಡ್ಡ ತ್ಯಾಗವೆಂಬಂತೆ ಬಣ್ಣಿಸಿದರು. ವಾಜಪೇಯಿ ಬಿಜೆಪಿಯೊಳಗಿನ ಉದಾರವಾದಿ, ಕೋಮುವಾದಿ ಮೂಲಭೂತವಾದಿ ವಿಚಾರಗಳು ಅವರಿಗೆ ಗೊತ್ತೆ ಇಲ್ಲ ಎಂದು ರಾಮಕೃಷ್ಣ ಹೆಗ್ಡೆ, ಜಾರ್ಜ್ ಫರ್ನಾಂಡೀಸ್‌ಗಳು ಹೊಗಳಿದರು. ಇದೇ ನೆಪದ ಮೇಲೆಯೇ ಚಂದ್ರಬಾಬು ನಾಯಿಡು ಕೊನೆಗಳಿಗೆಯಲ್ಲಿ ತಮ್ಮ ಬೆಂಬಲ ಘೋಷಿಸಿದರು.

ಆದರೆ ಮುಂದೆ ನಡೆದಿದ್ದೇನು? ಅಯೋಧ್ಯೆ ಹಾಗೂ ರಾಜಸ್ಥಾನದಲ್ಲಿನ ಕಲ್ಲುಕುಟಿಗರ ಶಾಲೆಗಳಿಂದ ರಾಮಮಂದಿರಕ್ಕಾಗಿ ತಯಾರಿಸುತ್ತಿದ್ದ ಕಂಬಗಳ, ಇಡೀ ಇಡೀ ಗೋಡೆಗಳ ಶಬ್ಧ ಇಡೀ ದೇಶಕ್ಕೇ ಕೇಳಿಸತೊಡಗಿತು. ಬಿಜೆಪಿ ಮತ್ತೊಂದು ಬಾರಿ ಕಾಶಿ, ಮಥುರಾಗಳ ಬಗ್ಗೆ ವಿಷಕಾರತೊಡಗಿತ್ತು. ಕೋಮುದಳ್ಳುರಿಯ ಒಡಲಿಗೆ ಮುಸ್ಲಿಂ ಅಲ್ಪಸಂಖ್ಯಾತರ, ಮಹಿಳೆಯರ, ಮಕ್ಕಳ ಆಕ್ರಂದನ ಸಾಲದೆಂದು ಕ್ರಿಶ್ಚಿಯನ್ ಚರ್ಚ್‌ಗಳು, ಸನ್ಯಾಸಿನಿಯರು ಹಾಗೂ ಪಾದ್ರಿಗಳ ಮೇಲೆ ತನ್ನ ಬೆಂಕಿ ನಾಲಗೆಯನ್ನು ಚಾಚಿತು.

ಶಿಕ್ಷಣ, ಇತಿಹಾಸ ಸಂಶೋಧನೆ, ಸಮಾಜಶಾಸ್ತ್ರದ ಸಂಶೋಧನೆ, ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆ, ಆಡಳಿತ ಯಂತ್ರ ಕೊನೆಗೆ ಸೈನ್ಯಕ್ಕೂ ಕೋಮುವಾದೀಕರಣದ ವಿಷವಾಯು ಹಬ್ಬಿತು. ಮೈತ್ರಿ ಸರ್ಕಾರದ ಸಾರ್ವಜನಿಕ ಅಜೆಂಡಾಕ್ಕೆ ಬದಲಾಗಿ ರಹಸ್ಯ ಅಜೆಂಡಾಕ್ಕೆ ರೆಕ್ಕೆಪುಕ್ಕ ಬಂದಿದ್ದು ದೇಶಕ್ಕೇ ಗೊತ್ತಾಯಿತು.

ಈಗ '೯೯ರ ಚುನಾವಣೆಯಲ್ಲಿ ಮತ್ತೆ ಎರಡು ನಾಲಗೆಯ ಮಾತು ಬರುತ್ತಿದೆ. ವೆಂಕಯ್ಯನಾಯ್ಡು ಗೋವಿಂದಾಚಾರ್ಯ,ಬಿಜೆಪಿ ರಾಮಮಂದಿರ ಕಾಶ್ಮೀರದ ಬಗೆಗಿನ ೩೭೦ನೇ ವಿಧಿ, ಸಮಾನ ನಾಗರೀಕ ಕಾಯಿದೆಯನ್ನು ಬಿಟ್ಟಿಲ್ಲ ಬಿಡುವುದೂ ಇಲ್ಲ ಬಿಜೆಪಿಗೇ ಪೂರ್ಣ ಬಹುಮತ ಸಿಕ್ಕ ದಿನವೇ ಅವನ್ನು ಜಾರಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದೇ ವಿಷಸರ್ಪದ ಮತ್ತೊಂದು ತಲೆ (ವಾಜಪೇಯಿ) ಒಮ್ಮೆ ಹೌದೆಂದು ಮತ್ತೊಮ್ಮೆ ಅಲ್ಲವೆಂದು ಆಡಿಸುತ್ತಿದೆ.

ಇಂತಹ ಹಲವು ನಾಲಗೆಗಳ ಆಟವನ್ನಾಡುತ್ತಾ ದೇಶದ ಜನರನ್ನು ಬಲೆಗೆ ಬೀಳಿಸಿಕೊಳ್ಳುತ್ತಿರುವ ವಂಚನೆಯ ಆಟ ಮತ್ತೆ ಆರಂಭವಾಗಿದೆ. ಏಕೆಂದರೆ ಮತ್ತೆ ಚುನಾವಣೆಗಳು ಬಂದಿವೆ. ಬಿಜೆಪಿಗೆ ಕೋಮುವಾದಿ ಮತಗಳೂ ಬೇಕು ಕೋಮುವಾದವನ್ನು ನಿರಾಕರಿಸುವವರ ಮತಗಳೂ ಬೇಕು. ಎರಡೂ ಒಟ್ಟಿಗೆ ಕೂಡಿದ ಮೇಲೆ ನಡೆಯುವುದು ಒಂದೇ ಆಟ. ಅದು ನಾಗಪುರದಲ್ಲಿ ಅವಿತಿಟ್ಟುಕೊಂಡಿರುವ ಬಿಜೆಪಿಯ ಮೆದುಳಾದ ಸಂಘದ ಆಟ.

ಬಿಜೆಪಿ ಅಧಿಕಾರಕ್ಕೆ ಬರಬಾರದು. ಬಂದ ಮೇಲೆ ಕೂಡ ಮುಂದುವರೆಯಬಾರದು. ಏಕೆಂದರೆ ಅವರ ಒಂದೊಂದು ದಿನದ ಅಧಿಕಾರ ಭಾರತೀಯ ಸಮಾಜಕ್ಕೆ ವಿಷದಂಶನ(ಕಚ್ಚುವುದು)ಎಂದು ಎಡಪಂಥೀಯರು ಪ್ರತಿಪಾದಿಸಿದ್ದು ಈ ಕಾರಣಕ್ಕೇ. ಒಂದು ವರ್ಷಕ್ಕಿಂತ ಹೆಚ್ಚಿನ ಬಿಜೆಪಿ ಆಡಳಿತದ ಅನುಭವ ಭಾರತೀಯ ಪ್ರಜೆಗಳಿಗೆ ಪಾಠ ಕಲಿಸಿದೆ ಅದು ೯೯ ರ ಮಹಾಚುನಾವಣೆಗಳಲ್ಲಿ ಪ್ರಯೋಜನಕ್ಕೆ ಬರುತ್ತದೆ ಎಂದು ಹಾರೈಸೋಣ.



ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಸಾಮಾನ್ಯವಾಗಿ ಚುನಾವಣೆಗಳಲ್ಲಿ ಪಕ್ಷಗಳು ತಮ್ಮ ಪಕ್ಷದ ಮುಖಂಡರುಗಳನ್ನು ಮುಂದೆ ಮಾಡಿ ಮತಯಾಚಿಸುತ್ತಾರೆ. ಉದಾರಹಣೆಗೆ ಕಾಂಗ್ರೆಸ್ ಪಕ್ಷ ಸೋನಿಯಾ ಗಾಂಧಿ, ಬಿಜೆಪಿ ಪಕ್ಷವು ವಾಜಪೇಯಿಯವರನ್ನು ಹೆಸರಿಸಿ ಮತ ಯಾಚಿಸುತ್ತದೆ. ಆದರೆ ಅವರೆಲ್ಲರಿಂಗತಲೂ ಅನುಭವದಲ್ಲಿ ಮತ್ತು ಆಡಳಿತದಲ್ಲಿ ಅತ್ಯಂತ ಸಮರ್ಥವಾದ, ಸ್ಥಿರವಾದ ನಾಯಕತ್ವ ನೀಡಿರುವ ಜ್ಯೋತಿಬಸುರವನ್ನು ಮುಂದೆ ಮಾಡಿ ಸಿಪಿಐ(ಎಂ) ಪಕ್ಷ ಯಾಕೆ ಮತ ಯಾಚಿಸುವುದಿಲ್ಲ ?

- ಕೆ.ಎಸ್.ಲಕ್ಷ್ಮಿ

ಬಿಜೆಪಿ 96 ರ ಲೋಕಸಭಾ ಚುನಾವಣೆಯಿಂದಲೂ ವಾಜಪೇಯಿ ಯವರೇ ಪ್ರಧಾನಿಪದಕ್ಕೆ ನಮ್ಮ ಅಭ್ಯರ್ಥಿ ವಾಜಪೇಯಿಯವರನ್ನು ಪ್ರಧಾನಿ ಮಾಡಲು ಬಿಜೆಪಿಗೆ ಮತ ಕೊಡಿ ಎಂದು ಮತ ಯಾಚಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ನೆಹರು, ಇಂದಿರಾ, ರಾಜೀವ್‌ರವರ ಹೆಸರಿನ ಮೇಲೆ ಇಲ್ಲಿಯವರೆಗೆ ಯಾಚಿಸುತ್ತಿತ್ತು. ಈಗ ಸೋನಿಯಾವರನ್ನೇ ಮುಂದೆ ಮಾಡಿ ಮತಯಾಚಿಸುತ್ತಿದ್ದಾರೆ. ಆದರೆ ಸ್ವತಃ ಸೋನಿಯ ಮತ್ತು ಪ್ರಧಾನಿ ಸ್ಥಾನಕ್ಕೆ ಸೋನಿಯರವರೇ ಕಾಂಗ್ರೆಸ್‌ನ ಅಭ್ಯರ್ಥಿಯೆಂದು ಘೋಷಿಸಿಲ್ಲ. ಚುನಾವಣೆಯ ನಂತರ ಸಂಸತ್ ಸದಸ್ಯರು ಮುಂದಿನ ಪ್ರಧಾನಿಯನ್ನು ಆರಿಸುತ್ತಾರೆ ಎಂದು ಹೇಳುತ್ತಿದ್ದಾರೆ.

ಹೀಗೆ ವ್ಯಕ್ತಿಗಳನ್ನು ಮುಂದೆ ಮಾಡಿ ಮತ ಯಾಚಿಸುವುದು ಮತದಾರರನ್ನು ಮೋಸಗೊಳಿಸುವುದು ಬಂಡವಾಳ ಶಾಹಿ ಪಕ್ಷಗಳ ಆಟದ ಒಂದು ಸಾಧನ. ಇದು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ. ಅಮೇರಿಕಾ, ಬ್ರಿಟನ್ ಮೊದಲಾದ ಅತ್ಯಂತ ಮುಂದುವರೆದ ಪ್ರಜಾಪ್ರಭುತ್ವಗಳೆಂದು ಹೇಳಿಕೊಳ್ಳುವ ದೇಶಗಳಲ್ಲಿಯೂ ಈ ಆಟ ನಡೆಯುತ್ತಿದೆ. ಕ್ಲಿಂಟನ್ ಬೇಕೊ? ಬುಷ್ ಬೇಕೊ?, ಥ್ಯಾಚರ್ ಬೇಕೊ? ಬ್ಲೇಯರ್ ಬೇಕೊ? ಎಂಬ ರೀತಿಯ ಪ್ರಶ್ನೆಗಳನ್ನು ಆ ದೇಶದ ಚುನಾವಣೆಗಳಲ್ಲಿ ಒಡ್ಡಲಾಗುತ್ತದೆ. ಕ್ಲಿಂಟನ್ ಎತ್ತರ, ರೂಪ, ಮಾತುಗಾರಿಕೆ, ಅವನ ಖಾಸಗೀ ಬದುಕು ಅವೇ ಆ ಚುನಾವಣೆಗಳಲ್ಲಿ ಪ್ರಮುಖ ಚರ್ಚೆಯ ವಿಷಯಗಳಾಗಿ ಬಿಡುತ್ತವೆ. ಇಡೀ ದೇಶ ಅದರ ಭವಿಷ್ಯ ಜನರ ಬದುಕು, ಅದರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಇವುಗಳಿಗೆ ಸಂಬಂಧಿಸಿದ ನಿಜ ಪ್ರಶ್ನೆಗಳನ್ನು ಮರೆಮಾಚುವುದಕ್ಕಾಗಿಯೇ ಇಂತಹ ಕುಟಿಲ ತಂತ್ರವನ್ನು ಬಂಡವಾಳಶಾಹಿ ಪಕ್ಷಗಳು ಅನುಸರಿಸುತ್ತವೆ.

ಪಕ್ಷವೊಂದರ ಧೋರಣೆ ಅದರ ಕಾರ್ಯಾಚರಣೆ ಇದಕ್ಕೆ ಸಂಬಂಧಿಸಿದ ಜನರ ಅನುಭವವೇ ಈ ಪಕ್ಷಗಳನ್ನು ಅಳೆಯುವ ಮಾನದಂಡವಾಗಬೇಕು ಎಂದು ಸಿಪಿಐ(ಎಂ) ಭಾವಿಸುತ್ತದೆ. ಹೀಗಾಗಿ ಅದರ ಜಾರಿಗಾಗಿ ಮಾಡುತ್ತಿರುವ ಪ್ರಯತ್ನಗಳು, ಸಾಧನೆಗಳ ಆಧಾರದಲ್ಲಿ ಮತವನ್ನು ಯಾಚಿಸಬಯಸುತ್ತವೆ. ಆದ್ದರಿಂದಲೇ ಯಾವುದೇ ವ್ಯಕ್ತಿಗಳನ್ನು ಮುಂದೆ ಮಾಡುವುದಿಲ್ಲ.

ಧೋರಣೆಗಳೆಂದರೇನು? ಇಡೀ ದೇಶದ 98 ಕೋಟಿಗಿಂತಲೂ ಹೆಚ್ಚು ಇರುವ ಜನ ಸಮುದಾಯದ ಪರಿಸ್ಥಿತಿ, ಸಮಸ್ಯೆಗಳು ಅದಕ್ಕೆ ಪರಿಹಾರಗಳು ಇವು. ಆದ್ದರಿಂದ ಈ ಚುನಾವಣೆಗಳಲ್ಲಿ ದೇಶದ ಹಾಗೂ ದೇಶದ 98 ಕೋಟಿ ಜನರ ಬಗ್ಗೆ ಚರ್ಚಿಸಬೇಕೊ ಅಥವಾ ವಾಜಪೇಯಿ, ಸೋನಿಯಾಗಳಂತ ಇಬ್ಬರು ಮೂವರು ವ್ಯಕ್ತಿಗಳ ಪ್ರಧಾನವಾಗಬೇಕೊ ಎಂಬುದು ಪ್ರಶ್ನೆ. ವಾಜಪೇಯಿಯಂತಹ ವಾಗ್ಮಿ ಸೋನಿಯರವರು ಬರೆದ ಭಾಷಣವನ್ನು ಓದುತ್ತಾರೆಯೇ, ಸುಷ್ಮಾ ಸ್ವರಾಜ್ ಕನ್ನಡದ ಕೆಲವು ವಾಕ್ಯಗಳನ್ನು ಗಟ್ಟಿಮಾಡಿದ್ದಾರೆಯೇ ಇವಲ್ಲ ಈ ಚುನಾವಣೆಯ ಮುಂದೆ ಇರುವ ಪ್ರಶ್ನೆಗಳು. ಇಂದು ಚರ್ಚಿಸ ಬೇಕಾಗಿರುವುದು ಜನರ ನೆಮ್ಮದಿಯ ಬದುಕಿನ ಬಗ್ಗೆ, ಅದಕ್ಕೆ ಬೇಕಾದ ಕೋಮುಸೌಹಾರ್ದ ಸಾಮರಸ್ಯದ ಬಗ್ಗೆ, ಉದ್ಯೋಗ, ವೇತನ, ಜೀವನ ಮಟ್ಟ, ಬೆಲೆಗಳು, ಸಾಮಾಜಿಕ ದೌರ್ಜನ್ಯಗಳು, ಸಾಂಸ್ಕೃತಿಕ ಪ್ರಶ್ನೆಗಳು ಪರಿಸರನಾಶ ಇವುಗಳ ಬಗ್ಗೆ ಆದ್ದರಿಂದ ವ್ಯಕ್ತಿನಿಷ್ಠ ದೃಷ್ಟಿಕೋನವನ್ನು ತ್ಯಜಿಸಿ ಸಮುದಾಯ ನಿಷ್ಠ ವಿಚಾರಗಳ ಒರೆಗಲ್ಲಿಗೆ ಪಕ್ಷಗಳನ್ನು ತಿಕ್ಕಬೇಕು. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಮಾತ್ರ ಮತ ನೀಡಬೇಕು. (ಈ ಬಗ್ಗೆ ಐಕ್ಯರಂಗದ 24 ನೇ ಸಂಚಿಕೆಯಲ್ಲಿ (ಮೇ.31-ಜೂನ್ 6,1999) ಪ್ರಕಟಿಸಲಾದ ರಾಜಕೀಯ ವರದಿ ವಿಶ್ಲೇಷಣೆಗಳಲ್ಲಿ ವ್ಯಕ್ತಿ ನಿಷ್ಠತೆ-ವಸ್ತು ನಿಷ್ಠತೆ ಎಂಬ ಲೇಖನವನ್ನು ಗಮನಿಸಿ

ಜಾತ್ಯಾತೀತತೆಯ ರಕ್ಷಣೆಗಾಗಿ ತೃತೀಯ ಪರ್ಯಾಯಕ್ಕಾಗಿ ರಾಜ್ಯದಲ್ಲಿ ಸಿಪಿಐ(ಎಂ) - ಜನತಾದಳ (ಜಾತ್ಯಾತೀತ) ಹೊಂದಾಣಿಕೆ

ತತ್ವರಹಿತ, ಅಧಿಕಾರದಾಹಿ ಬಿಜೆಪಿ ಮಿತ್ರಕೂಟದಿಂದ ಕರ್ನಾಟಕದಲ್ಲಿ ಕೋಮು ಸಾಮರಸ್ಯ ಹಾಗೂ ಜಾತ್ಯಾತೀತತೆಯನ್ನು ರಕ್ಷಿಸಲು ಸಿಪಿಐ(ಎಂ) ಮತ್ತು ಜನತಾದಳ (ಜಾತ್ಯಾತೀತ) ಪಕ್ಷಗಳು ಚುನಾವಣೆ ಹೊಂದಾಣಿಕೆ ಮಾಡಿಕೊಂಡಿವೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಹಾಗೂ ಜನತಾದಳ(ಜಾ) ಅಧ್ಯಕ್ಷರಾದ ಸಿದ್ದರಾಮಯ್ಯನವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಾಗೇಪಲ್ಲಿ, ಶಿಡ್ಲಘಟ್ಟ, ಕೆ.ಜಿ.ಎಫ್., ಚಿಂತಾಮಣಿ, ದೇವದುರ್ಗ, ದೊಡ್ಡಬಳ್ಳಾಪುರ ಮತ್ತು ಉಳ್ಳಾಲ ವಿಧಾನಸಭಾ ಕ್ಷೇತ್ರಗಳನ್ನು ಸಿಪಿಐ(ಎಂ) ಗೆ ಬಿಟ್ಟು ಕೊಡಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಲೋಕಸಭಾ ಕ್ಷೇತ್ರದಿಂದ ನಿವೃತ್ತಿ

ಸಿಪಿಐ(ಎಂ) ಸ್ಪರ್ಧಿಸಿರುವ ಇತರ ಕ್ಷೇತ್ರಗಳಾದ ಕಮಲಾಪುರ, ಹೊಸಪೇಟೆ, ವರ್ತೂರು ಕ್ಷೇತ್ರಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ನಿವೃತ್ತಗೊಳಿಸುವ ಬಗ್ಗೆ ಚರ್ಚಿಸಲಾಗುತ್ತಿದೆ ಎಂದು ದಳದ ರಾಜ್ಯಾಧ್ಯಕ್ಷರು ತಿಳಿಸಿದರು.

ರಾಜ್ಯದಲ್ಲೂ ಒಂದು ಪರ್ಯಾಯ ಜಾತ್ಯಾತೀತ ಶಕ್ತಿ ನಿರ್ಮಾಣಕ್ಕಾಗಿ ಜನತಾದಳ(ಜಾ) ಜೊತೆ ಹೊಂದಾಣಿಕೆಯಿಂದಾಗಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ನಮ್ಮ ಅಭ್ಯರ್ಥಿ ಜಿ.ಸಿ.ಬಯ್ಯಾರೆಡ್ಡಿ ನಿವೃತ್ತರಾಗಿದ್ದಾರೆಂದು ಎಸ್.ಸೂರ್ಯನಾರಾಯಣ ರಾವ್ ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ನಮ್ಮ ಅಭ್ಯರ್ಥಿಗಳು ಸ್ಪರ್ಧೆಯಲ್ಲಿರುವ ಕ್ಷೇತ್ರಗಳಲ್ಲಿ ನಿಮ್ಮ ಅಭ್ಯರ್ಥಿಗಳನ್ನು ನಿವೃತ್ತಗೊಳಿಸಬೇಕೆಂದು ಸೂರಿ ಜನತಾದಳ(ಜಾ)ದ ಅಧ್ಯಕ್ಷರನ್ನು ಒತ್ತಾಯಿಸಿದರು.

ಕೇವಲ ಅಧಿಕಾರದ ಆಸೆಗಾಗಿ ಜೆ.ಹೆಚ್.ಪಟೇಲರು ವಾಜಪೇಯಿ ಕುತಂತ್ರಕ್ಕೆ ಬಲಿಯಾಗಿ ದಳ ಇಬ್ಭಾಗವಾಗಲು ಕಾರಣರಾಗಿದ್ದಾರೆ ಎಂದ ಸೂರಿಯವರು, ಎನ್.ಡಿ.ಎ. ಗುಂಪು ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲವೆಂದರು. ಈ ಅನೈತಿಕ ರಾಜಕೀಯ ಹೊಂದಾಣಿಕೆಯನ್ನು ನಮ್ಮ ಜಂಟಿ ರ್‍ಯಾಲಿಯಲ್ಲಿ ಜನತೆಯ ಮುಂದಿಡುತ್ತೇ ವೆಂದ ಸಿಪಿಐ(ಎಂ) ಕಾರ್ಯದರ್ಶಿ ಕಾಂಗ್ರೆಸ್ ಮತ್ತು ಬಿಜೆಪಿ ಆಡಳಿ ನೋಡಿರುವ ಜನತೆ ರಾಜ್ಯ ಅಭಿವೃದ್ಧಿಗಾಗಿ ನಮ್ಮನ್ನು ಬೆಂಬಲಿಸುತ್ತಾ ಎಂದರು.

ಗೊಂದಲದ ಗೂಡಾಗಿರು ಬಿಜೆಪಿ-ಲೋಕಶಕ್ತಿ-ಜನತಾದಳ (ಯು ಗುಂಪನ್ನು ರಾಜ್ಯದ ಜನ ತಿರಸ್ಕರಿಸುವರು ಎಂದ ಸಿದ್ದರಾಮಯ್ಯ ನವರು ಕಾಂಗ್ರೆಸ್ ಪಕ್ಷವು ರಾಜ್ಯ ಜನತೆಗೆ ಹೊಸ ಭರವಸೆ ನೀಡಿಲ್ಲ ಜಾತ್ಯಾತೀತತೆಯಲ್ಲಿ ಅಚಲ ನಂಬಿ ಇಟ್ಟಿರುವ ಜನತಾದಳ-ಸಿಪಿಐ(ಎಂ) ಜನರು ಚುನಾಯಿಸುತ್ತಾರೆಂ ನಂಬಿಕೆಯನ್ನು ಅವರು ವ್ಯಕ್ತಪಡಿಸಿದರು ಪತ್ರಿಕಾಗೋಷ್ಠಿಯಲ್ಲಿ ಜಿ.ಸಿ.ಬಯ್ಯಾರೆ ಸಿ.ನಾರಾಯಣ ಸ್ವಾಮಿ, ಕೆ.ಹೆಚ್ ಶ್ರೀನಿವಾಸ್ ಮತ್ತು ರಾಜ್ಯಸಭ ಸದಸ್ಯರಾದ ಲಕ್ಷ್ಮಿ ಸಾಗರ ಭಾಗವಹಿಸಿದ್ದರು.

1999 ರ ಮಹತ್ವಪೂರ್ಣವಾದ ಸಾರ್ವತ್ರಿಕ ಚುನಾವಣೆಗಳ ಪ್ರಚಾರ ತಾರಕಕ್ಕೇರಿದ್ದು ಈ ಸಂದರ್ಭದಲ್ಲಿ ಚರ್ಚೆಯಲ್ಲಿರುವ ವಿವಿಧ ವಿಷಯಗಳ ಬಗ್ಗೆ ಪ್ರಕಟಿಸಿದ ನಾಲ್ಕು ಪೋಸ್ಟರ್‌ಗಳನ್ನು ಈ ಸಂಚಿಕೆಯ ಪುಟ 12 ರಲ್ಲಿ ಕೊಡಲಾಗಿದೆ.

ಕರ್ನಾಟಕದ ಸಮಗ್ರ, ಸಮಾನ ಅಭಿವೃದ್ಧಿ ಪಥಕ್ಕಾಗಿ..........

ಕರ್ನಾಟಕ ಸಮಗ್ರ, ಸಮಾನ ಅಭಿವೃದ್ಧಿ ಪಥಕ್ಕಾಗಿ, ದುಡಿಯುವ ವರ್ಗದ ಒಗ್ಗಟ್ಟು ಮತ್ತು ಉತ್ತಮ ಬದುಕಿಗಾಗಿ ಹಾಗೂ ಧರ್ಮನಿರಪೇಕ್ಷ ಕರ್ನಾಟಕಕ್ಕಾಗಿ ಮುಂಬರುವ ಚುನಾವಣೆಗಳಲ್ಲಿ ಕೋಮುವಾದಿಗಳ ಕೂಟವನ್ನು ಸೋಲಿಸಿ, ಜಾತ್ಯಾತೀತ-ಜನತಾದಳಕ್ಕೆ ಬೆಂಬಲ ನೀಡಿ, ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಿ ಹಾಗೂ ದುಡಿಯುವ ಜನತೆಯ ಪಕ್ಷವಾದ ಸಿಪಿಐ(ಎಂ) ಗೆ ಮತ ನೀಡಿ ಎಡ ಪಕ್ಷಗಳ ಬಲ ಹೆಚ್ಚಿಸಿ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ. ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳ ಸಂದರ್ಭದಲ್ಲಿ ಬಿಡುಗಡೆ ಮಾಡಿದ ಮನವಿಯಲ್ಲಿ ಈ ಕರೆ ನೀಡಿದೆ.

ಇಡೀ ದೇಶದಲ್ಲಿ ಲೋಕಸಭಾ ಚುನಾವಣೆಗಳು ನಡೆಯುತ್ತಿರುವುದರ ಜೊತೆಗೇ ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗಳೂ ನಡೆಯಲಿವೆ. ಭಾರತದ ಇತಿಹಾಸದ ಪ್ರಮುಖ ತಿರುವಿನಲ್ಲಿ ಬರುತ್ತಿರುವ ಈ ಚುನಾವಣೆಗಳಲ್ಲಿ ಮತದಾರರು ಹೆಚ್ಚಿನ ಹೊಣೆಗಾರಿಕೆಯಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗಿದೆ.

"ಕರ್ನಾಟಕದ ಸಮಗ್ರ, ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕುವ ಸಮಾನ, ಜನಪರ ಅಭಿವೃದ್ಧಿ ಸಾಧಿಸಬೇಕಾದರೆ ರಾಜಕೀಯ, ಆಡಳಿತ ವ್ಯವಹಾರಗಳಲ್ಲಿ ಪರಧರ್ಮ ದ್ವೇಷ, ಕೋಮುದಂಗೆಗಳಿಲ್ಲದ ಧರ್ಮ ನಿರಪೇಕ್ಷ (ಜಾತ್ಯಾತೀತ) ಕರ್ನಾಟಕವಾಗಿ ಉಳಿಯಬೇಕು. ಕರ್ನಾಟಕದ ಬೆಳವಣಿಗೆಗೆ ಅದೇ ಅಸ್ತಿವಾರ"

ಎಂದು ಹೇಳಿರುವ ಸಿಪಿಐ(ಎಂ) ಮನವಿ ಮುಂದುವರಿದು

"ಇತ್ತೀಚಿನ ವರ್ಷಗಳಲ್ಲಿ ರಾಮಜ್ಯೋತಿ ಯಾತ್ರೆ, ಪಾದುಕಾಯಾತ್ರೆ, ಅವುಗಳ ಹಿಂದೆಯೇ ರಾಜ್ಯದಲ್ಲೆಲ್ಲಾ ಕೋಮುದಂಗೆಗಳು, ಸಾವು ನೋವುಗಳು, ವರ್ಷಗಟ್ಟಲೆ ಹುಬ್ಬಳ್ಳಿ-ಧಾರವಾಡದ ಜನತೆಯನ್ನು ಕರ್ಫ್ಯೂ, ಗೃಹಬಂಧನಗಳಿಗೆ ಗುರಿಮಾಡಿದ ಈದ್ಗಾ ವಿವಾದ, ಭಟ್ಕಳದಲ್ಲಿ ನಿರಂತರ ಕೋಮು ಗಲಭೆಗಳು, ಇತ್ತೀಚೆಗೆ ಪುತ್ತೂರು, ಸುಳ್ಯ, ಕುಂದಾಪುರ, ಸುರತ್ಕಲ್‌ಗಳಲ್ಲಿ ಗಲಭೆಗಳ ಮೂಲಕ ಧರ್ಮಾಂಧ ಶಕ್ತಿಗಳು ಪ್ರಬಲವಾಗುತ್ತಿವೆ. ರಾಜ್ಯದಲ್ಲಿ ಅಧಿಕಾರ ಹಿಡಿಯುವ ಆತುರದಲ್ಲಿವೆ.

ಕೇಂದ್ರ ಸರ್ಕಾರದಲ್ಲಿ ತಮ್ಮ ಆಡಳಿತ ದೇಶಾದ್ಯಂತ ಜನರಲ್ಲಿ ಅಸಮಧಾನದ ಹೊಗೆ ಮೂಡಿಸಿದಾಗ ಬಾಬಾಬುಡನ್‌ಗಿರಿ ಜಾಥಾವನ್ನು ಹಿಂದೂ-ಮುಸ್ಲಿಮ್ ಜನರಿಬ್ಬರೂ ಆರಾಧಿಸುವ ನಾಲು ಕ್ಷೇತ್ರಗಳಿಂದ ಆರಂಭಿಸಲಾಯಿತು. ಇಡೀ ರಾಜ್ಯವನ್ನು ಕೋಮುದಳ್ಳುರಿಯಲ್ಲಿ ಸುಡುವ ಈ ದುಷ್ಟ ಯೋಜನೆಯ ರಾಕ್ಷಸೀ ತಂತ್ರವನ್ನರಿತ ಕರ್ನಾಟಕದ ಜನತೆ ತಿರಸ್ಕರಿಸಿದ್ದಾರೆ. ನಂತರ ಸಮೃದ್ಧ ಕರ್ನಾಟಕವೆಂಬ ಹೊಸ ನಾಟಕದ ಮೂಲಕ ಕರ್ನಾಟಕದ ಜನರ ಕಣ್ಣಿಗೆ ಮಣ್ಣೆರಚಲು ತಮ್ಮ ಕೋಮುವಾದಿ ಹಿಂಸಾತ್ಮಕ ರೂಪವನ್ನು ಮರೆಮಾಚಲು ಬಿಜೆಪಿ ಪ್ರಯತ್ನ ನಡೆಸಿದ"

ಎಂದು ನೆನಪಿಸಿದೆ.

ಭಯದ ಕಡಲಲ್ಲಿ ಹಸಿವಿನ ದವಡೆಯಲ್ಲಿ

ಆರೆಸ್ಸೆಸ್ ನೇತೃತ್ವದ ವಿಶ್ವ ಹಿಂದು ಪರಿಷತ್, ಭಜರಂಗದಳ, ಹಿಂದೂ ಜಾಗರಣ ವೇದಿಕೆಯಂತಹ ದುಷ್ಟ ಪರಿವಾರ ಹೊಂದಿರುವ ಕ್ರೂರ ಕೋಮುವಾದಿ ಬಿಜೆಪಿಯನ್ನು ರಾಜ್ಯದಲ್ಲಿ ಅಧಿಕಾರಕ್ಕೇರದಂತೆ, ರಾಷ್ಟ್ರಮಟ್ಟದ ಬಿಜೆಪಿ ಆಡಳಿತಕ್ಕೆ ಕರ್ನಾಟಕ ಒಂದು ನೆಲೆಯಾಗದಂತೆ, ಕರ್ನಾಟಕದ ಜನತೆ ಬಿಜೆಪಿಯನ್ನು, ಅದರ ಮಿತ್ರಕೂಟವನ್ನು ತಿರಸ್ಕರಿಸಬೇಕು. ಕರ್ನಾಟಕವನ್ನು ಧರ್ಮನಿರಪೇಕ್ಷವಾಗಿ ಉಳಿಸಿಕೊಳ್ಳಬೇಕು.

ಭಯ್, ಭೂಕ್ (ಹಸಿವು) ಮತ್ತು ಭ್ರಷ್ಟಾಚಾರದಿಂದ ಬಿಡುಗಡೆ ಹಾಗೂ ಸ್ವದೇಶಿ ಘೋಷಣೆಯ ಮೇಲೆ ಅಧಿಕಾರಕ್ಕೆ ಬಂದ ಬಿಜೆಪಿ ಕೂಟ ಅಲ್ಪಸಂಖ್ಯಾತರನ್ನು ಮತ್ತೆ ಭಯದ ಕಡಲಲ್ಲಿ ಅದ್ದಿದ್ದನ್ನು ನಾವು ನೋಡಿದ್ದೇವೆ. ಬಿಜೆಪಿಯ ಆಡಳಿತದಲ್ಲಿ ಐ.ಎಂ.ಎಫ್, ವಿಶ್ವಬ್ಯಾಂಕ್ ಹಾಗೂ ವಿಶ್ವವಾಣಿಜ್ಯ ಸಂಸ್ಥೆಗಳ ಒತ್ತಡಕ್ಕೆ ಮತ್ತಷ್ಟು ಮಣಿದು ಹೊಸ ಆರ್ಥಿಕ ನೀತಿಗಳನ್ನು ಇನ್ನಷ್ಟು ರಭಸವಾಗಿ ಕಾರ್ಯಗತ ಮಾಡಿದೆ. 1600ಕ್ಕೂ ಹೆಚ್ಚು ವಸ್ತುಗಳನ್ನು ದೇಶದೊಳಕ್ಕೆ ಮುಕ್ತವಾಗಿ ಬಿಡಲಾಗಿದೆ. ಇದರಿಂದ ಕೃಷಿ, ಕೈಗಾರಿಕೆಗಳೆರಡೂ ನಾಶವಾಗುತ್ತಿವೆ.

ಸಕ್ಕರೆ, ಬೇಳೆ, ಅಡಿಗೆ ಎಣ್ಣೆ, ಹಾಲಿನ ಪುಡಿ, ಹಣ್ಣು-ತರಕಾರಿ, ಸಿದ್ಧ ಆಹಾರ ವಸ್ತುಗಳ ಆಮದಿನಿಂದ ಭಾದೆಗೊಳಗಾದ 2000ಕ್ಕೂ ಹೆಚ್ಚು ರೈತರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಪಂಜಾಬ್, ಹರಿಯಾಣಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಸಿರಾದಲ್ಲಿ ಗುಂಡಿಗೆ ಬಲಿಯಾಗಿದ್ದಾರೆ. ಕೋಟ್ಯಾಂತರ ಜನರು ಬಡತನ, ಹಸಿವುಗಳ ದವಡೆಗೆ ನೂಕಲ್ಪಟ್ಟಿದ್ದಾರೆ. ಬೆಂಗಳೂರು ಮತ್ತು ಕರ್ನಾಟಕದ ಇತರೆಡೆಗಳಲ್ಲಿನ ಸಾರ್ವಜನಿಕ ಉದ್ಯಮಗಳು ವಿನಾಶದ ಅಂಚಿನಲ್ಲಿವೆ.

"ಈ ಚುನಾವಣೆಗಳು ದೇಶದಲ್ಲಿ ಕೋಮುವಾದ ಮತ್ತು ಜಾತ್ಯಾತೀತತೆ ನಡುವಣ ಸಮರವಾಗಿದೆ" ಎನ್ನುತ್ತಾ ***ಸಿಪಿಐ(ಎಂ) ಮನವಿ ದೇಶವನ್ನು, ರಾಜ್ಯವನ್ನು ಜಾತ್ಯಾತೀತವಾಗಿ ಉಳಿಸಿಕೊಳ್ಳಲು ಪಣ ತೊಡಬೇಕಾಗಿದೆ"*** ಎಂದು ಹೇಳಿದೆ.

ಬಿಜೆಪಿಯ ಸಮರ್ಥಕರಾಗಿ ಕ್ರಿಶ್ಚಿಯನ್ನರ ಮೇಲೆ ನಿರಂತರ ಧಾಳಿ ಕೊನೆಗೆ ಸ್ಟೈನ್ಸ್ ಮತ್ತು ಇಬ್ಬರು ಮಕ್ಕಳನ್ನು ಹಾಡುಹಗಲೇ ಜೀವಂತ ಸುಟ್ಟದ್ದನ್ನೂ ಬೆಂಬಲಿಸಿದ ರಾಮಕೃಷ್ಣ ಹೆಗ್ಗಡೆ- ಜಾರ್ಜ್ ಫರ್ನಾಂಡಿಸ್, ವಾಜಪೇಯಿಯವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಜಾತ್ಯಾತೀತ ರಾಜಕೀಯದ ಪ್ರಬಲ ಶಕ್ತಿಯಾದ ಜನತಾದಳವನ್ನು ಒಡೆಯಲು, ಕೋಮುವಾದಿ ಕೂಟವನ್ನು ಬಲಪಡಿಸಲು ಸಂಚು ಮಾಡಿದ್ದಾರೆ. ಈ ತ್ರಿಮೂರ್ತಿಗಳ ದುಷ್ಟ ಕೂಟದ ಸಂಚನ್ನು ಕರ್ನಾಟಕದ ಜನತೆ ಸೋಲಿಸಬೇಕು. ಹಿಂದಿನ ದಿನ ಬಿಜೆಪಿಯನ್ನು ಕ್ಯಾನ್ಸರ್ ಎಂದು ದೂಷಿಸಿ ಮರುದಿನ ಅದನ್ನಪ್ಪಿಕೊಂಡ ಜೆ.ಹೆಚ್. ಪಟೇಲ್ ಕೂಟ, ಧರ್ಮ ನಿರಪೇಕ್ಷ ತತ್ವಕ್ಕೆ ಬಗೆದ ದ್ರೋಹಕ್ಕೆ ಕರ್ನಾಟಕದ ಜನತೆ ತಕ್ಕ ಶಿಕ್ಷೆ ನೀಡಬೇಕು.

ಇತರ ರಾಜಕೀಯ ಶಕ್ತಿಗಳ ಬಗ್ಗೆ ಹೇಳುತ್ತಾ ಕರ್ನಾಟಕದಲ್ಲಿ ಹಾಗೂ ದೇಶದಲ್ಲಿ ಬಿಜೆಪಿಯ ಬೆಳವಣಿಗೆಗೆ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳು, ಭ್ರಷ್ಟಾಚಾರಗಳೇ ಕಾರಣವಾಗಿದೆ. ಇಂದಿಗೂ ಕೂಡ ಕಾಂಗ್ರೆಸ್ ಈ ಜನವಿರೋಧಿ ಆರ್ಥಿಕ ನೀತಿಗಳನ್ನು ಕೈ ಬಿಟ್ಟಿಲ್ಲ ಎಂಬುದನ್ನು ಕರ್ನಾಟಕದ ಜನತೆ ಪರಿಗಣಿಸಬೇಕು ಎಂದು ಸಿಪಿಐ(ಎಂ) ಹೇಳಿದೆ. .

ಜನತಾದಳದ ಪ್ರಮುಖ ಆಧಾರ ನೆಲೆ ಧರ್ಮನಿರಪೇಕ್ಷವಾಗಿ ಉಳಿದಿರುವುದು ಹಾಗು ಜನತಾದಳ (ಜಾತ್ಯಾತೀತ) ಪಕ್ಷವು ಬಿಜೆಪಿಯನ್ನು ತಿರಸ್ಕರಿಸಲು, ಕಾಂಗ್ರೆಸ್‌ನಿಂದ ದೂರ ಉಳಿಯಲು ತೀರ್ಮಾನಿಸಿರುವುದು ಆರೋಗ್ಯಕರ ಬೆಳವಣಿಗೆ. ಕರ್ನಾಟಕದ ರಾಜಕೀಯದಲ್ಲಿ ಧರ್ಮನಿರಪೇಕ್ಷತೆ ಪ್ರಧಾನವಾಗಿ ಉಳಿಯಲು ಎಲ್ಲಾ ಪ್ರಗತಿಪರರು ಜಾತ್ಯಾತೀತ ಎಡಶಕ್ತಿಗಳು, ಜನತಾದಳ (ಜಾತ್ಯಾತೀತ)ವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಲಾಗಿದೆ.

ಹೊಸ ಆರ್ಥಿಕ ನೀತಿಗಳನ್ನು ನಿರಾಕರಿಸಿದಾಗ ಮಾತ್ರವೇ

ಆದರೆ, ಕರ್ನಾಟಕದ ಸಮಗ್ರ ಅಭಿವೃದ್ಧಿ ಸಾಧ್ಯವಾಗುವುದು ರಾಜ್ಯದ ದುಡಿಯುವ ಜನರಿಗೆ ಉದ್ಯೋಗ, ಜೀವನ ನಿರ್ವಹಿಸಬಹುದಾದಷ್ಟು ವರಮಾನ ಖಾತರಿಗೊಳಿಸುವುದರಿಂದ ಮಾತ್ರವೇ ಎಂದೂ ಸಿಪಿಐ(ಎಂ) ಮನವಿ ಎಚ್ಚರಿಸಿದೆ. ವಿದೇಶಿ ಬಂಡವಾಳಗಾರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನು ಒತ್ತೆಯಿಡುವ ಐ.ಎಂ.ಎಫ್, ವಿಶ್ವಬ್ಯಾಂಕ್, ವಿಶ್ವವಾಣಿಜ್ಯ ಸಂಸ್ಥೆಯ ಗುಲಾಮಗಿರಿ ಮಾಡುವ, ದೇಶದ ಕೈಗಾರಿಕೆಗಳನ್ನು, ಕೃಷಿಯನ್ನು ನಾಶಮಾಡುವ ಆ ಮೂಲಕ ಕಾರ್ಮಿಕರಿಗೆ ಉದ್ಯೋಗವಿಲ್ಲದಂತೆ, ರೈತರನ್ನು ಆತ್ಮಹತ್ಯೆಮಾಡಿಕೊಳ್ಳುವಂತೆ, ಎಲ್ಲರನ್ನೂ ಹೆಚ್ಚು ಬಡವರನ್ನಾಗಿ ಮಾಡುವ ಬೆಲೆ ಏರಿಕೆಯ ಇಕ್ಕಳದಲ್ಲಿ ಸಿಕ್ಕಿ ಹಾಕಿಸಿರುವ ಹೊಸ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ನಿರಾಕರಿಸುವುದರಿಂದ ಮಾತ್ರವೇ ಹಾಗೂ ಜನಪರ ಬದಲೀ ಆರ್ಥಿಕನೀತಿಗಳನ್ನು ಅನುಸರಿಸುವುದರಿಂದ ಮಾತ್ರವೇ ದುಡಿಯುವ ಜನರ ಜೀವನ ಉತ್ತಮವಾಗಲು ಸಾಧ್ಯ.

ಸಿ.ಪಿ.ಐ(ಎಂ) ನೇತೃತ್ವದ ಪ. ಬಂಗಾಳ ಎಡರಂಗ ಸರ್ಕಾರ 22 ವರ್ಷಗಳ ಕಾಲ ಆಡಳಿತ ನಡೆಸಿ ಜಾಗತಿಕ ದಾಖಲೆ ನಿರ್ಮಿಸಿರುವುದು ದೇಶದ ರಾಜಕೀಯದಲ್ಲಿ ಅಸ್ಥಿರತೆ ಭ್ರಷ್ಟಾಚಾರ ತಾಂಡವವಾಡುತ್ತಿದ್ದರೂ ಸಮ್ಮಿಶ್ರ ಸರ್ಕಾರಗಳು ಉರುಳಿ ಮತ್ತೆ ಮತ್ತೆ ಚುನಾವಣೆಗಳು ನಡೆಯುತ್ತಿದ್ದರೂ ಅಲ್ಲಿ ಸ್ಥಿರತೆ ನೆಲಸಿರುವುದು-ಸಮ್ಮಿಶ್ರ ಸರ್ಕಾರ ಯಶಸ್ವಿ ಯಾಗಿರುವುದು-ಜನಪರ ಪರ್ಯಾಯ ಆರ್ಥಿಕ, ಸಾಮಾಜಿಕ ನೀತಿಗಳ ಬಲದಿಂದ. ಕೇರಳ, ತ್ರಿಪುರಗಳಲ್ಲಿಯ ಸರ್ಕಾರಗಳೂ ಕೂಡ ತಮ್ಮ ಜನರೂಪಿತ ಯೋಜನೆಗಳ ಚಳುವಳಿಯಿಂದ, ಗಿರಿಜನರ ಅಭಿವೃದ್ಧಿ, ಭಯೋತ್ಪಾದಕತೆಯ ವಿರುದ್ಧ ಪ್ರಬಲ ಹೋರಾಟದಿಂದ ಪ್ರಸಿದ್ಧವಾಗಿವೆ. ಇಂತಹ ಸಮಗ್ರ ಜನಪರ ಅಭಿವೃದ್ಧಿಯನ್ನು ಯಾವುದೇ ರಾಜ್ಯದಲ್ಲಿ ಬಿಜೆಪಿ, ಕಾಂಗ್ರೆ ಪಕ್ಷಗಳು ಇತರ ಯಾವುದೇ ಪಕ್ಷಗಳು ನೀಡಲು ಸಾಧ್ಯವಾಗಿಲ್ಲ. ಇಂತಹ ದುಡಿವ ಜನಪರ, ಸಮಗ್ರ ಅಭಿವೃದ್ಧಿ ಪಥದ ಹರಿಕಾರ, ದೃಢ ಧರ್ಮ ನಿರಪೇಕ್ಷ ಪಕ್ಷವಾದ ಸಿ.ಪಿ.ಐ(ಎಂ) ನಿಂದ ಕರ್ನಾಟಕದ ಅಭಿವೃದ್ಧಿ ಸಾಧ್ಯ.

ರಾಜ್ಯದಲ್ಲಿ ಸಿಪಿಐ(ಎಂ)

ಕರ್ನಾಟಕದಲ್ಲಿ ಸಿಪಿಐ(ಎಂ) ಅತ್ಯಂತ ಬಡವರಾದ ಬೀಡಿ, ಹೆಂಚು, ಊದುಬತ್ತಿ, ಹೋಟೆಲ್, ಸಣ್ಣ ಕೈಗಾರಿಕೆಗಳು ಮೊದಲಾದ ಅಸಂಘಟಿತ ಕಾರ್ಮಿಕರ ಜೀವನಮಟ್ಟ ಉತ್ತಮಪಡಿಸಲು, ಸಾರ್ವಜನಿಕ ಉದ್ಯಮಗಳನ್ನು ರಕ್ಷಿಸಲು, ದುರ್ಬಲವರ್ಗದವರು ಸಮಾಜದಲ್ಲಿ ತಲೆ ಎತ್ತಿನಿಲ್ಲುವಂತಹ ಜೀವನದ ಮಟ್ಟ ಪಡೆಯಲು ಶ್ರಮಿಸಿದೆ. ಕರ್ನಾಟಕದ ಚರಿತ್ರೆಯಲ್ಲಿ ನಮೂದಿಸಬಹುದಾದ ಧೀಮಂತ ಹೋರಾಟಗಳನ್ನು ನಡೆಸಿದೆ.


ಗ್ರಾಮಾಂತರ ಪ್ರದೇಶಗಳಲ್ಲಿ ರೈತರನ್ನು ಕೃಷಿಕೂಲಿಕಾರರನ್ನು ಸಂಘಟಿಸಲು ಶ್ರಮಿಸಿದ ಮೊದಲ ಪಕ್ಷ ಸಿಪಿಐ(ಎಂ). ರಾಜ್ಯದ ಚರಿತ್ರೆಯಲ್ಲಿ ಹೆಸರಾದ ದಕ್ಷಿಣ ಕನ್ನಡ, ಕೋಲಾರ ಜಿಲ್ಲೆಗಳ ಭೂ ಹೋರಾಟ, ನರಗುಂದ-ನವಲಗುಂದ ರೈತರ ಧೀಮಂತ ಹೋರಾಟಕ್ಕೆ ನೇತೃತ್ವ ನೀಡಿದೆ. ಭೂಸುಧಾರಣೆಗಾಗಿ, ಸರ್ಕಾರಿ ಭೂಮಿ ವಿತರಣೆಗಾಗಿ, ಲಾಭದಾಯಕ ಬೆಲೆಗಳಿಗಾಗಿ, ನೀರಾವರಿಗಾಗಿ, ಕೃಷಿ ಕೂಲಿಕಾರರಿಗೆ ವಸತಿ, ಪಡಿತರ ವ್ಯವಸ್ಥೆ, ಕೂಲಿಗಳಿಗಾಗಿ ಹೋರಾಟ ನಡೆಸಿದೆ. ವಿದ್ಯಾರ್ಥಿ, ಯುವಜನ, ಮಹಿಳೆಯರನ್ನು ಸಂಘಟಿಸಿ ಅವರ ಸಮಸ್ಯೆಗಳಿಗಾಗಿ ಗ್ರಾಮಗಳ, ನಗರಗಳ ವಿವಿಧ ಪ್ರದೇಶಗಳ ಅಭಿವೃದ್ಧಿಗಾಗಿ ಹೋರಾಡಿದೆ.

*"ದೃಢವಾದ ನಿಷ್ಠೆ, ಪ್ರಾಮಾಣಿಕತೆಯಿಂದ, ತ್ಯಾಗಜೀವಿಗಳಾಗಿ ದುಡಿಯುತ್ತಿರುವ ಕಾರ್ಯಕರ್ತರು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜನಕೆ ಅಚ್ಚುಮೆಚ್ಚಿನವರಾಗಿದ್ದಾರೆ. 1983, 85ರಲ್ಲಿ ರಾಜ್ಯದ ಹಲವು ಕ್ಷೇತ್ರಗಳು, 1994ರಲ್ಲಿ ಬಾಗೇಪಲ್ಲಿಯಿಂದ ಗೆದ್ದಿರುವ ಸಿಪಿಐ(ಎಂ) ಶಾಸಕರು ಇಡೀ ರಾಜ್ಯದ ದುಡಿಯುವ ಜನರ ದನಿಯಾಗಿದ್ದಾರೆ. 5 ದಶಕದಿಂದ ರಾಜ್ಯದಲ್ಲಿ ಜನರಿಗಾಗಿ, ಶೋಷಣೆಯ ವಿರುದ್ಧ, ಕೋಮುವಾದದ ವಿರುದ್ಧ ದೃಢ ಹೋರಾಟ ನಡೆಸಿರುವ ಸಿಪಿಐ(ಎಂ) ಅನ್ನು ಆರಿಸಿ ಜನರ ಧ್ವನಿ ವಿಧಾನ **ಸೌಧದಲ್ಲಿ ಹೆಚ್ಚಿನ ಶಕ್ತಿಯಿಂದ ಮೊಳಗುವಂತೆ ಜನ ಮತನೀಡಬೇಕು**"*

ಎಂದು ಸಿಪಿಐ(ಎಂ) ಮನವಿ ವಿನಂತಿಸಿಕೊಂಡಿದೆ.

1999ರ ಚುನಾವಣೆಗಳಲ್ಲಿ ಜನರಿಗೆ ಸಿಪಿಐ(ಎಂ) ಭರವಸೆಗಳು


- ★ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ, ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕುವ ಅಭಿವೃದ್ಧಿಯ ಪರ್ಯಾಯ ಪಥ.
- ★ ಬಂಡವಾಳ ಶಾಹಿಗಳು, ಗ್ರಾಮೀಣ ಶ್ರೀಮಂತರ ಪರವಾದ ಭ್ರಷ್ಟಾಚಾರವನ್ನು ಬೆಳೆಸುವ ನೀತಿಗಳಿಗೆ ಬದಲಾಗಿ ದುಡಿಯುವ ಜನಪರ ಅಭಿವೃದ್ಧಿ.
- ★ ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ, ರಾಜಕೀಯ, ಕಾನೂನು ಅಧಿಕಾರಕ್ಕಾಗಿ, ಆ ಮೂಲಕ ರಾಜ್ಯದ ಅಭಿವೃದ್ಧಿ ಅವಕಾಶ ವಿಸ್ತರಣೆ.
- ★ ನಿಜವಾದ ಹಾಗೂ ತೀವ್ರ ಭೂ ಸುಧಾರಣೆ, ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ರೇಶನ್ ಮೂಲಕ ಅಗ್ಗದ ದರದಲ್ಲಿ ಅಗತ್ಯ ವಸ್ತುಗಳನ್ನು ನೀಡುವುದು. ಆ ಮೂಲಕ ಬಡವರಿಗೆ ಭೂಮಿ ವಿತರಣೆ ಹಾಗೂ ಸರ್ಕಾರಿ ಭೂಮಿ ಹಂಚಿಕೆ.
- ★ ಕೃಷಿ ಕೂಲಿಕಾರರಿಗೆ ಅಖಿಲ ಭಾರತ ಮಟ್ಟದ, ರಾಜ್ಯಮಟ್ಟದ ಕಾನೂನು. ಅಗತ್ಯ ಆಧಾರಿತ ಕೂಲಿ, ಉದ್ಯೋಗ ಹೆಚ್ಚಳ, ವಸತಿ, ಆಹಾರ, ಆರೋಗ್ಯ, ಶಿಕ್ಷಣ ಸೌಲಭ್ಯ.
- ★ ರಾಜ್ಯದ ಸಾರ್ವಜನಿಕ ಉದ್ಯಮಗಳ ರಕ್ಷಣೆ, ಬೆಳವಣಿಗೆ.
- ★ ಕಾರ್ಮಿಕರಿಗೆ ಉದ್ಯೋಗ ರಕ್ಷಣೆ, ಉತ್ತಮ ಜೀವನ ಮಟ್ಟ ನೀಡುವ ವೇತನ.
- ★ ನೀರಾವರಿ ವಿಸ್ತರಣೆಗಾಗಿ, ನೀರಾವರಿ ಯೋಜನೆಗಳನ್ನೆಲ್ಲಾ ಪೂರ್ಣಗೊಳಿಸುವುದಕ್ಕಾಗಿ ಮತ್ತು ನೀರಾವರಿ ಭ್ರಷ್ಟಾಚಾರದ ವಿರುದ್ಧ.
- ★ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ, ವರದಕ್ಷಿಣೆ ಪದ್ಧತಿ, ಬಾಲ್ಯವಿವಾಹ, ದೇವದಾಸಿ ಪದ್ಧತಿ ವಿರುದ್ಧ ಹೋರಾಟ.
- ★ ಉದ್ಯೋಗವನ್ನು ಮೂಲಭೂತ ಹಕ್ಕಾಗಿ ಮಾಡಬೇಕು, ಉದ್ಯೋಗಗಳ ನಿರ್ಮಾಣ ಮಾಡುವ ಪರ್ಯಾಯ ಆರ್ಥಿಕ ನೀತಿ ಬೇಕು, ನೇಮಕಾತಿಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಭ್ರಷ್ಟಾಚಾರದ ವಿರುದ್ಧ ಹೋರಾಟ. ಕ್ರೀಡೆ ಮತ್ತು ಸಾಂಸ್ಕೃತಿಕ ಬೆಳವಣಿಗೆ.
- ★ ಶಿಕ್ಷಣದ ಕೋಮುವಾದೀಕರಣದ ವಿರುದ್ಧ, ಅವಶ್ಯಕ ಸೌಲಭ್ಯಗಳ ವಿಸ್ತಾರ, ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹೋರಾಟ, ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳು ಮೊದಲಾದ ಸೌಲಭ್ಯ ವಿಸ್ತರಣೆಗಾಗಿ ಹೆಚ್ಚು ಹಣ.
- ★ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು. ಜಾತ್ಯಾತೀತ ಹಾಗೂ ಪ್ರಗತಿಪರ ಮೌಲ್ಯಗಳಿಗೆ ಒತ್ತು ನೀಡುವ ಸಾಂಸ್ಕೃತಿಕ ಬೆಳವಣಿಗೆಗೆ ಉತ್ತೇಜನ.
- ★ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಟ.
- ★ ಅಸಂಘಟಿತ ಕಾರ್ಮಿಕರಿಗೆ ಜೀವನಕ್ಕೆ ಅವಶ್ಯಕವಾದ ವೇತನ, ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯುವುದು.
- ★ ಶ್ರಮ ಜೀವಿಗಳ ಶಾಂತಿಯುತ ಹೋರಾಟದಲ್ಲಿ ಪೊಲೀಸರ ಹಸ್ತಕ್ಷೇಪ ನಿಷೇಧ.
- ★ ಸಣ್ಣ ಉದ್ದಿಮೆದಾರರಿಗೆ ಮಾರುಕಟ್ಟೆ ಮತ್ತು ಸಾಲ ಸೌಲಭ್ಯ.
- ★ ವಸತಿ ಸೌಕರ್ಯವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಬೇಕು. ಗ್ರಾಮೀಣ ಮತ್ತು ನಗರದ ಬಡವರಿಗೆ ವಸತಿ ಯೋಜನೆಯನ್ನು ತೀವ್ರಗೊಳಿಸುವುದು.
- ★ ದುಡಿಯುವ ಜನರಿಗೆ ನಿವೃತ್ತಿ ವೇತನವನ್ನು ಮೂರನೇ ಸವಲತ್ತಾಗಿ ನೀಡುವುದು.
- ★ ರಾಜ್ಯದ ಬಜೆಟ್ಟಿನಲ್ಲಿ ಶಿಕ್ಷಣಕ್ಕಾಗಿ ಶೇ. 20 ರಷ್ಟು ಹಣ.
- ★ ಅಲ್ಪಸಂಖ್ಯಾತರಿಗೆ ಸಮಾನ ಹಕ್ಕುಗಳು, ಅವರ ಆರ್ಥಿಕ, ಸಾಮಾಜಿಕ ಹಿಂದುಳಿಯುವಿಕೆಯನ್ನು ನಿರ್ಮೂಲನ ಮಾಡಲು ವಿಶೇಷ ಕ್ರಮಗಳು, ಉರ್ದು ಭಾಷೆಗೆ ಉತ್ತೇಜನ ಮತ್ತು ರಕ್ಷಣೆ.



ಆಗಸ್ಟ 28 ರಂದು ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಈ ಮನವಿಯನ್ನು ಬಿಡುಗಡೆ ಮಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಮತ್ತು ಎಸ್.ವೈ.ಗುರುಶಾಂತ್ ಹಾಜರಿದ್ದರು.



ಚುನಾವಣೆ-99



ಕಾರ್ಗಿಲ್.... ಕಾರ್ಗಿಲ್



ಕಾರ್ಗಿಲ್ ಪ್ರಶ್ನೆ ಸಂಬಂಧ ಪಟ್ಟಂತೆ ಸಶಸ್ತ್ರ ಪಡೆಗಳನ್ನು ಚುನಾವಣಾ ಉದ್ದೇಶಗಳಿಗೆ ದುರು ಪಯೋಗಪಡಿಸುವುದನ್ನು ತಡೆಯಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಗಳು ಭಾರತೀಯ ಸೇನಾಪಡೆಗಳ ಮಹಾ ದಂಡನಾಯಕ ರಾದ ರಾಷ್ಟ್ರಪತಿಗಳಿಗೆ ಹಾಗೂ ಚುನಾವಣಾ ಆಯೋಗಕ್ಕೆ ಬರೆದದ್ದು, ನಂತರ ಚುನಾವಣಾ ಆಯೋಗ ಸಾರ್ವತ್ರಿಕ ಚುನಾವಣೆ ಗಳ ಪ್ರಚಾರ ವೇಳೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳ ತಟಸ್ಥತೆಯನ್ನು ಕೆಡಿಸುವ ಯಾವುದೇ ಕೆಲಸ ಮಾಡಬಾರದು ಎಂದು ನಿರ್ದೇಶನ ನೀಡಿದ್ದರ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ.

ಬಿಜೆಪಿ ಈ ನಿರ್ದೇಶನವನ್ನು ಉಲ್ಲಂಘಿಸುವ ಭಂಡತನವನ್ನು **ಆಗಸ್ಟ್** 20 ರಂದು ಪ್ರದರ್ಶಿಸಿತು - ಸ್ವತಃ ಪ್ರಧಾನಮಂತ್ರಿಗಳ ಸಮ್ಮುಖವೇ!

ಹರ‍್ಯಾಣದ ಕರ್ನಾಲ್‌ನಲ್ಲಿ ಪ್ರಧಾನಮಂತ್ರಿಗಳು ಮಾತನಾಡಿದ ಒಂದು ಬಿಜೆಪಿ- ಐಎನ್‌ಎಲ್‌ಡಿ ಚುನಾವಣಾ ಸಭೆಯ ಹಿನ್ನೆಲೆಯ ಪರದೆಯಲ್ಲಿ ನಮ್ಮ ಮೂರು ಸೇನಾಪಡೆಗಳ ಸೇನಾಧಿಪತಿಗಳ ಚಿತ್ರಗಳನ್ನು ಬಳಸಲಾಗಿತ್ತು. ರೋಹ್ತಕ್‌ನಲ್ಲೂ ಇಂತಹ ಪರದೆಯಿತ್ತು.

ಈ ಬಗ್ಗೆ ದೇಶದೆಲ್ಲೆಡೆ ವ್ಯಾಪಕ ಆಕ್ರೋಶ ವ್ಯಕ್ತಗೊಂಡಿತು. ಈ ನೀತಿಸಂಹಿತೆಯ ನಗ್ನ ಉಲ್ಲಂಘನೆಯ ವಿರುದ್ಧ ಕಟುವಾದ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಚುನಾವಣಾ ಆಯೋಗವನ್ನು, ಸೇನಾಪಡೆ ಗಳ ಸಮಗ್ರತೆಯನ್ನು ಉಳಿಸಿಕೊಳ್ಳುವ ದೃಢ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರಪತಿಗಳಿಗೆ ಮನವಿ ಮಾಡಿತು.

ದೇಶವ್ಯಾಪಿ ಆಕ್ರೋಶದಿಂದ, ಆಯೋಗದ ಕ್ರಮ ಬರಬಹುದೆಂಬ ಹೆದರಿಕೆಯಿಂದ ಬಿಜೆಪಿ ವಕ್ತಾರ ಮೋದಿಯವರು 'ತಪ್ಪಾಯಿತು' ಎಂಬ ಹೇಳಿಕೆ ನೀಡಿದ್ದರಿಂದ ಈ ವಿವಾದವನ್ನು ಇಲ್ಲಿಗೇ ಮುಗಿಸುವುದಾಗಿ ನಂತರ ಚುನಾವಣಾ ಆಯುಕ್ತರು ತಿಳಿಸಿದರು.

'ಪ್ರಧಾನಿಗಳು ಸಭೆ ಮುಗಿಸಿ ಹೊರಡುವಾಗಲಷ್ಟೇ ಅದನ್ನು ನೋಡಿ ಬಹಳ ಸಿಟ್ಟಾದರು. ಅದನ್ನು ಬಳಸ ಬಾರದಿತ್ತು ಎಂದರು' ಎಂದು **ಆಗಸ್ಟ್** 21 ರಂದು ಹೇಳಿಕೆ ನೀಡಿದ ಬಿಜೆಪಬಿ ವಕ್ತಾರರು ಹೇಳಿದ್ದರೂ ಬಿಜೆಪಿ-ಸಂಘ ಪರಿವಾರದ ಭಂಡತನ ಮಾತ್ರ ನಿಲ್ಲುವಂತೆ ಕಾಣುತ್ತಿಲ್ಲ.

ಆಗಸ್ಟ್ 23 ರಂದು ಗುಜರಾತಿನ ಕಪದ್ವಂಜ್‌ನಲ್ಲೂ ವೇದಿಕೆಯ ಮೇಲೆ ಕಾರ್ಗಿಲ್ ಬಗ್ಗೆ ಪೋಸ್ಟರ್ ಬಳಕೆ, ಚುನಾವಣಾ ಪ್ರಚಾರದಲ್ಲಿ ಕಾರ್ಗಿಲ್‌ನ ಬಳಕೆಯ ಬಗ್ಗೆ ರಾಜ್ಯದ ಚುನಾವಣಾ ಅಧಿಕಾರಿಗಳು ತನಿಖೆಗೆ ಆದೇಶ ನೀಡಿದ್ದಾರೆ ಎಂದು ತಿಳಿದುಬಂದಿದೆ. ಕಪದ್ವಂಜ್‌ನ ಕಾರ್ಗಿಲ್ ಹುತಾತ್ಮ ದಿನೇಶ್ ವಾಘೇಲಾರ ತಂದೆ-ತಾಯಿಯ ರನ್ನು ಬಿಜೆಪಿ ಈ ಸಭೆಗೆ ಕರೆತಂದರು. ಪ್ರಧಾನ ಮಂತ್ರಿಗಳು ಕೇವಲ ಈ ಹುತಾತ್ಮನಿಗೆ ಶ್ರದ್ಧಾಂಜಲಿ ಅರ್ಪಿಸಿ ತನ್ನ ಭಾಷಣ ಆರಂಭಿಸಿದರು. ಇದು ಚುನಾವಣಾ ಆಯೋಗದ ಉಲ್ಲಂಘನೆಯಲ್ಲವೇ ಎಂದೂ ಕೆಲವರು ಪ್ರಶ್ನಿಸಿದ್ದಾರೆ.


ಈ ಚುನಾವಣೆ ಗೆಲ್ಲಲು ಕಾರ್ಗಿಲ್ ವಿಜಯ ಮತ್ತು ಸೋನಿಯಾ ಜನ್ಮಸ್ಥಳ ಇವೆರಡೇ ತಮಗೆ ದಿಕ್ಕು ಎಂದು ಬಿಜೆಪಿಯವರು ಹತಾಶರಾಗಿದ್ದಾರೋ ಏನೋ? **ಆಗಸ್ಟ್** 24 ರಂದು 'ರಕ್ಷಾಬಂಧನ್' ದಿನದಂದು ಈ ಕಾವಿಪಡೆಗಳು ಧರ್ಮವನ್ನು ತಮ್ಮ ಸಂಕುಚಿತ ಉದ್ದೇಶಗಳಿಗೆ ದುರುಪ ಯೋಗಪಡಿಸಿಕೊಳ್ಳುವ ಮತ್ತೊಂದು ಘಟನೆ ನಡೆಯಿತು. ಬಿಜೆಪಿಯ ಬಗ್ಗೆ ಸಹಾನುಭೂತಿಯಿರುವ 'ಕನ್ನಡಪ್ರಭ' (ಆಗಸ್ಟ್ 25) ಪತ್ರಿಕೆಯೇ ಈ ಬಗ್ಗೆ ಏನು ಹೇಳಿದೆ ನೋಡಿ-

"ರಾಖಿಗೆ ಬೆಲೆಯೇ ಇಲ್ಲ ಎನ್ನುವಂತೆ ಈಗ ವಿಶ್ವಹಿಂದೂ ಪರಿಷತ್ ನಡೆದುಕೊಂಡಿದೆ. ಪರಿಷತ್‌ನ ಸುಮಾರು 20000 ಮಂದಿ ಸದಸ್ಯರು ದೆಹಲಿಯ ರಕ್ಷಣಾ ಸಚಿವಾಲಯಕ್ಕೆ ರಾಖಿಗಳೊಂದಿಗೆ ಸಜ್ಜಾಗಿ ಧಾವಿಸಿ ದರಂತೆ. ಕಾರ್ಗಿಲ್ ಯೋಧರಿಗೆ ರಾಖಿ ಕಟ್ಟುವುದು ಅವರ ಉದ್ದೇಶ. ಆದರೆ ಇಂಥ 'ಅಪೂರ್ವ' ಘಟನೆ ದೇಶಾದ್ಯಂತ ಗೊತ್ತಾಗಬೇಕಲ್ಲ. ಎಂದೇ ವಿಶ್ವಹಿಂದೂ ಪರಿಷತ್‌ನವರು ಫೋಟೋಗ್ರಾಫರು ಗಳನ್ನು ಕರೆದುಕೊಂಡು ಬಂದಿದ್ದರಂತೆ. ಟಿ.ವಿ. ಹಾಗೂ ಪತ್ರಿಕೆಯವರಿಗೂ ವಿಶೇಷ ಆಹ್ವಾನ ಇದ್ದಿರಬೇಕು. 'ಭ್ರಾತೃತ್ವ' ಕೂಡಾ ಪರಿಷತ್ತಿನ ಕೈಯಲ್ಲಿ ಪ್ರಚಾರದ ಸರಕು ಆಯಿತು. ಪ್ರತಿಯೊಂದು ರಾಖಿಯಲ್ಲೂ ಕಮಲದ ಹೂವಿನ ಪ್ರತಿಕೃತಿಯ ಜೋಡಣೆ. ಸದ್ಯದಲ್ಲೇ ನಡೆಯಲಿರುವ ಚುನಾವಣೆಗೆ ಬಿಜೆಪಿಗೆ ಪ್ರಚಾರ ಕೊಡುವ ಒಂದು ಸಾಧನ ಆದಂತಾಯಿತು.

ನಮ್ಮನ್ನು ನಮ್ಮ ಪಾಡಿಗೆ ಬಿಡಿ ಎಂದು ಸೈನ್ಯದ ವರಿಷ್ಠಾಧಿಕಾರಿ(ದಂಡನಾಯಕ) ವಿ.ಪಿ.ಮಲ್ಲಿಕ್ ರಾಜಕೀಯ ಪಕ್ಷಗಳಿಗೆ ಬೇಡಿಕೊಳ್ಳುವಂತಾಗಿದೆ"

ಆದರೂ **ಆಗಸ್ಟ್** 27 ರಂದು ಪ್ರಧಾನಮಂತ್ರಿಗಳು ಹೇಳಿದ್ದಾರೆ- 'ನಮ್ಮವರು ಎಲ್ಲೂ ಚುನಾವಣೆ ನೀತಿ ಸಂಹಿತೆಯನ್ನು ಉಲ್ಲಂಘಿಸುತ್ತಿಲ್ಲ". ಇದು ಬಿಜೆಪಿಯ ಎಂದಿನ ಚಾಳಿ ಎಂದೇ ಹೇಳೋಣವೇ?

ಹೀಗನ್ನುತ್ತಿದ್ದಾರೆ



"ಪೋಖ್ರಾನ್ ಪರೀಕ್ಷಣೆಯ ನಂತರ ಸ್ವತಃ ಸೇನಾ ಮುಖಂಡತ್ವವೇ ಒಂದು ಅತ್ಯಂತ ಒರಟು ರೀತಿಯಲ್ಲಿ ರಾಜಕೀಯಕರಣಗೊಂಡಿದೆ. ಎಷ್ಟೆಂದರೆ ಮಿಲಿಟರಿ ತೀರ್ಮಾನಗಳನ್ನು ರಾಜಕೀಯ ಪರಿಶೀಲನೆಗಳು ಮಸುಕುಗೊಳಿಸುತ್ತಿವೆ, ಗೊಂದಲಮಗೊಳಿಸುತ್ತಿವೆ. ಇದು ನನ್ನ ಮಟ್ಟಿಗೆ ಹೇಳುವುದಾದರೆ ಬಹಳ ಆತಂಕ ಕಾರಿ"-ಹೀಗಂದಿದ್ದಾರೆ ಈ ಹಿಂದೆ ಸೇನಾ ಉಪಸೇನಾಧಿಪತಿ ಯಾಗಿದ್ದ ಲೆಫ್ಟಿನೆಂಟ್ ಜನರಲ್ ಮೋತಿಧರ್. ಇವರು ಕಾರ್ಗಿಲ್‌ನ ರಕ್ಷಣೆಯ ಜವಾಬ್ದಾರಿಯಿರುವ 121 ಬ್ರಿಗೇಡ್‌ನ ಬ್ರಿಗೇಡ್ ಮೇಜರ್ ಕೂಡಾ ಆಗಿದ್ದವರು. ಕಾರ್ಗಿಲ್‌ನಲ್ಲಿ ಪಾಕ್ ಬೆಂಬಲಿತ ಅತಿಕ್ರಮಣಕೋರರ ಚಲನವಲನ ಮೊದಲೇ ಏಕೆ ನಮ್ಮ ಅರಿವಿಗೆ ಬರಲಿಲ್ಲ ಎಂಬುದು ಅವರಿಗೂ ಒಂದು ರಹಸ್ಯವೇ ಅಂತೆ. ನಮ್ಮ ಅರಿವಿಗೆ ಬರಲಿಲ್ಲ ಎಂಬುದನ್ನು ಖಂಡಿತಾ ನಂಬಲಿಕ್ಕಾಗುತ್ತಿಲ್ಲ ಎಂದಿದ್ದಾರೆ ಅವರು.

***

ಕಾರ್ಗಿಲ್ ಘರ್ಷಣೆ ದೇಶದಲ್ಲಿ ಭಾವನೆಯನ್ನು ದೇಶಪ್ರೇಮದಿಂದ ಯುದ್ಧೋನ್ಮಾದಿ ದೇಶಭಕ್ತಿಯಾಗಿ ಪರಿವರ್ತಿಸಿದೆ. ಮಾಧ್ಯಮಗಳಲ್ಲಿ ಇದು ವರದಿಯಾದ ರೀತಿ ಯುದ್ಧವನ್ನು, ಹತ್ಯೆಗಳನ್ನು ವೈಭವೀಕರಿಸಿ ಅದು ಫ್ಯಾಸಿಸ್ಟ್ ಪ್ರಚಾರದಂತೆ ಕಾಣುವಂತಾಗಿದೆ - ಇದು ಬೆಂಗಳೂರಿನಲ್ಲಿ ಆಗಸ್ಟ್ 21 ರಂದು ಹಿಂದಿನ ನೌಕಾ ಸೇನಾಧಿಪತಿ ಅಡ್ಮಿರಲ್ ರಾಮದಾಸ್ ವ್ಯಕ್ತಪಡಿಸಿದ ಆತಂಕ. ಎರಡೂ ದೇಶಗಳ



ಜನಕ್ಕೆ ಶಾಂತಿ ಬೇಕು, ಆದರೆ ಎರಡೂ ಕಡೆ ಆಡಳಿತ ನಡೆಸುವವರು ತಮ್ಮ ಪಟ್ಟಭದ್ರ ಹಿತಾಸಕ್ತಿಗಳ ಈಡೇರಿಕೆಗೆ ಘರ್ಷಣೆಯ ವಾತಾವರಣವನ್ನು ಉಳಿಸಬಯಸುತ್ತಾರೆ. ಏಕೆಂದರೆ ಜನಗಳನ್ನು ವಿಭಜಿಸುವಲ್ಲಿ ಹಣವಿದೆ, ಅಧಿಕಾರವಿದೆ ಎಂದು ಅವರು ಮಾರ್ಮಿಕವಾಗಿ ಹೇಳಿದ್ದಾರೆ.

ಕಿಡಿ Vs ತೃಪ್ತಿ

ಸೀಟು ಹಂಚಿಕೆಯಲ್ಲಿ ತಮ್ಮ ಜನತಾದಳ(ಯು) ಗೆ ಅನ್ಯಾಯವಾಗಿದೆ, ಗೆಲ್ಲುವ ಸಾಮರ್ಥ್ಯವಿರುವ ಅಭ್ಯರ್ಥಿಗಳಿಗೆ ಟಿಕೆಟ್ ದೊರೆಯದಂತೆ ಬಿಜೆಪಿ ಮುಖಂಡರು ನೋಡಿಕೊಂಡಿದ್ದಾರೆ ಎಂದು ಜೆ.ಎಚ್.ಪಟೇಲ್ ಕಿಡಿಕಾರಿದ್ದಾರೆ. ಇದು ಆಗಸ್ಟ್ 24 ರ ಪತ್ರಿಕೆಗಳಲ್ಲಿನ ಸುದ್ದಿ

★★★

ಯಡಿಯೂರಪ್ಪನವರಿಗೆ ಜೆ.ಡಿ(ಯು) ನೊಂದಿಗಿನ ಹೊಂದಾಣಿಕೆ ವಿಷಯ ತೃಪ್ತಿ ತಂದಿದೆ ಎಂಬುದೂ ಸಹಜವಾಗಿಯೇ ಅದೇ ದಿನದ ಇನ್ನೊಂದು ಸುದ್ದಿ. ಈ 'ಮೈತ್ರಿ'ಯ ನಿಜವಾದ ಸ್ವರೂಪ ಅರಿತ ಮತದಾರರಿಗೆ ಇದರಲ್ಲಿ ಆಶ್ಚರ್ಯವೇನೂ ಆಗಿಲ್ಲ.

★★★

ಅಪ್ರಸ್ತುತ

ಯಡಿಯೂರಪ್ಪನವರು ಇನ್ನೂ ಮುಂದೆ ಹೋಗಿ ಈ ಚುನಾವಣೆಗಳಲ್ಲಿ ಪಟೇಲರು ಅಪ್ರಸ್ತುತ ಎಂದಿದ್ದಾರೆ. "ನಾನು ಮುಖ್ಯಮಂತ್ರಿಯಾಗಲು ಯಾರೂ ಅಡ್ಡಿಯಾಗುವುದಿಲ್ಲ" ಎಂಬ ವಿಶ್ವಾಸ ಹೊಂದಿರುವ ಅವರ ವಿಶ್ವಾಸ ಭ್ರಮೆಯಾಗದಿರಬೇಕಾದರೆ ಹೀಗಾಗಲೇ ಬೇಕು ತಾನೇ?

★★★

ಹೀಗೊಂದು ಗೊಂದಲ

ಎನ್.ಡಿ.ಎ. ಕೂಟದಲ್ಲಿ ಯಾವ ಪಕ್ಷಕ್ಕೆ ಹೆಚ್ಚು ಸೀಟುಗಳು ಸಿಗುತ್ತದೋ ಅದರ ಮುಖಂಡರು ಮುಖ್ಯಮಂತ್ರಿ ಯಾಗುತ್ತಾರೆ ಎಂದು ಒಂದು ದಿನ ಪಟೇಲರು ಹೇಳಿದರು. ಇನ್ನೊಂದು ದಿನ ಯಡಿಯೂರಪ್ಪನವರೂ ಹೇಳಿದರು. ಈ ವಿಷಯದಲ್ಲಾದರೂ ಕಂಡ ಈ ಅಪೂರ್ವ 'ಒಮ್ಮತ'ವೂ ಬಹಳ ಗಂಟೆ ಉಳಿಯಲಿಲ್ಲ. ಇಲ್ಲಾ ಹಾಗಲ್ಲ, ಶಾಸಕಾಂಗ ಗುಂಪು ಮುಖ್ಯಮಂತ್ರಿಗಳನ್ನು ಚುನಾಯಿಸುತ್ತದೆ ಎಂದಿದ್ದಾರೆ ಅಡ್ವಾಣಿಯವರು. ಗೊಂದಲ ಕೇವಲ 'ಬಿ' ಫಾರಂಗಳಿಗೇ ಸೀಮಿತಗೊಂಡಿಲ್ಲ.

★★★

ಬಾಣವೋ ಕಮಲವೋ

'ಬಿ'ಫಾರಂಗಳ ಗೊಂದಲವಂತೂ ಮುಂದುವರೆದಿದೆ. ರಾಮದುರ್ಗ ಕ್ಷೇತ್ರ ಎನ್.ಡಿ.ಎ. ನ ಜನತಾದಳ (ಯು)ಗೆ, ಅಲ್ಲಿನ ಲೋಕಶಕ್ತಿಗೆ ನೀಡಿದ್ದರಂತೆ. ಆದರೆ ಈಗ ಅಲ್ಲಿ ಎನ್.ಡಿ.ಎ. ಯ ಮೂವರು ಅಭ್ಯರ್ಥಿಗಳ ಬಳಿ 'ಬಿ'ಫಾರಂ ಇದೆ. 'ಬಾಣ'ದ ಗುರುತಿಗೆ ಇಬ್ಬರ ಬಳಿ, 'ಕಮಲ' ಕ್ಕೆ ಒಬ್ಬರ ಬಳಿ.

★★★

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಂಡಕಂಡವರ ಕೈಯಲ್ಲಿ ಎನ್.ಡಿ.ಎ. ಕೂಟದ 'ಬಿ' ಫಾರಂಗಳಿವೆಯಂತೆ. 'ಬಿ'ಫಾರಂನ ಜೆರಾಕ್ಸ್ ಪ್ರತಿಗಳನ್ನು ಹಂಚಿ ಅದರ ಗೌರವ ಕಳೆಯಬೇಡಿ ಎಂದು ಜಿಲ್ಲಾ ಲೋಕಶಕ್ತಿ ಅಧ್ಯಕ್ಷರು ತಮ್ಮ ಎನ್.ಡಿ.ಎ. ಬಂಧುಗಳೆದುರು ಹಲುಬಿದ್ದಾರಂತೆ. ಇಂತಹ ಸುದ್ದಿಗಳು ರಾಜ್ಯದ ಎಲ್ಲಾ ಕಡೆಗಳಿಂದ ಬರುತ್ತಿವೆ. ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಯಾವುದಕ್ಕೆ ಗೌರವವುಳಿದಿದೆ ಎಂದು ಕೇಳಬೇಡಿ.

★★★

ಸಂಯುಕ್ತ ಜನತಾದಳ ಅಭ್ಯರ್ಥಿಗಳ ಆಯ್ಕೆಯ ಮತ್ತು 'ಬಿ'ಫಾರಂನ ಜವಾಬ್ದಾರಿಯಿರುವ ಕೆಲವು ಮುಖಂಡರು ತಮ್ಮ ಪಕ್ಷದವರೇ ಆದ ಸಹೋದ್ಯೋಗಿ ಸಚಿವರು, ಶಾಸಕರುಗಳಿಗೆ ಟಿಕೆಟ್ ತಪ್ಪಿಸಿರುವುದು ಬಂಡಾಯಕ್ಕೆ ಪ್ರಚೋದನೆ ನೀಡಿದೆಯಂತೆ.

★★★

ಹಿಂಸಾರೂಪ ತಳೆದ ಗೊಂದಲ

ರಾಮನಗರದಲ್ಲಿ ಈ ಗೊಂದಲ ಪರಾಕಾಷ್ಟೆ ತಲುಪಿದಂತಿದೆ. ಅಲ್ಲಿ ಎನ್.ಡಿ.ಎ. ನ ಅಧಿಕೃತ ಅಭ್ಯರ್ಥಿ ಲೋಕಶಕ್ತಿಯವರು. ಈ ಕ್ಷೇತ್ರವನ್ನು ಒಳಗೊಂಡ ಕನಕಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಿಜೆಪಿಯವರು. ಇಲ್ಲಿ ವಿಧಾನಸಭೆಗೂ ಬಿಜೆಪಿ ಅಭ್ಯರ್ಥಿಯನ್ನು ನಿಲ್ಲಿಸಿರುವುದಷ್ಟೇ ಅಲ್ಲ ಬಿಜೆಪಿಯ ಮತ್ತು ಜೆ.ಡಿ(ಯು)ನ ಸಾರ್ವಜನಿಕ ಸಭೆಗಳು ಒಂದೇ ವೇಳೆಗೆ ಪ್ರತ್ಯೇಕವಾಗಿ ನಡೆದವು. ಅನಧಿಕೃತ ಬಿಜೆಪಿ ಅಭ್ಯರ್ಥಿಯ ಸಭೆಯ ಉದ್ಘಾಟನೆ ಮಾಡಿದವರು ಎನ್.ಡಿ.ಎ.ನ ಅಧಿಕೃತ ಲೋಕಸಭಾ ಅಭ್ಯರ್ಥಿ. ಅಧಿಕೃತ ಎನ್.ಡಿ.ಎ. ವಿಧಾನಸಭಾ ಅಭ್ಯರ್ಥಿಯ ಸಭೆಯಲ್ಲಿ ಅವರು ಭಾಗವಹಿಸುವರೆಂದು ಮೊದಲು ಪ್ರಚಾರ ನಡೆಸಿದ್ದರೂ ಭಾಗವಹಿಸಲಿಲ್ಲ. ಗೊಂದಲ ಹಿಂಸಾರೂಪವನ್ನು ತಳೆದಿದೆ. ಜೆಡಿ(ಯು)ನ ಪ್ರಚಾರ ಸಾಮಗ್ರಿಗೆ ಬಿಜೆಪಿ ಕಾರ್ಯಕರ್ತರು ಬೆಂಕಿ ಹಚ್ಚಿದರು.

★★★

ಆಳ್ವಾ ರೋದನ

ಅಟಲ್ ಬಿಹಾರಿ ವಾಜಪೇಯಿಯವರನ್ನು ಮತ್ತೆ ಪ್ರಧಾನಿಯಾಗಿಸುವ ನಿಟ್ಟಿನಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡದ್ದನ್ನು ಬಿಜೆಪಿ ಮರೆತಂತಿದೆ ಎಂದು ಆಳ್ವಾ ತಮ್ಮ ಭಾಷಣದಲ್ಲಿ ರೋದನ ನಡೆಸಿದರಂತೆ.

★★★

ಪಟೇಲ್, ಹೆಗ್ಗೆ ಅಣಿಮುತ್ತುಗಳು

ಇಣುಕು ನೋಟ

ಆಕೆ ಎಲ್ಲಿ ಹುಟ್ಟಿದ್ದು, ಆಕೆಯ ಇತಿಹಾಸ ಏನು ಎಂಬುದನ್ನು ಹೇಳಿದರೆ ನಿಮಗೂ ಅಪಾಯ ನಮಗೂ ಅಪಾಯ. ಅದನ್ನು ನೀವು ಕೇಳಬಾರದು, ನಾವು ಹೇಳಬಾರದು" ಇದು ಬಳ್ಳಾರಿಯಲ್ಲಿ ಮುಖ್ಯಮಂತ್ರಿ ಪಟೇಲರ ಮಾತಿನ ಮಟ್ಟ

"ಗಂಡ ಪಾರ್ಸಿ, ಹೆಂಡತಿ ಕ್ರಿಶ್ಚಿಯನ್, ಮಕ್ಕಳು ಯಾವ ಜಾತಿ ಹೇಳಿ' ಎಂದು ಈ ಲೋಹಿಯಾ ಶಿಷ್ಯ ಉದುರಿಸಿದ ಅಣಿಮುತ್ತುಗಳನ್ನು ಕೇಳಿ ಬಿಜೆಪಿಯನ್ನು ಅಪ್ಪಿಕೊಂಡದಕ್ಕೂ ಸಾರ್ಥಕವಾಯಿತು ಎಂದು ಇನ್ನೂ ಲೋಹಿಯಾ ವಾದಿಗಳಾಗಿರುವವರು ಹೇಳುತ್ತಿದ್ದಾರಂತೆ.

★★★

ಅವರ ಹಿರಿಯ ಗೆಳೆಯ ರಾಮಕೃಷ್ಣ ಹೆಗಡೆ ಇದನ್ನೇ 'ಪ್ರೌಢ' ಭಾಷೆಯಲ್ಲಿ ಹೇಳಿದ್ದಾರೆ. ವಿದೇಶಿ ಮಹಿಳೆಯ ಮೋಸದ ಮಾತಿಗೆ ಬಲಿಯಾಗಿ ಮೋಸದ ಕೃತ್ಯ ಮಾಡಬೇಡಿ, 'ಸ್ವದೇಶಿ' ಮಹಿಳೆಯ ಮೋಸದ ಮಾತಿಗೆ ಬಲಿಯಾಗಿ ಆ ಕೆಲಸ ಮಾಡಿ ಎಂದು ಬಳ್ಳಾರಿ ಮತದಾರರಿಗೆ ಹೆಗಡೆ ಸಲಹೆ ಮಾಡಿದ್ದಾರೆ!

★★★

.......ಅದೇ ಸಭೆಯಲ್ಲಿ ಆಂಧ್ರದವರಾದ, ಪಾರ್ಲಿಮೆಂಟಿನ ಲೆಕ್ಕದಲ್ಲಿ ಮಾತ್ರ ಕರ್ನಾಟಕದವರಾದ ವೆಂಕಯ್ಯ ನಾಯ್ಡು 'ಇದು ನೈಜ ಕಾಂಗ್ರೆಸ್ ಅಲ್ಲ, ಮಹಾತ್ಮಗಾಂಧಿಯ ಕಾಂಗ್ರೆಸ್ ಅಲ್ಲ' ಎಂದರಂತೆ.

★★★

ಮಹಾತ್ಮರಕೊಲೆ ಕೂಡಾ ಅಪ್ರಸ್ತುತ?

ಮಹಾತ್ಮ ಗಾಂಧಿಯವರನ್ನು ಗುಂಡಿಕ್ಕಿ ಕೊಂದ 'ಸ್ವದೇಶಿ' ಯಾರು ಎಂದು ಕೇಳಿದರೆ ಇತ್ತೀಚೆಗೆ ಬಿಜೆಪಿ ಸೇರಿಕೊಂಡ ಮಹಾತ್ಮಗಾಂಧಿಯವರ ಮೊಮ್ಮಗಳು ಸುಮಿತ್ರಾ ಕುಲಕರ್ಣಿ ಈಗ ಆ ಪ್ರಶ್ನೆ ಅಪ್ರಸ್ತುತ ಎಂದರಂತೆ. ಯಡಿಯೂರಪ್ಪ ನವರಿಗೆ ಜೆ.ಹೆಚ್.ಪಟೇಲ್ ಅಪ್ರಸ್ತುತರಾದಂತೆ?

★★★

50 ವರ್ಷಗಳ ನಂತರ ಮತ್ತೆ ಏಕೆ ಈ ವಿಷಯವನ್ನು ಎತ್ತಲಾಗುತ್ತಿದೆ ಎಂದು ಅವರು ಕೇಳಿದ್ದಾರೆ. ಏಕೆಂದರೆ ಅಂದು ಸ್ವತಂತ್ರ ಭಾರತದ ಆಧಾರವನ್ನೇ ಕಳಚಿಹಾಕಬೇಕೆಂದಿದ್ದ ಶಕ್ತಿಗಳ ವಾರುಸುದಾರರೇ ಈಗಿನ ಬಿಜೆಪಿಯವರು. 1992 ರಲ್ಲಿ ಬಾಬ್ರಿ ಮಸೀದಿಯನ್ನು ಎಲ್ಲಾ ಕಾನೂನು, ನೀತಿ-ನಿಯಮಗಳನ್ನು ಗಾಳಿಗೆ ತೂರಿ ಧ್ವಂಸ ಮಾಡಿ ಮತ್ತೆ ಅದೇ ಗಂಡಾಂತರ ದೇಶಕ್ಕೆ ತಂದಿದ್ದಾರೆ ಎಂಬ ಕಾರಣಕ್ಕೆ ಈ ಪ್ರಶ್ನೆಯನ್ನು ಮತ್ತೆ ಎತ್ತಲಾಗುತ್ತಿದೆ ಎಂದು ಐ.ಎ.ಎಸ್. ಅಧಿಕಾರಿಯಾಗಿದ್ದು ಕಾಂಗ್ರೆಸ್ಸಿನ ರಾಜ್ಯಸಭಾ ಸದಸ್ಯೆಯೂ ಆಗಿದ್ದ ಗಾಂಧೀಜಿಯ ಮೊಮ್ಮಗಳಿಗೆ ನೆನಪಿಸಬೇಕೇ?

★★★

'ಅಂದಿನ ಸಂಘ ಪರಿವಾರವೇ ಬೇರೆ, ಇಂದಿನ ಬಿಜೆಪಿಯೇ ಬೇರೆ' ಎಂದು ಈಕೆ ಅಪ್ಪಣೆ ಕೊಡಿಸಿದ್ದಾರೆ. ರಾಜಕೀಯದ ಪ್ರಾಥಮಿಕ ಜ್ಞಾನವಾದರೂ ಇರುವವರಿಗೆ ಇದೆಂತಾ ಅಪಹಾಸ್ಯದ ಮಾತು ಎಂದು ಬೇರೆ ಹೇಳಬೇಕೇ? ಒಂದೂವರೆ ವರ್ಷಗಳ ಹಿಂದೆಯಷ್ಟೇ 'ಆರ್.ಎಸ್.ಎಸ್. ನನ್ನ ಆತ್ಮ' ಎಂದವರು ಅವರೀಗ ಬಹಳ ಮೆಚ್ಚುವ ಪ್ರಧಾನಿಗಳೇ ಅಲ್ಲವೇ? ಗಾಂಧೀಜಿ ಆರ್.ಎಸ್.ಎಸ್.ನ ಅಸಹಿಷ್ಣುತೆಯ ಬಗ್ಗೆ ಏನು ಹೇಳಿದ್ದಾರೆ ಎಂದು ಇವರಿಗೆ ತಿಳಿದಿರಬಹುದೇ? ಬಿಜೆಪಿ ಪ್ರಣಾಳಿಕೆಯಲ್ಲಿ 'ಗಾಂಧಿ ಸಮಾಜವಾದ' ಬೇರೆ ಪಕ್ಷಗಳಿಗಿಂತ ಹೆಚ್ಚು ಇದೆಯಂತೆ. ಅದನ್ನು ಬಿಜೆಪಿ ಎಂದೋ ತನ್ನ ಶಬ್ದಭಂಡಾರದಿಂದಲೂ ಕೈಬಿಟ್ಟಿದೆ ಎಂದೂ ಪಾಪ ಇವರಿಗೆ ತಿಳಿಯದೇನೋ?

★★★

ಮೈತ್ರಿಯ ಮುಜುಗರ

ತಾವು ಮೈತ್ರಿ ಮಾಡಿಕೊಂಡಿರುವುದು ಹೆಗ್ಡೆಯವರ ನೇತೃತ್ವದ ಪಕ್ಷದೊಂದಿಗೆ ಎಂದು ಪಟೇಲರೊಂದಿಗೆ ತಮ್ಮ ಮೈತ್ರಿಯ ಮುಜುಗರವನ್ನು ಮರೆಮಾಚಲು ಈ ಹಿಂದೆ ಯಡಿಯೂರಪ್ಪ ಪ್ರಯತ್ನಿಸಿದ್ದರು. ಆದರೆ ಅತ್ತ ಗುಲ್ಬರ್ಗದಲ್ಲಿ ಹೆಗ್ಡೆ ಮತ್ತು ಯಡಿಯೂರಪ್ಪ ಪ್ರತ್ಯೇಕ ಪತ್ರಿಕಾಗೋಷ್ಠಿಗಳನ್ನು ನಡೆಸಿದರು. ಕಾಂತಾರವರಿಗೆ ಕಲ್ಬುರ್ಗಿ ಸೀಟು ಬಿಟ್ಟು ಕೊಡಿ ಎಂದು ಹೆಗ್ಡೆ ಕೇಳಿದರೆ ಅದು ಸಾಧ್ಯವಿಲ್ಲ ಎಂದು ಯಡಿಯೂರಪ್ಪ ಹೇಳಿದ್ದಾರೆ. ಗುಲ್ಬರ್ಗ, ರಾಯಚೂರುಗಳಲ್ಲಿ ಕಣದಲ್ಲಿ ಉಳಿಯುವಂತೆ ಬಿಜೆಪಿ ಮುಖಂಡರು ತಮ್ಮ ಅಭ್ಯರ್ಥಿಗಳಿಗೆ ರಹಸ್ಯವಾಗಿ ಹೇಳಿದ್ದಾರೆ ಎಂಬುದು ನಿಜವಲ್ಲ ಎಂದ ಹೆಗಡೆಯವರು 'ಬಿಜೆಪಿ ಶಿಸ್ತಿನ ಪಕ್ಷ, ಹೈಕಮಾಂಡ್ ನಿರ್ದೇಶನ ಪಾಲಿಸುತ್ತಾರೆ' ಎಂದಿದ್ದಾರಂತೆ. ಹೈಕಮಾಂಡ್‌ನ ರಹಸ್ಯ ಸಲಹೆಯೋ ಇದೇ ಆಗಿದ್ದರೆ?


★★★



ಕೃಪೆ: ಜನವಾಹಿನಿ



ಚುನಾವಣೆ-99



ಪಕ್ಷರಂಗ

ಅನಂತ್‌ಕುಮಾರ್‌ಗೆ ತಿರುಗುಬಾಣ

ಬಳ್ಳಾರಿಯಲ್ಲಿ ಬಿಜೆಪಿ ದೇಶದ 'ಆತ್ಮಗೌರವ' ದ ಮಾತನಾಡುತ್ತಿದ್ದರೆ ಬೆಂಗಳೂರಿನ ಬಿನ್ನಿಪೇಟೆಯಲ್ಲಿ ಅದರ ವಿರುದ್ಧವೇ 'ಆತ್ಮಾಭಿಮಾನ'ದ ಪ್ರಶ್ನೆ ಪ್ರಯೋಗವಾಗಿದೆ. ಇಲ್ಲಿ ಕನ್ನಡದ ಆತ್ಮಾಭಿಮಾನದ ಪ್ರಶ್ನೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಮಂತ್ರಿಯಾದ ಅನಂತ್‌ಕುಮಾರ್ ಗೆಲುವಿಗೆ ತಾನು ಶ್ರಮಿಸಿದ್ದರೂ, ಈ ಬಾರಿ ಹೆಗ್ಡೆಯವರು ತನಗೆ 'ಬಿ'ಫಾರಂ ನೀಡಿದ್ದರೂ ಅಲ್ಲಿ ಬಿಜೆಪಿ ಅಭ್ಯರ್ಥಿಯೂ ಇರುವುದನ್ನು ಕಂಡ ಜಿ.ನಾರಾಯಣ ಕುಮಾರ್ ಅವರನ್ನು ವಾಪಸು ಕರೆಸದಿದ್ದರೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಸಚಿವ ಅನಂತ ಕುಮಾರ್‌ಗೆ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದ್ದಾರಂತೆ.

★★★

ಹಿರಿಯಣ್ಣನ ಚಾಳಿ?

ಬಿಜೆಪಿಯ ಧಾರವಾಡ-ಉತ್ತರ ಕ್ಷೇತ್ರದ ಅಭ್ಯರ್ಥಿ ವಿಜಯ ಸಂಕೇಶ್ವರರಿಗೆ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದರೆಂದು ಚುನಾವಣಾಧಿಕಾರಿಗಳು ಆಗಸ್ಟ್ 19 ರಂದು ನೋಟೀಸ್ ನೀಡಿದ್ದಾರೆ. ಇದೇ ರೀತಿಯ ಉಲ್ಲಂಘನೆಗಾಗಿ ಹುಬ್ಬಳ್ಳಿಯಲ್ಲಿ ಬಿಜೆಪಿ ಅಭ್ಯರ್ಥಿ ಅಶೋಕ ಕಾಟ್ವೆಯವರಿಗೂ ನೋಟೀಸು ನೀಡಲಾಗಿದೆ. ಎಷ್ಟೆಂದರೂ ಟೆಲಿಕಾಂ ಹಗರಣದಲ್ಲಿ ರಾಷ್ಟ್ರಪತಿಗಳ ಸಲಹೆಯನ್ನು ಪಕ್ಕಕ್ಕೆ ಸರಿಸಿ, ಚುನಾವಣಾ ಆಯೋಗದ ಎಚ್ಚರಿಕೆಯನ್ನೂ ಲೆಕ್ಕಿಸದೆ, ಹೈಕೋರ್ಟ್‌ನಿಂದ ಕಟು ಟಿಪ್ಪಣಿ ಪಡೆದ ಹಿರಿಯಣ್ಣನ ಚಾಳಿ ತಾನೇ?

★★★

ಬಳ್ಳಾರಿಯಲ್ಲಿ ಅಭ್ಯರ್ಥಿಗಳ ಜನ್ಮಸ್ಥಳವನ್ನು ಮುಖ್ಯ ಚುನಾವಣಾ ವಿಷಯವಾಗಿ ಮಾಡಿ ಚುನಾವಣೆಯಲ್ಲಿ ಸ್ಪರ್ಧಿಸುವುದೇ ಇಲ್ಲ ಎಂದವರು ದಿಲ್ಲಿಯಿಂದ ಬಳ್ಳಾರಿಗೆ ಬಂದು ಅಬ್ಬರ ನಡೆಸುತ್ತಿರುವವರ ಸಂಗತಿ ಕರ್ನಾಟಕದಲ್ಲಿ ಮಾತ್ರವಲ್ಲ ಈಗ ಬಹುಶಃ ದೇಶದ ಎಲ್ಲರಿಗೂ ಗೊತ್ತು. ಆದರೂ ಕಾವಿ ಪಂಡಿತ ಡಾ. ಮುರಳಿ ಮನೋಹರ ಜೋಶಿಯವರು ಟಿಪ್ಪಣಿ ಮಾಡಿದ್ದಾರಂತೆ - ದೇಶದ ಸಮಸ್ಯೆಗಳೆಲ್ಲಾ ಇವರಿಗೆ ಬೇಕಿಲ್ಲ, ಕೇವಲ ಸೋನಿಯಾರ ಭಾರತೀಯತೆಯನ್ನು ಸಿದ್ಧ ಮಾಡುವುದಷ್ಟೇ ಕಾಂಗ್ರೆಸ್(ಐ) ಗೆ ಬೇಕು! ಕಾಂಗ್ರೆಸ್ಸಿನ ಮಟ್ಟಿಗೆ ಇದು ನಿಜವಿರಬಹುದು. ಆದರೆ ಬಿಜೆಪಿಯ ಮಟ್ಟಿಗೆ ಇದು ಭಿನ್ನವಾಗಿದೆಯೇ? ಕಾಂಗ್ರೆಸ್(ಐ) ಮತ್ತು ಬಿಜೆಪಿಗೆ ಹಾಗೂ ಅವರ ಬಾಲ ಹಿಡಿಯುವ ಪತ್ರಿಕೆಗಳಿಗೆ ಸೋನಿಯಾ VS ವಾಜಪೇಯಿ ಬಿಟ್ಟು ಬೇರೇನಾದರೂ ಕಾಣುತ್ತಿದೆಯೇ? ಇದು ಜನಸಾಮಾನ್ಯರು ಕೇಳುವ ಪ್ರಶ್ನೆ.

★★★

ಮತ್ತೊಂದು ಜೋಕು!

ಜೆ.ಹೆಚ್.ಪಟೇಲರು ಭಾಷಣಗಳಲ್ಲಿ ಬಹಳ ಜೋಕು ಮಾಡುತ್ತಾರಂತೆ. ಸ್ವತಃ ಜೋಕರೂ ಆಗಿ ಬಿಡುತ್ತಿದ್ದಾರೆ ಎಂಬುದು ಹಲವರ ಜೋಕು. ಆದರೆ ಬೆಂಗಳೂರಿಗೆ ಬಂದಾಗ ಗೃಹಮಂತ್ರಿ ಅಡ್ವಾಣಿಯವರೂ ಅದೇ ಆಗಿಬಿಟ್ಟಿದ್ದಾರೋ ಎಂಬ ಬಲವಾದ ಸಂದೇಹ ಕರ್ನಾಟಕದ ಮತದಾರರಲ್ಲಿ ಎದ್ದಿದೆ. ದೇಶಕ್ಕೆ ಹಗರಣ, ಭ್ರಷ್ಟಾಚಾರ ರಹಿತ ಸರ್ಕಾರ ನೀಡಲು ಬಿಜೆಪಿಯಿಂದ ಮಾತ್ರ ಸಾಧ್ಯ ... ಅವರು 'ಕನ್ನಡದ ನೆಲ'ದಿಂದ ಘೋಷಣೆ ಕೊಡಿಸಿದ್ದಾರೆ. ಬಿಜೆಪಿ ನೇತೃತ್ವದ ಸರಕಾರದ ಹಗರಣಗಳ ಮಾಲೆಯ ಒಂದು ಮಣಿಯಾದ ಕನ್ನಡಿಗ ವಿಮಾನ ಖಾತೆಯ ಸಚಿವ ಅನಂತಕುಮಾರ್ ಕೂಡಾ ಈ ಸಮಾರಂಭದಲ್ಲಿ ಹಾಜರಿದ್ದರು!

★★★

ಇದೂ ಒಂದು ಗೊಂದಲ!

ಒಂದೇ ಸೀಟಿಗೆ ಒಂದೇ ಪಕ್ಷದ, ಒಂದೇ ವ್ಯಕ್ತಿ ಕೃಪೆಯ ... ಅಭ್ಯರ್ಥಿಗಳು ಕರ್ನಾಟಕದ ಮತದಾರರಿಗೆ ಈ ಬಾರಿ ಸಾಮಾನ್ಯ ಸಂಗತಿಯಾಗಿದೆ. ಆದರೆ ಅರುಣಾಚಲ ಪ್ರದೇಶದ ಮತದಾರ ಕಾಣುತ್ತಿರುವುದು ತದ್ವಿರುದ್ಧ. ಅಲ್ಲಿ ಒಬ್ಬನೇ ಅಭ್ಯರ್ಥಿಗೆ ಎರಡು ಪಕ್ಷಗಳ ಟಿಕೆಟ್! ಇದರಲ್ಲೂ ಬಿಜೆಪಿಯ ಹೆಸರೇ ರಾರಾಜಿಸುತ್ತಿರುವುದು. ಗೋವರ್ದನ್ ನಿಫಾಜು ಎಂಬುವವರಿಗೆ ಬಿಜೆಪಿಯೂ ಟಿಕೆಟ್ ಕೊಟ್ಟಿದೆ, ಅರುಣಾಚಲ ಪ್ರದೇಶ ಕಾಂಗ್ರೆಸ್ ಕೂಡಾ ನೀಡಿದೆ. ಹೆಗಡೆಯವರು ನೀಡಿರುವ 'ಶಿಸ್ತಿನ, ಸಿದ್ಧಾಂತದ ಪಕ್ಷ'ದ ಸರ್ಟಿಫಿಕೇಟ್‌ನ ಗತಿಯೇನು?

★★★

ಪ್ಯಾರಿಸು ಭರವಸೆಯ ಫಜೀತಿ

ವಿನೋದ ಖನ್ನಾ ಪಂಜಾಬಿನ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಎಂ.ಪಿ. ಆತ ಕಳೆದ ಚುನಾವಣೆಯಲ್ಲಿ ಜನರಿಗೆ ಕೊಟ್ಟ ಭರವಸೆ ಆತನನ್ನು ಈ ಬಾರಿ ಫಜೀತಿಗೆ ಸಿಕ್ಕಿಸಿದೆ. ಗುರುದಾಸಪುರವನ್ನು ಪ್ಯಾರೀಸಿನಂತೆ ಸುಂದರವಾಗಿಸುತ್ತೇನೆ ಅಂತ ಭರವಸೆ ಕೊಟ್ಟಿದ್ದ ವಿನೋದ ಖನ್ನಾ, ಈ ಬಾರಿ ಚುನಾವಣೆ ಪ್ರಚಾರದಲ್ಲಿಯ ಜನ, ವಿರೋಧ ಪಕ್ಷಗಳ ಕಾರ್ಯಕರ್ತರು ಗೇಲಿ ಮಾಡುವವರೇ ಎಲ್ಲಪ್ಪ ಪ್ಯಾರೀಸು? ಗುರುದಾಸಪುರ ಹಂಗೇ ಇದ್ಯಲ್ಲಾ ಅಂತ. ಗುರುದಾಸಪುರವನ್ನು ಪ್ಯಾರೀಸು ಮಾಡಲು 18 ತಿಂಗಳು ಸಾಲದು ಅಂತ ವಿನೋದ ಖನ್ನಾ ಸಬೂಬು ಹೇಳುತ್ತಿದ್ದಾನಂತೆ. ಈ ಬಾರಿ ಜನರನ್ನು ಮರುಳು ಮಾಡಲು ತನ್ನ ಮಾಯೆ ಸಾಲದೆ ಹೋದಿತು ಅಂತ ಪ್ರಚಾರಕ್ಕೆ ಮಾಯಾನಗರಿ ಮುಂಬಯಿಯಿಂದ 'ಡ್ರೀಮ್ ಗರ್ಲ್' ಹೇಮಮಾಲಿನಿ, ಖಳನಾಯಕ ಅಮರೀಶ್‌ಪುರಿ, ಮಗ ಮತ್ತು ಯಂಗ್‌ಸ್ಟರ್ ಅಕ್ಷಯ ಖನ್ನ ಕರೆಸಿದ್ದಾನಂತೆ.

ಇಣುಕು ನೋಟ

ಅಡ್ವಾಣಿ ವಿರುದ್ಧ 'ಶಾಟ್‌ಗನ್' ಶೇಷನ್

ಅಡ್ವಾಣಿ ವಿರುದ್ಧ ಅಹಮದಾಬಾದ್‌ನಲ್ಲಿ ಕಾಂಗ್ರೆಸ್ ಮಾಜಿ ಚುನಾವಣಾ ಕಮಿಷನರ್ ಶೇಷನ್‌ರನ್ನು ಕಣಕ್ಕಿಳಿಸಿದೆ. ಇದರಿಂದ ಈ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ, ಸ್ಪರ್ಧೆಗೂ ರಂಗೇರಿದೆ. ತನ್ನನ್ನು ಸೋಲಿಸುವರ್‍ಯಾರು ಎಂದು ಗತ್ತಿನಿಂದ ಇದ್ದ ಅಡ್ವಾಣಿ ಮತ್ತು ಆತನ ಪ್ರಚಾರ ವ್ಯವಸ್ಥಾಪಕರಿಗೆ ಶೇಷನ್ ಬೆವರಿಳಿಸುತ್ತಿದ್ದಾರಂತೆ. ಸ್ವತಃ ಶೇಷನ್ ಪಾದಯಾತ್ರೆಗೆ ಇಳಿದು ಬೆವರಿಳಿಸುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾದ ಮೇಲೆ ಶೇಷನ್ ಪೂರ್ತಿ ಬದಲಾದ ವ್ಯಕ್ತಿ ಆಗಿದ್ದಾರಂತೆ. ಬ್ಯೂರಾಕ್ರಟ್ ಗತ್ತು ಬಿಟ್ಟು, ಸದಾ ಕೈಮುಗಿದು ಮುಗುಳ್ನಗುವ ಬಿಳಿ ಕುರ್ತಾಧಾರಿಯಾಗಿದ್ದಾರೆ. ಪತ್ರಕರ್ತರಿಗಂತೂ ಭಾರಿ ಅಚ್ಚರಿ. ಹಿಂದೆ ಅಧಿಕಾರದಲ್ಲಿ ಇದ್ದಾಗ ಪತ್ರಕರ್ತರನ್ನು ಕಾಯಿಸುತ್ತಿದ್ದ, ತಿರಸ್ಕಾರದಿಂದ ಕಾಣುತ್ತಿದ್ದ ಶೇಷನ್ ಈಗ ಭಾರೀ ವಿನಯದಿಂದ ಮಾತನಾಡಿಸುತ್ತಾರೆ. ಅವರಿಗಾಗಿ ತಾಳ್ಮೆಯಿಂದ ಕಾಯುತ್ತಾರಂತೆ. ಪತ್ರಕರ್ತರಿಗೆ ಮುಜುಗರವಾಗುವಷ್ಟು. ಕಮಿಷನರ್ ಆಗಿ ನೀವು ವಿಧಿಸಿದ ಖರ್ಚಿನ ಮಿತಿಯೊಳಗೆ ಪ್ರಚಾರ ಮುಗಿಸುತ್ತೀರಾ ಎಂದು ಕೇಳಿದಾಗ ಅದೆಲ್ಲಾ ಪ್ರಾಕ್ಟಿಕಲ್ ಅಲ್ಲ ಎಂದು ಹೇಳಿ ಪತ್ರಕರ್ತರನ್ನು ಸುಸ್ತು ಮಾಡಿದರಂತೆ.

ಅಡ್ವಾಣಿಗೆ ತೀವ್ರ ಸ್ಪರ್ಧೆ ನೀಡುತ್ತಿರುವುದಂತೂ ಒಳ್ಳೆ ಸುದ್ದಿ

ಉಮಾಭಾರತಿ ಬೆಂಬಲಿಗರ - ವಿರೋಧಿಗಳ ದಾಂಧಲೆ

ಉಮಾಭಾರತಿ ಅವರ ಎಂದಿನ ಖಜುರಾಹೋ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ, ... ಮೊದಲೇ ಘೋಷಿಸಿದ್ದರು. ಬೆನ್ನು ನೋವಿನ ಕಾರಣ ದುರ್ಗಮ ಗ್ರಾಮೀಣ ಪ್ರದೇಶವಾದ ಖಜುರಾಹೋದಲ್ಲಿ ಪ್ರಚಾರ ಕೈಗೊಳ್ಳಲು ಸಾಧ್ಯವಿಲ್ಲ, ಆದ್ದರಿಂದ ರಾಜಧಾನಿ ಭೂಪಾಲ್‌ನಲ್ಲಿ ತನಗೆ ಸೀಟು ಕೊಡಬೇಕು ಎಂದು ಕೇಳಿದ್ದರಂತೆ. ಇದನ್ನು ಮಾಜಿ ಬಿಜೆಪಿ ಮುಖ್ಯಮಂತ್ರಿ ಹಾಗೂ ಉಮಾಭಾರತಿಯ ಕಡು ವಿರೋಧಿ ಕೈಲಾಶ್ ಜೋಶಿ ಬಲವಾಗಿ ವಿರೋಧಿಸಿದ್ದಾರಂತೆ. ಕೊನೆಗೂ ಬಿಜೆಪಿ ಹೈಕಮಾಂಡ್ ಉಮಾಭಾರತಿಯ ಒತ್ತಡಕ್ಕೆ ಮಣಿದು ಭೂಪಾಲ್ ಸೀಟು ಕೊಟ್ಟಾಗ ಭೂಪಾಲದಲ್ಲಿ ಬಿಜೆಪಿಯ ಎರಡು ಗ್ಯಾಂಗುಗಳ ಕಾರ್ಯಕರ್ತರು ಭಾರಿ ಮಾರಾಮರಿ ನಡೆಸಿದರು. ಉಮಾಭಾರತಿಯ ಕಟೌಟ್ ಬ್ಯಾನರುಗಳನ್ನು ಸುಟ್ಟು ಹಾಕಲಾಯಿತು. ಉಮಾಭಾರತಿಯ ಬೆಂಬಲಿಗ ಕಾರ್ಯಕರ್ತರಿಗೆ ಏಟು ಕೊಡಲಾಯಿತು. ಈ ಘಟನೆಯ ಬಗ್ಗೆ ಬಿಜೆಪಿಯವರು ತಲೆಗೊಂದು ಸಮಜಾಯಿಷಿ ಕೊಟ್ಟರು ಬಿಜೆಪಿಯ ವಕ್ತಾರರು ಈ ದಾಂಧಲೆ ನಡೆಸಿದ್ದು ಕಾಂಗ್ರೆಸ್ ಕಾರ್ಯಕರ್ತರು ಎಂದು ನುಣುಚಿಕೊಳ್ಳಲು ಪ್ರಯತ್ನಿಸಿದರು. ಆದರೆ ಕೈಲಾಶ್ ಜೋಶಿ ತಮಗೆ ಸೀಟು ಕೊಡದೆ 'ಹೊರಗಿನ' ಉಮಾಭಾರತಿಗೆ ಸೀಟುಕೊಟ್ಟಿದ್ದು ಕಾರ್ಯಕರ್ತರಿಗೆ ಕೋಪತಂದಿದೆ. ಅದರ ಪ್ರದರ್ಶನವನ್ನು ಸ್ವಯಂಸ್ಫೂರ್ತಿಯಾಗಿ ಮಾಡಿದ್ದಾರೆ ಎಂದರು ಉಮಾಭಾರತಿ ಈ ದಾಂಧಲೆ ಸಂಘಟಿಸಿದ್ದು ಕೈಲಾಶ್ ಜೋಶಿಯ ಬೆಂಬಲಿಗರು ಎಂದು ನೇರವಾಗಿ ಆಪಾದಿಸಿದರು. ಮಧ್ಯಪ್ರದೇಶದ ರಾಜ್ಯ ನಾಯಕತ್ವ ಉಚ್ಚ ಜಾತಿಯ ಕೈಯಲ್ಲಿದ್ದು ಅವರು ತನ್ನಂತಹ 'ಹಿಂದುಳಿದ ಜಾತಿಗಳ' ನಾಯಕರನ್ನು ಸಹಿಸುವುದಿಲ್ಲ ಎಂದಿದ್ದಾರೆ. ಅಂತೂ ಬಿಜೆಪಿಯ ಜಗಳ ಬೀದಿಗೆ ಹರಿದುಕೊಂಡು ಬಂದಿದೆ.

ಸೀಟು ಸಿಗದ ಮಾಜಿ ಪ್ರಧಾನಮಂತ್ರಿಗಳು

ಇಬ್ಬರು ಮಾಜಿ ಪ್ರಧಾನ ಮಂತ್ರಿಗಳು ಸರಿಯಾದ ಭದ್ರ ಸೀಟು ಸಿಗದೆ ಈ ಬಾರಿ ಸ್ಪರ್ಧಿಸುತ್ತಿಲ್ಲ. ಪಿ.ವಿ.ನರಸಿಂಹರಾವ್ ಮತ್ತು ಐ.ಕೆ.ಗುಜ್ರಾಲ್ ಸರಿಯಾದ ಕ್ಷೇತ್ರ, ಸೀಟು ಸಿಗದೆ ಈ ಬಾರಿ ಸ್ಪರ್ಧಿಸುತ್ತಿಲ್ಲವಂತೆ. ವಿ.ಪಿ.ಸಿಂಗ್‌ಗೆ ಸ್ಪರ್ಧಿಸುವಂತೆ ಅವರ ಬೆಂಬಲಿಗರು ಒತ್ತಾಯಿಸುತ್ತಿದ್ದರೂ, ಆರೋಗ್ಯದ ಕಾರಣದಿಂದ ಅವರಿಗೆ ಸ್ಪರ್ಧಿಸಲಾಗುತ್ತಿಲ್ಲ. ಚಂದ್ರಶೇಖರ್ ಬಲಿಯಾದಿಂದ 7ನೇ ಬಾರಿಗೆ ತಮ್ಮ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ. ದೇವೇಗೌಡರು ಹಾಸನದಿಂದ ಕಣಕ್ಕೆ ಇಳಿದಿದ್ದಾರೆ. ಈ ಬಾರಿ ಮಾಜಿ ಪ್ರಧಾನಿಯಾದ ನಂತರ ವಾಜಪೇಯಿಯವರಿಗೂ ಇದೇ ಗತಿ ಬರಬಹುದೇ?

ನಿದ್ದೆ ಮಾಡಲಿಲ್ಲವಂತೆ

ಸೋನಿಯಾ ದಕ್ಷಿಣದಿಂದ ಆಂಧ್ರದ ಕಡಪಾ ಅಥವಾ ಕರ್ನಾಟಕದ ಬಳ್ಳಾರಿಯಿಂದ ಸ್ಪರ್ಧಿಸುತ್ತಾರೆ ಎಂಬ ವದಂತಿಯಿಂದ ಚಂದ್ರಬಾಬು ನಾಯ್ಡು ಸೋನಿಯ ನಾಮಪತ್ರ ಸಲ್ಲಿಸುವವರೆಗೆ ನಿದ್ದೆಗೆಟ್ಟರು.... ಸೋನಿಯಾ ಕಡಪಾಗೆ ಹೋದಾಗಂತೂ 'ಸಸ್ಪೆನ್ಸ್' ತಾರಕಕ್ಕೇರಿತ್ತು. ಕಡಪ್ಪಾದಿಂದ ಸೋನಿಯಾ ಸ್ಪರ್ಧಿಸಿದ್ದರೆ ಅವರ ವಿರುದ್ಧ ತೆಲುಗು ತಾರೆ ವಿಜಯಶಾಂತಿಯನ್ನು ಕಣಕ್ಕಿಳಿಸುವುದು ಎಂದು ನಿರ್ಧಾರವಾಗಿತ್ತಂತೆ. ಆದ್ದರಿಂದ ಸೆಲ್ಯುಲರ್ ಫೋನ್ ಮೇಲೆ ವಿಜಯಶಾಂತಿಯ ಜತೆ ಹಲವು ನಿಮಿಷಗಳಿಗೊಮ್ಮೆ ಸಂಪರ್ಕ ಇರಿಸಿಕೊಂಡಿದ್ದರಂತೆ. ಈ ಗಡಿಬಿಡಿಯಲ್ಲಿ ಆಂಧ್ರದ ತೆಲುಗುದೇಶಂ ಅಭ್ಯರ್ಥಿಗಳ ಪಟ್ಟಿಯನ್ನು 'ಸಸ್ಪೆನ್ಸ್'ನಲ್ಲಿ ಇರಿಸಲಾಗಿತ್ತಂತೆ. ಆ ರಾತ್ರಿ ಇಡೀ ಚಂದ್ರಬಾಬು ನಿದ್ದೆ ಮಾಡಲಿಲ್ಲವಂತೆ.

ರಾಮಮಂದಿರದ ಪ್ರಶ್ನೆಯಲ್ಲಿ ನಗೆಪಾಟಲು

ಇಲ್ಲ...... ಇದೆ.... ಖಂಡಿತಾ ಇದೆ....... ಇಲ್ಲವೇ ಇಲ್ಲ.........ಇದೆ.......ಈಗ ಇಲ್ಲ.....

ಹತ್ತು ದಿನಗಳಲ್ಲಿ ಹತ್ತು ದನಿಗಳು

ಈ ಬಾರಿ ಬಿಜೆಪಿ ತನ್ನದೇ ಪ್ರಣಾಳಿಕೆಯನ್ನು ಪ್ರಕಟಿಸಿಲ್ಲ. ಎನ್.ಡಿ.ಎ. ಪರವಾಗಿ ಪ್ರಧಾನಿಗಳು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದಾಗ ಪತ್ರಕರ್ತರು ರಾಮಜನ್ಮಭೂಮಿ, 370ನೇ ಕಲಮು, ಸಮಾನ ನಾಗರೀಕ ಸಂಹಿತೆಯಂತಹ ವಿವಾದಾತ್ಮಕ ವಿಷಯಗಳಿಗೆ ವಿರಾಮ ಮಾತ್ರ ಯಾಕೆ, ಪೂರ್ತಿಯಾಗಿ ಸಮಾಧಿ ಯಾಕೆ ಮಾಡಿಲ್ಲ ಎಂದು ಕೇಳಿದಾಗ 'ನಾವು ಈಗ ಇಟ್ಟಿದ್ದು ಮೊದಲ ಹೆಜ್ಜೆ ಮಾತ್ರ. ಅದೂ ದಿಟ್ಟ ಹೆಜ್ಜೆ' ಎಂದರು.

ಸಮಯಸಾಧಕತನವೇ ಅಧಿಕಾರದ ಉಸಿರು ಎಂದು ಈಗ ಬಲವಾಗಿ ನಂಬಿರುವ ಸಂಘ ಪರಿವಾರದವರಿಗೆ ಈ ಮಾತಿನಿಂದ ತಮ್ಮ 'ಓಟು ಬ್ಯಾಂಕು' ಗಳನ್ನು ಕಳೆದುಕೊಳ್ಳುವ ಭಯವಾಗಿರಬೇಕು. ಇಲ್ಲ, ಇದು ಈಗಲೂ ಬಿಜೆಪಿಯ ಅಜೆಂಡಾದಲ್ಲಿದೆ ಎಂದು ಬಿಜೆಪಿ ಸಿದ್ಧಾಂತಿಯೆಂದೆನಿಸಿದ ಪ್ರಧಾನ ಕಾರ್ಯದರ್ಶಿ ಗೋವಿಂದಾಚಾರ್ಯ ಸಾರಿದರು.

ಪೇಚಿಗೆ ಸಿಲುಕಿದ ಬಿಜೆಪಿಯ 'ಮುಖವಾಡ' ಪ್ರಧಾನಿ ಗೋವಿಂದಾಚಾರ್ಯರ ಹೇಳಿಕೆಗೆ 'ಆಶ್ಚರ್ಯ' ವ್ಯಕ್ತಪಡಿಸಿದರು. ಅವರ ಜತೆ ಮಾತನಾಡಿ ಅವರ ಉದ್ದೇಶ ತಿಳಿದುಕೊಂಡು ನಂತರ ಮಾತನಾಡುತ್ತೇನೆ ಎಂದರು. ಗೋವಿಂದಾಚಾರ್ಯ ತನ್ನ ಹೇಳಿಕೆಯನ್ನು ತಪ್ಪಾಗಿ ತಿರುಚಲಾಗಿದೆ ಎಂದರು.

ಆದರೆ ಈ ವಿವಾದಾತ್ಮಕ ಅಂಶಗಳ ಕುರಿತ ವಿವಾದ ಅಲ್ಲಿಗೇ ಮುಗಿಯಲಿಲ್ಲ. ಸಮಯಸಾಧಕ ಸುಳ್ಳುಗಳೇ ಇವರ ಹೂರಣವಾಗಿರುವಾಗ ಅದು ಮುಗಿಯುವುದಾದರೂ ಹೇಗೆ?

ಗೃಹಮಂತ್ರಿ ಅಡ್ವಾಣಿ, 'ಸುದ್ದಿ ಮಂತ್ರಿ' ಪ್ರಮೋದ ಮಹಾಜನ್ ಸ್ಪಷ್ಟೀಕರಣ ನೀಡಿದರು - ಯಾರಿಗೆ ಯಾವುದಕ್ಕೆ ಈ ಸ್ಪಷ್ಟೀಕರಣ ಎಂದು ಜನ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಇನ್ನೊಬ್ಬ ಬಿಜೆಪಿಯ ಪ್ರಧಾನಕಾರ್ಯದರ್ಶಿ ವೆಂಕಯ್ಯ ನಾಯ್ಡು ಮತ್ತೆ ತಮ್ಮ ಮಿತ್ರ ಫರ್ನಾಂಡೀಸ್, ಹೆಗ್ಡೆ ಇತ್ಯಾದಿಗಳ ಪೇಚನ್ನು ನೀಗಿಸಲು ಮುಂದಾದರು. "ಒಂದು ವಿಷಯ ಸ್ಪಷ್ಟ ಪಡಿಸುತ್ತೇನೆ-ನಾಳೆ ನಾವೇ ಏಕಾಂಗಿಯಾಗಿ ಚುನಾವಣೆ ಹೋರಾಟ ನಡೆಸಿ 370 ಸ್ಥಾನ ಪಡೆದರೂ ರಾಮ ಮಂದಿರ ನಮ್ಮ ಚುನಾವಣಾ ಅಜೆಂಡಾದ ಭಾಗವಾಗಿರುವುದಿಲ್ಲ" ಎಂದು ಅಬ್ಬರಿಸಿದರು. ಈ ಮೂರು ವಿವಾದಾತ್ಮಕ ಅಂಶಗಳಲ್ಲಿ ಕನಿಷ್ಠ ಅಯೋಧ್ಯೆಯಂತೂ ಇತ್ಯರ್ಥವಾದ ವಿವಾದ ಎಂದರಂತೆ ಈ ಮಹಾ ವಕ್ತಾರ. ಇತ್ಯರ್ಥವೆಂದರೆ ಏನರ್ಥ? ಯಾವ ಪಕ್ಷವೂ ಈಗ ಅದನ್ನು ಎತ್ತುತ್ತಿಲ್ಲ ಅದೀಗ ಯಾವ ಪಕ್ಷದ ಅಜೆಂಡಾವೂ ಆಗಿಲ್ಲ ಎಂದು ಸ್ಪಷ್ಟಪಡಿಸಿದರು. 'ವಿಹೆಚ್‌ಪಿ ಅಥವಾ ಕರ ಸೇವಕರಿಗೂ ನಮಗೂ ಏನೂ ಸಂಬಂಧವಿಲ್ಲ. ನಾನು ನನ್ನ ಪಕ್ಷದ ಪರವಾಗಿ ಮಾತನಾಡುತ್ತಿದ್ದೇನೆ" ಎಂದೂ ಸೇರಿಸಿದರು.

ಆದರೆ ಮರುದಿನ ಮತ್ತೆ ಬೇರೆಯೇ ಹೇಳಿಕೆ ಬಂತು. ಈ ಬಾರಿ ಇನ್ನೊಬ್ಬ ಬಿಜೆಪಿ ಮುಖಂಡನಿಂದಲ್ಲ. ಸ್ವತಃ ವೆಂಕಯ್ಯ ನಾಯ್ಡುರವರಿಂದಲೇ! ಬಿಜೆಪಿ ಈ ವಿವಾದಾತ್ಮಕ ಅಂಶಗಳನ್ನು ಮುಂದೂಡಲು ಒಪ್ಪಿದೆ, ಮುಂದೂಡುವುದು ಎಂದರೆ ಒಂದು ನಿರ್ದಿಷ್ಟ ಕಾಲಾವಧಿಗೆ ಮಾತ್ರವೇ ಅಲ್ಲವೇ. ಪ್ರಣಾಳಿಕೆಯ ಕಾಲಾವಧಿ ಮುಂದಿನ ಚುನಾವಣೆವರೆಗಾದ್ದರಿಂದ ಅಲ್ಲಿಯವರೆಗೆ ಮುಂದೂಡಲು ಒಪ್ಪಿದ್ದೇವೆ ಎಂದರ್ಥ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿದರು.

ಉತ್ತರ ಪ್ರದೇಶದ ಹಿರಿಯ ಬಿಜೆಪಿ ಮುಖಂಡರಾದ ಕಲ್ರಾಜ್ ಮಿಶ್ರಾ ಇನ್ನೂ ಸ್ಪಷ್ಟವಾಗಿ ಕನಿಷ್ಠ ತಮ್ಮ ರಾಜ್ಯದಲ್ಲಂತೂ ಈ ವಿವಾದಾತ್ಮಕ ಅಂಶಗಳನ್ನು ತಾವು ಖಂಡಿತಾ ಕೈ ಬಿಟ್ಟಿಲ್ಲ ಎಂದು ಸೂಚಿಸಿದರು. ಎಷ್ಟೆಂದರೂ 'ಆಶ್ವಾಸನೆ'ಗಳನ್ನು ಪುನರಾವರ್ತಿಸಿ ಅಧಿಕಾರ ಉಳಿಸಿಕೊಳ್ಳುವ ಪ್ರಶ್ನೆಯಲ್ಲವೇ?


ಒಟ್ಟಿನಲ್ಲಿ ಹತ್ತು ದಿನಗಳಲ್ಲಿ ಹತ್ತು ದನಿಗಳಲ್ಲಿ ಬಿಜೆಪಿ ಮುಖಂಡರು ಮಾತನಾಡಿದರು. ಪಾಪ! ಏನು ಮಾಡುವುದು? ಒಂದೆಡೆ ತಮ್ಮ ಅನುಯಾಯಿಗಳನ್ನು ತೃಪ್ತಿಪಡಿಸಬೇಕು, ಇನ್ನೊಂದುಕಡೆ ಕೋಟ್ಯಾಂತರ ಮತದಾರರೆದುರು ತಮ್ಮ ಮುಖವಾಡ ಕಳಚಬಾರದು. 'ಹತ್ತು ತಲೆ - ಹತ್ತು ಅಭಿಪ್ರಾಯ' ಫ್ಯಾಸಿಸ್ಟ್ ರಾವಣರ ಸಹಜ ಸ್ವರೂಪವಂತೆ. 'ಇತಿಹಾಸದ ಪುನರಾವರ್ತನೆಯಾಗುತ್ತದೆ' ಎಂಬುದು ಇನ್ನೊಂದು ನಾಣ್ಣುಡಿ. ಅದಕ್ಕೆ ಮಾರ್ಕ್ಸ್‌ರವರು ಸೇರಿಸಿದ ಉದ್ಗಾರ - ಎರಡನೇ ಬಾರಿ ದುರಂತವಾಗಿ ಪುನರಾವರ್ತನೆಯಾಗುತ್ತದೆ ಎಂದು. ದುರಂತವಾಗುತ್ತದೋ ಇಲ್ಲವೋ, ಸದ್ಯಕ್ಕೆ ನಗೆಪಾಟಲಂತೂ ಆಗಿದ್ದಾರೆ ಬಿಜೆಪಿ ಮುಖಂಡರು.



ಕೃಪೆ: ಹಿಂದು ನಲ್ಲಿ ಕೇಶವ್

ಕಳೆದ ಬಾರಿಯಂತೆ ಈ ಬಾರಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಪ್ರಕಟಿಸಿಲ್ಲ. ಬದಲಿಗೆ ತಾನು ಕಲೆ ಹಾಕಿದ ಹತ್ತು-ಹಲವು ಪಕ್ಷಗಳ ಎನ್.ಡಿ.ಎ. ಪ್ರಣಾಳಿಕೆಯನ್ನು ಪ್ರಕಟಿಸಿದೆ. ಆದರೆ ಮುದ್ರಿತ ಅಕ್ಷರಗಳಿಗಿಂತ ವಾಜಪೇಯಿಯವರ ಫೋಟೋಗಳೇ ಹೆಚ್ಚು ನೇರ ಆಕ್ರಮಿಸಿಕೊಂಡಿರುವ ಈ ಟೊಳ್ಳು ದಸ್ತಾವೇಜಿನ ಅರ್ಥವೆಂದರೆ ಬಿಜೆಪಿಯ ನಿಜವಾದ ಅಜೆಂಡಾ ನಂತರ ಬರುತ್ತದೆ ಎಂದು. ಈ ಪ್ರಣಾಳಿಕೆಯ ಒಂದು ವಿಶ್ಲೇಷಣೆ

ಎನ್.ಡಿ.ಎ. ಪ್ರಣಾಳಿಕೆ
ಬಿಜೆಪಿ ಅಜೆಂಡಾಕ್ಕಾಗಿ ಒಂದು ಖಾಲಿ ದಸ್ತಾವೇಜು



ಕೃಪೆ: 'ಹಿಂದು'ನಲ್ಲಿ ಕೇಶವ್

ಪ್ರಕಾಶ್ ಕಾರಟ್

ಎನ್.ಡಿ.ಎ. (ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ) ಎಂಬ ಬೋರ್ಡು ಹಾಕಿಕೊಂಡಿರುವ ಬಿಜೆಪಿ ನೇತೃತ್ವದ ಕೂಟ ಬಿಡುಗಡೆ ಮಾಡಿರುವ ಚುನಾವಣಾ ಪ್ರಣಾಳಿಕೆ ಒಂದು ಬಲಪಂಥೀಯ ಸರ್ವಾಧಿಕಾರಶಾಹಿ ಅಜೆಂಡಾವಲ್ಲದೆ ಮತ್ತೇನೂ ಅಲ್ಲ.

ಕಳೆದ ಬಾರಿ ಬಿಜೆಪಿ ಬೆಸೆದ ಹತಾಶ ಕೂಟದ ಮುಖ್ಯ ಉದ್ದೇಶ ಕೇಂದ್ರದಲ್ಲಿ ಅಧಿಕಾರ ಕಬಳಿಸುವುದು. ಆದ್ದರಿಂದ ಚುನಾವಣೆಯ ನಂತರ ತನ್ನ ಪ್ರಣಾಳಿಕೆಯನ್ನು ಬದಿಗಿಟ್ಟು ಒಂದು ರಾಷ್ಟ್ರೀಯ ಅಜೆಂಡಾ ಪ್ರಕಟಿಸಿತು. ಈ ಕೂಟದ ಸಂದರ್ಭಸಾಧಕತನ 13 ತಿಂಗಳ ಅದರ ಆಳ್ವಿಕೆಯಲ್ಲಿ ಸ್ಪಷ್ಟವಾಯಿತು. ಈ ಕೂಟದ ಅನೈತಿಕ ಸ್ವರೂಪದಿಂದಾಗಿಯೇ ಅದು ಕುಸಿಯಿತು. ಈ ಕೂಟಕ್ಕೆ ಈಗ ಕೊಟ್ಟಿರುವ ಹೊಸ ಹೆಸರು ಈ ಕೂಟದ ಸಂದರ್ಭಸಾಧಕತನವನ್ನಂತೂ ಮರೆ ಮಾಚಲು ಸಾಧ್ಯವಿಲ್ಲ.

ಈ ಪ್ರಣಾಳಿಕೆಗೂ ಕಳೆದ ಬಾರಿಯ ರಾಷ್ಟ್ರೀಯ ಅಜೆಂಡಾಕ್ಕೂ ಇರುವ ಏಕೈಕ ವ್ಯತ್ಯಾಸವೆಂದರೆ ಪಾಕಿಸ್ತಾನ ಪ್ರೇರಿತ ಕಾರ್ಗಿಲ್ ಘರ್ಷಣೆಯ ಲಾಭ ದೋಚಲು ಉಗ್ರ ರಾಷ್ಟ್ರಾಭಿಮಾನದ ಪ್ರದರ್ಶನ. ಕಳೆದ ಬಾರಿ ಅಧಿಕಾರ ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಅಯೋಧ್ಯೆಯಲ್ಲಿ ರಾಮದೇವಸ್ಥಾನ, ಜಮ್ಮು-ಕಾಶ್ಮೀರ ಕುರಿತ 370 ನೇ ಕಲಮಿನ ರದ್ಧತಿ ಮತ್ತು ಕಲಮು 300ರ ತಿದ್ದುಪಡಿ ಅಥವಾ ಸಮರೂಪದ ನಾಗರೀಕ ಸಂಹಿತೆ - ಹಿಂದುತ್ವದ ಈ ಮೂರು ಮೂಲಭೂತ ಅಂಶಗಳನ್ನು ಅದು ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿಸಿರಲಿಲ್ಲ. ಈ ಬಾರಿ ತನ್ನ ಮಿತ್ರರೊಂದಿಗೆ ವೈರುಧ್ಯ ಕಣ್ಣಿಗೆ ಹೊಡೆಯುವಂತೆ ಇರದಿರಲಿ ಎಂದು ಅದು ತನ್ನ ಪ್ರಣಾಳಿಕೆಯನ್ನೇ ಪ್ರಕಟಿಸಿಲ್ಲ. ಅಧಿಕಾರದ ಮೇಲೆ ತನ್ನ ಹಿಡಿತವನ್ನು ಕ್ರೋಢೀಕರಿಸಿದ ಮೇಲೆಯೇ ಈ ಅಂಶಗಳನ್ನು ಮತ್ತೆ ತನ್ನ ಅಜೆಂಡಾದಲ್ಲಿ ತರುವುದು ಆರ್.ಎಸ್.ಎಸ್.-ಬಿಜೆಪಿಯ ಹಂಚಿಕೆ.

ನಿಜ ಅಜೆಂಡಾ ಹಿಂದೆ ಸರಿದಿಲ್ಲ

ರಾಷ್ಟ್ರೀಯ ಅಜೆಂಡಾ ಏನೇ ಇದ್ದರೂ ಅದರ ನಿಜ ಅಜೆಂಡಾ ಎಂದೂ ಹಿನ್ನೆಲೆಗೆ ಸರಿದಿರಲಿಲ್ಲ ಎಂಬುದನ್ನು ವಾಜಪೇಯಿ ಸರಕಾರದ ಕೆಲಸಗಳೇ ತೋರಿಸಿವೆ. ಎಲ್ಲಾ ನಾಗರಿಕರನ್ನು ಸಮಾನವಾಗಿ ಕಾಣುವುದಾಗಿ ಅಜೆಂಡಾ ಹೇಳಿತ್ತು. ಆದರೆ ಕಂಡದ್ದೇನು? ದೇಶದಾದ್ಯಂತ ಕ್ರಿಶ್ಚಿಯನ್ ಕೋಮಿನ ವಿರುದ್ಧ ಅತ್ಯಂತ ದುಷ್ಟ ದಾಳಿಗಳನ್ನು! ಅಜೆಂಡಾ "ನೈಜ" ಜಾತ್ಯಾತೀತತೆಯ ಮಾತಾಡಿತ್ತು. ಕರ್ನಾಟಕದಲ್ಲಿ ಕೋಮುಗಲಭೆಗಳು ಗುಜರಾತಿನಲ್ಲಿ ಮುಸ್ಲಿಮರ ಮೇಲೆ ಧಾಳಿ, ಇತ್ತೀಚೆಗೆ ಅಹಮದಾಬಾದಿನ ಗಲಭೆಗಳು ಅಸಹನೆ, ಬೆದರಿಕೆಗಳ ಮೂಲಕ ಅಲ್ಪ ಸಂಖ್ಯಾತರನ್ನು ಹೆದರಿಸುವ ಹಿಂದುಪುರ ಶಕ್ತಿಗಳ ಸಂಚನ್ನು ಮತ್ತೆ ನೆನಪಿಸಿದೆ.

ಎನ್.ಡಿ.ಎ. ಪ್ರಣಾಳಿಕೆ ಆರ್ಥಿಕ ರಂಗದಲ್ಲಿ ತನ್ನದು "ಎಡಪಂಥೀಯ ನಿಲುವೂ" ಅಲ್ಲ, "ಬಲಪಂಥೀಯ ನಿಲುವೂ" ಅಲ್ಲ ಎಂಬ ಜಾಣ ಮಾತುಗಳ ನಡುವೆ ಯಾವುದೇ ನಾಚಿಕೆಯಿಲ್ಲದೆ ಮುಂದಿಟ್ಟಿರುವುದು ದೊಡ್ಡ ಬಂಡವಾಳಿಗರ ಪರವಾದ ನೀತಿಗಳನ್ನೇ. ಆದ್ದರಿಂದಲೇ ತಾನೇ ಬಂಡವಾಳಿಗರ ಸಂಸ್ಥೆ ಸಿ.ಐ.ಐ.ನ ಮುಖ್ಯಸ್ಥ ರಾಹುಲ್ ಬಜಾಜ್ "ಎನ್.ಡಿ.ಎ. ಪ್ರಣಾಳಿಕೆ ಕಾಂಗ್ರೆಸ್ ಪ್ರಣಾಳಿಕೆಗಿಂತ ಎಲ್ಲಕ್ಕೂ ಹೆಚ್ಚು ಸುಧಾರಣಾ-ಪರ ಹಾಗೂ ಭಾರತೀಯ ಉದ್ದಿಮೆ-ಪರ ಪ್ರಣಾಳಿಕೆ" ಎಂದು ಹೊಗಳಿದ್ದು.

ಮತ್ತೆ 'ಸ್ವದೇಶಿ'ಯ ಟೊಳ್ಳು ಮಾತು

ಈ ಬಾರಿಯೂ ಅದು 'ಸ್ವದೇಶಿ'ಯ... ಮಾತಾಡಿದೆ, ...ಷ್ಟ್ರೀಯ ಅಧಿಕಾರವನ್ನು ಬಡಮೇಲು ಮಾಡುವಂಥದ್ದೇನು ಮಾಡುವುದಿಲ್ಲ ಎಂದಿದೆ. ಆದರೆ ಕಳೆದ 13 ತಿಂಗಳಲ್ಲಿ ವಿದೇಶಿ ಬಂಡವಾಳಕ್ಕೆ ಕೊಟ್ಟ ಅನ್ಯಾಯದ ರಿಯಾಯ್ತಿಗಳು, ವಿಮಾರಂಗವನ್ನು ಅವರಿಗೆ ತೆರೆಯಲು ಕೊಟ್ಟದ್ದು ಇತ್ಯಾದಿಗಳ ನಂತರ ಯಾರು ತಾನೆ ಮೋಸ ಹೋಗಲು ಸಾಧ್ಯ?

"ಸಾರ್ವಜನಿಕ ವಲಯದ ಪುನರ್ರಚನೆ, ಪುನರ್ವಸತಿ ಹಾಗೂ ಶೇರು ವಿಕ್ರಯ"ದ ಭರವಸೆ ನೀಡಿ ಸಂಪೂರ್ಣ ಹೊಸಕಿ ಹಾಕಲು ತಾನು ಬದ್ದ ಎಂದು ಮತ್ತೆ ಹೇಳಿದಂತಾಗಿದೆ. ಇದರಲ್ಲೇನು ಆಶ್ಚರ್ಯವಿಲ್ಲ ಬಿಡಿ.

ಕಾರ್ಮಿಕರಿಗೆ ನ್ಯಾಯ ಒದಗಿಸುವ, ನಿರುದ್ಯೋಗ ನಿರ್ಮೂಲ ಮಾಡುವ, ಆಹಾರ ಭದ್ರತೆ ಒದಗಿಸುವ ಆಶ್ವಾಸನೆಗಳು 13 ತಿಂಗಳ ಅವಧಿಯ ಹಿನ್ನೆಲೆಯಲ್ಲಿ ಶುದ್ದ ಟೊಳ್ಳು. ಕಳೆದ ಬಾರಿ ಬಿಜೆಪಿ ಚುನಾವಣೆ ಭರವಸೆ ನೀಡಿದ ವರ್ಷಕ್ಕೆ ಒಂದು ಕೋಟಿ ಉದ್ಯೋಗಾವಕಾಶಗಳ ಬಗೆಗೆ ಈ ಬಾರಿ ಏನೂ ಹೇಳಿಲ್ಲ.

ರೇಶನ್ ಅಥವಾ ಸಾರ್ವಜನಿಕ ವಿತರಣಾ ವ್ಯವಸ್ಥೆ ವಿಷಯದಲ್ಲಿಯೂ ವಾಜಪೇಯಿ ಸರಕಾರದ ಬಡವರ ವಿರುದ್ದವಾದ ಸ್ವರೂಪ ಜಗಜ್ಜಾಹೀರವಾಗಿದೆ. ರೇಶನ್ ವ್ಯವಸ್ಥೆ ಬಹಳ ಸಮಯದಿಂದ ಜಾರಿಯಲ್ಲಿದ್ದ ಕಡೆಗಳಲ್ಲೂ ಅವು ನಿಷ್ಪ್ರಯೋಜಕವಾಗುವಂತೆ ಮಾಡಲಾಗಿದೆ. ಏಕೆಂದರೆ ಬಿಜೆಪಿಗೆ ಹಣ ಒದಗಿಸುವವರು ದೊಡ್ಡ ವ್ಯಾಪಾರಿಗಳು. ರೇಶನ್, ಅಕ್ಕಿ, ಗೋಧಿ, ಸಕ್ಕರೆಯ ನೆಲೆ 40ರಿಂದ 60 ಶೇ. ಏರಿದ್ದು ಜನಗಳಿಗೆ ಚೆನ್ನಾಗಿ ನೆನಪಿದೆ.

ಮತ್ತೆ ಗೋಸುಂಬೆತನ

ರಾಷ್ಟ್ರೀಯ ಅಜೆಂಡಾದಲ್ಲಿ ಹೇಳಿರುವ ರಾಜ... ಹಕ್ಕುಗಳನ್ನು ವಿಸ್ತಾರಗೊಳಿಸುವ ಮಾತು ... ಪ್ರಣಾಳಿಕೆಯಲ್ಲೂ ಇದೆ. ಆದರೆ ಒಂದಲ್ಲ ಎ... ಬಾರಿ 356ನೇ ಕಲಮನ್ನು ಬಿಹಾರದಲ್ಲಿ ಬಳ... ಸರಕಾರ ಸರ್ಕಾರಿಯ ಆಯೋಗದ ಶಿಫಾರಸು... ಜಾರಿಯ ಬಗ್ಗೆ ಮಾತಾಡುವ ಗೋಸುಂಬೆ... ಪಾರವೇ ಇಲ್ಲ.

ಈ ಪ್ರಣಾಳಿಕೆಯಲ್ಲಿ ಎದ್ದು ಕಾಣುವ ಒ... ಮುಖ್ಯ ಸಂಗತಿಯೆಂದರೆ ಸರಕಾರ ಸಿಟಿಬಿ... ಸಹಿಹಾಕುವ ಬಗ್ಗೆ ಪ್ರಸ್ತಾಪವೇ ಇಲ್ಲ... ತಿಂಗಳಾನುಗಟ್ಟಲೆ ಟಾಲ್ಬೋಟ್-ಜಸ್ವಂತ್ ಸಿ... ಗುಪ್ತ ಮಾತುಕತೆ ನಡೆದದ್ದು ಎಲ್ಲರಿಗೂ ಗೊ... ಆದರೆ ಇಂತಹುದೊಂದು ನಡೆದೇ ಇಲ್ಲವೇ... ಎಂಬಂತೆ ಪ್ರಣಾಳಿಕೆ ದಿವ್ಯ ಮೌನ ತಾ... ಸ್ವಾತಂತ್ರ್ಯದ ನಂತರ ದೇಶ ಕಂಡ ಈ ಅತ... ಸಾಮ್ರಾಜ್ಯಶಾಹಿ-ಪರ ಸರ್ಕಾರ ತನ್ನ ಪತ... ಮೊದಲು ಸೆಪ್ಟೆಂಬರ್ 1999 ರಲ್ಲಿ ಸಿಟಿಬಿಟ... ಸಹಿ ಹಾಕುವ ವಚನವನ್ನು ಅಮೆರಿಕನ್ ಆಳರ... ನೀಡಿತ್ತು.

ಕಾರ್ಗಿಲ್ ವಿಮರ್ಶೆಯ ಮಾತೇಕೆ ಇಲ್ಲ?

ಪೋಖ್ರಾನ್‌ನಲ್ಲಿ ಪರಮಾಣು ಶಸ್ತ್ರಗಳ ನ... ಪರಮಾಣು ಶಸ್ತ್ರೀಕರಣದ ಕೇಡಿನ ...

ಜನರ ನೆಮ್ಮದಿ ಕೆಡಿಸುವ ಆಲೋಚನೆ

ರಾಷ್ಟ್ರದ ಉನ್ನತ ಹುದ್ದೆಗಳಿಗೆ ಭಾರತೀಯ ಸಂಜಾತರು ಮಾತ್ರ ಅರ್ಹರು ಎಂಬುದನ್ನು ಕಡ್ಡಾಯಗೊಳಿಸುವುದು ಸೋನಿಯಾಗಾಂಧಿ ಅಥವಾ ಮತ್ತಾರನ್ನೋ ಅಧಿಕಾರದಿಂದ ದೂರವಿಡುವ ಸಂಕುಚಿತ ದೃಷ್ಟಿಯ ಮಾತಲ್ಲ. ಭಾರತೀಯ ಸಮಾಜದ ಬಹುಧರ್ಮೀಯ, ಬಹುಸಂಸ್ಕೃತಿಯ ಗುಣಲಕ್ಷಣಗಳನ್ನೆಲ್ಲ ಧ್ವಂಸ ಮಾಡಿ ಜನರ ನೆಮ್ಮದಿ ಕೆಡಿಸುವ ಆಲೋಚನೆ. ಮತದಾರರು ಮೈತ್ರಿಕೂಟದ ಸಂವಿಧಾನ ತಿದ್ದುಪಡಿಯ ಹಿಂದಿನ ಉದ್ದೇಶಗಳನ್ನು ಕುರಿತು ಗಂಭೀರವಾಗಿ ಯೋಚಿಸಬೇಕು ಎಂದು 'ಸುಧಾ' ವಾರಪತ್ರಿಕೆಯ ಸಂಪಾದಕೀಯ ಹೇಳಿದೆ.

ಪ್ರಜಾಪ್ರಭುತ್ವ ವಿರೋಧಿ

ಈಗ ವಿಧಾನಸಭೆ, ಲೋಕಸಭೆಗಳು ಐದು ವರ್ಷ ಪೂರ್ಣಾವಧಿ ಅಸ್ತಿತ್ವದಲ್ಲಿ ಇರುವಂತೆ ಶಾಸನ ಮಾಡುವ ಉದ್ದೇಶ ಸಾಧುವಲ್ಲ, ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾದದು ಎಂದು ಅಭಿಪ್ರಾಯಪಟ್ಟಿರುವ 'ಪ್ರಜಾವಾಣಿ' ದೈನಿಕದ ಸಂಪಾದಕೀಯ "ಶಾಸನ ಸಭೆಗಳು ಐದು ವರ್ಷ ಅಬಾಧಿತವಾಗಿ ಮುಂದುವರೆಯದಂತೆ ಆದರೆ, ಸರ್ಕಾರಗಳು ವಿಶ್ವಾಸಮತ ಕಳೆಕೊಂಡಾಗ ಪಕ್ಷಾಂತರಗಳು, 'ಕುದುರೆ ವ್ಯಾಪಾರ' ಮುಂತಾದವಕ್ಕೆ ಅವಕಾಶ ಖಚಿತ, ತಮ್ಮ ಅಧಿಕಾರಾವಧಿ ಐದು ವರ್ಷ ಖಚಿತ ಎಂದು ಅರಿತ ಶಾಸಕರು, ಸಂಸದರು ಬೇಜವಾಬ್ದಾರಿಯಿಂದ ವರ್ತಿಸುವ ಅಪಾಯವೂ ಇಲ್ಲದಿಲ್ಲ" ಎಂದು ಎಚ್ಚರಿಸಿದೆ.

ಹೀಗೊಂದು ಟೀಕೆ

"13 ತಿಂಗಳೂ ತಾಳಿಕೊಳ್ಳಲಾರದ ತನ್ನದೇ ವೈರುಧ್ಯಗಳ ಭಾರದಿಂದ ಕುಸಿದ ಸುಮಿಶ್ರ ಕೂಟವೊಂದು ಸ್ಥಿರ ಆಳ್ವಿಕೆಯ ಭರವಸೆಯ ಆಧಾರದಲ್ಲಿ ಹೊಸದೊಂದು ಜನಾದೇಶ ಕೇಳುವ ಸಾಹಸ ಮಾಡಿರುವುದು ಈ ಪ್ರಣಾಳಿಕೆಯ ಒಂದು ಹಾಸ್ಯಾಸ್ಪದ ಸಂಗತಿ. ಅದು ಕೂಡಾ ಎನ್.ಡಿ.ಎ.ದ 1998 ರ ಆದರ ಆವೃತ್ತಿಗಿಂತ ಕಮ್ಮಿಯೇನು ಭಿನ್ನತೆಯಿರದ, ಮಿತಿಮೀರಿದ ಒಂದು ಕೂಟವಾಗಿರುವಾಗ. ಇನ್ನೊಂದು ಕಡೆ ಹೊಸ ಲೋಕಸಭೆಯಲ್ಲಿ ತನ್ನದೇ ಬಹುಮತವನ್ನು ಪಡೆಯಬಹುದಾದಷ್ಟು ಜನನೆಲೆಯ ಭರವಸೆಯೇನೂ ಕಾಣದಿದ್ದರೂ ಸಮಿಶ್ರ ... ಮುಖ ಸಿಂಡರಿಸಿಕೊಳ್ಳುವ ಕಾಂಗ್ರೆಸ್ (ಐ) ... ...ಯ ಬಗ್ಗೆ ಚುನಾವಣಾ ವಿಷಯ...ಗ ... ಕೂಡಾ ಸ್ಥಿರತೆಯನ್ನು ತನ್ನ ...ಮಾಡಿದೆ" - ಹೀಗೆಂದು 'ದಿ ಹಿಂದೂ' ...ಟಿಪ್ಪಣಿ ಮಾಡಿದೆ.

ಕಾರ್ಮಿಕರಿಗೆ ಅಗೌರವ ತೋರಿರುವ ಬೇಜವಾಬ್ದಾರಿ ಬಿಜೆಪಿ/ಎನ್.ಡಿ.ಎ. ಆಶ್ವಾಸನೆ

ಸುಮಾರು ಎರಡು ಕೋಟಿ ಕಾರ್ಮಿಕರ ಉಳಿತಾಯಗಳನ್ನು (ಭವಿಷ್ಯ, ನಿಧಿ, ಪೆನ್ಷನ್ ಇತ್ಯಾದಿ ಪ್ರತಿತಿ... ಸಂಬಳದಿಂದ ನೀಡುವ ವಂತಿಗೆಗಳಿಂದ ಸಂಗ್ರಹವಾದ ನಿಧಿ) ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಮಾರುಕಟ್ಟೆಯ... ಹೂಡುವುದಾಗಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಕೂಟದ ಚುನಾವಣಾ ಪ್ರಣಾಳಿಕೆ ಹೇಳಿದೆ. ಈ ಹಿಂದೆ ... ಸಮಿತಿ ಇಂತಹ ಸಲಹೆ ನೀಡಿದ್ದಾಗ ದೇಶದ ಕಾರ್ಮಿಕ ಸಂಘಗಳು ವಿರೋಧಿಸಿದ್ದವು. ಕಾರ್ಮಿಕರ ಈ ಉಳಿತಾಯ... ಭದ್ರತೆಯ ದೃಷ್ಟಿಯಿಂದ ಮತ್ತು ಕಾರ್ಮಿಕರ ಈ ಹಣದ ಹೂಡಿಕೆಯಿಂದ ಪ್ರಯೋಜನ ಪಡೆಯಲು ಮಾಲೀ... ಕಾರ್ಮಿಕರ ಬಗ್ಗೆ ಗೌರವದ ಅಭಾವದಿಂದಾಗಿ ಕಾರ್ಮಿಕ ಸಂಘಗಳು ಈ ಸಲಹೆಯನ್ನು ವಿರೋಧಿಸಿದ್ದವು. ಈಗ... ಅದನ್ನು ವಿರೋಧಿಸುವುದಾಗಿ ಐದು ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿ ಹೇಳಿಕೆ ನೀಡಿವೆ. ***ಈ ಐದ... ಬಿಜೆಪಿ ಒಲವಿಗೆ ಬಿ.ಎಂ.ಎಸ್. ಕೂಡಾ ಸೇರಿದೆ ಎಂಬುದು ಗಮನಾರ್ಹ.***

ಕಾರ್ಮಿಕರ ಈ ಉಳಿತಾಯ ಯಾವುದೇ ರಾಜಕೀಯ ಪಕ್ಷದ ಅಥವಾ ಸರಕಾರದ ಸೊತ್ತಲ್ಲ. ಬಿಜೆಪಿ ಅಥ... ಬೇರೆ ಯಾವುದೇ ಪಕ್ಷಕ್ಕೆ ಇವರ ಹೂಡಿಕೆಯ ಬಗ್ಗೆ ಮಾತನಾಡಲು ಯಾವುದೇ ಅಧಿಕಾರವಿಲ್ಲ. ಕಾಮಿ... ಪ್ರತಿನಿಧಿಗಳು ಸಮಾನ ಪ್ರಾತಿನಿಧ್ಯ ಹೊಂದಿರುವ ಭವಿಷ್ಯ ನಿಧಿ ಟ್ರಸ್ಟಿಗಳ ಕೇಂದ್ರೀಯ ಮಂಡಳಿಯ ಮಂಜೂರ... ಇಲ್ಲದೆ ಸರಕಾರಕ್ಕೆ ಕೂಡಾ ಈ ಹಣದ ಹೂಡಿಕೆಯ ಹಕ್ಕು ಇಲ್ಲ. ಹೀಗಿರುವಾಗ ಬಿಜೆಪಿ ಜನಗಳ ಹ... ಹೂಡಿಕೆಯ ಬಗ್ಗೆ ಇಂತಹ ಬೇಜವಾಬ್ದಾರಿ ಭರವಸೆ ನೀಡಲು ಹೇಗೆ ಸಾಧ್ಯ ಎಂದು ಈ ಕಾರ್ಮಿಕ ಸಂಘಟನೆ... ಪ್ರಶ್ನಿಸಿವೆ.

ಶೇರು ಮಾರುಕಟ್ಟೆಗಳಲ್ಲಿ ಕಾರ್ಮಿಕರ ಹಣಕ್ಕೆ ಭದ್ರತೆಯಿ... ...ಲ್ಲ. ಆದ್ದರಿಂದಲೇ ಕಾರ್ಮಿಕರು ತಮ್ಮ ಹಣಕ್ಕೆ ಬಡ್ಡಿದರವನ್ನು ಕೂಡಾ ... ...ಸಲು ಕೂಡಾ ಸಿದ್ಧವಾಗಿರುವುದು. ಖಾಸಗೀ ವಲಯಕ್ಕೆ ಈ ಹಣ ಸಿಗಬಾ... ಎಂಬುದೂ ಕಾರ್ಮಿಕ ಸಂಘಗಳ ಆಶಯ. ಭವಿಷ್ಯ ನಿಧಿ ಹಾಗೂ ನಿವೃತ್ತಿ ನಿಧಿಗಳ ಹೂಡಿಕೆ ವಿಧಾನ... ಯಾವುದೇ ಸರಕಾರ ಬದಲಿಸುವ ಮೊದಲು ಟ್ರಸ್ಟಿಗಳ ಮಂಡಲಿಯೊಡನೆ ಈ ಎಲ್ಲಾ ವಿಷಯಗಳ ಬ... ಅಗತ್ಯವೆಂದು ಈ ಹೇಳಿಕೆ ನೀಡಿರುವ ಸಿಐಟಿಯು, ಎಐಟಿಯುಸಿ, ಸಿಐಟಿಯು, ಇಂಟಕ್ ಹಾಗೂ ಬಿ.ಎಂ.ಎ... ಹೇಳಿವೆ.

ಈ ನಿಧಿಗಳ ಮಾಲಕರಿಗೆ ತಮ್ಮ ಹಣದ ಹೂಡಿಕೆಯ ವಿಷಯದಲ್ಲಿ ಅಭಿಪ್ರಾಯ ತಿಳಿಸುವ ಹ... ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಬಿಜೆಪಿ/ಎನ್‌ಡಿಎ ಪ್ರಣಾಳಿಕೆಯ ಈ ಆಶ್ವಾಸನೆ ಪ್ರಜಾಪ್ರಭುತ್ವ-ವಿರೋಧಿಯಾ... ತನ್ನದಲ್ಲದನ್ನು ಕಿತ್ತುಕೊಳ್ಳುವಂತದ್ದು. ಈ ರೀತಿ ಕಾರ್ಮಿಕರ ಭಾವನೆಗಳಿಗೆ ಬಿಜೆಪಿ/ಎನ್‌ಡಿಎ ಅಗೌರವ ತೋ... ಎಂದು ಈ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಹಿಡಿಯಲಾಯಿತು. ಪ್ರಣಾಳಿಕೆ ವಿನಾಶಕಾರಿ ದಾರಿ ಹಿಡಿಯುವ ಮಾತನ್ನು ಮತ್ತೊಮ್ಮೆ ಆಡಿದೆ. ಆದರೆ ಈ 'ಪರಮಾಣು ಬಲ'ದಿಂದ ಏಕೆ ಕಾರ್ಗಿಲ್‌ನಲ್ಲಿ ಪಾಕಿಸ್ತಾನಿ ಪ್ರೇರಿತ ಗಡಿ ಸಂಘರ್ಷವನ್ನು ತಡೆಯಲಾಗಲಿಲ್ಲ ಎಂದು ಮಾತ್ರ ಅದು ಹೇಳಿಲ್ಲ.

ಕಾರ್ಗಿಲ್‌ನಲ್ಲಿ ಮಹಾ ವಿಜಯದ ಮಾತಿನ ಹಿಂದೆ ತನ್ನ ವಿಫಲತೆಗಳನ್ನು ಮುಚ್ಚಿಕೊಳ್ಳಲು ವಾಜಪೇಯಿ ಸರಕಾರ ಪ್ರಯತ್ನಿಸಿದೆ. 400 ಯೋಧರ ಬಲಿ ತೆಗೆದುಕೊಂಡ ವ್ಯಾಪಕ ಪಾಕಿಸ್ತಾನಿ ನುಸುಳಿಕೆಯನ್ನು ಮೊದಲೇ ಪತ್ತೆ ಹಚ್ಚಲಾಗಿಲ್ಲ ಎಂಬ ಬಗ್ಗೆ ಆತ್ಮವಿಮರ್ಶೆಯ ಒಂದೇ ಒಂದು ಮಾತಿಲ್ಲ. ಈ ಪ್ರಕರಣದ ವಿಮರ್ಶೆಗೆಂದು ಸಮಿತಿ ನೇಮಿಸಿರುವ ಪ್ರಸ್ತಾಪ ಕೂಡಾ ಈ ಪ್ರಣಾಳಿಕೆಯಲ್ಲಿಲ್ಲ.

ಸರ್ವಾಧಿಕಾರಶಾಹಿ ಚೌಕಟ್ಟು

ಬಲಪಂಥೀಯ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತರಲು, ಜಾತ್ಯಾತೀತ-ವಿರೋಧಿ ಕಾರ್ಯಕ್ರಮವನ್ನು ಮುಂದಿಡಲು ಈಗ ಬಿಜೆಪಿ-ಆರ್.ಎಸ್.ಎಸ್. ಗೆ ಒಂದು ಸರ್ವಾಧಿಕಾರಶಾಹಿ ಚೌಕಟ್ಟು ಬೇಕು. ಇದನ್ನು ಬಹಿರಂಗವಾಗಿ ಪ್ರತಿಪಾದಿಸಲು ಸಾಧ್ಯವಿಲ್ಲ. ಆದರೆ ಇವಕ್ಕೆ ಅಗತ್ಯವಾದ ಅಂಶಗಳೆಲ್ಲಾ ಈ ಪ್ರಣಾಳಿಕೆಯಲ್ಲಿದೆ.

1. ಸಂವಿಧಾನದ ವಿಮರ್ಶೆಯ ಮಾತು ಮತ್ತೆ ಇಲ್ಲಿ ಬಂದಿದೆ. ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ಬುಡಮೇಲು ಮಾಡುವುದೇ ಈ 'ವಿಮರ್ಶೆ'ಯ ಅರ್ಥ ಎಂದು ಎಲ್ಲರಿಗೂ ಗೊತ್ತು.

2. ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಅಧ್ಯಕ್ಷೀಯ ಮಾದರಿಯನ್ನು ಪ್ರತಿಪಾದಿಸುತ್ತಿದ್ದ ಬಿಜೆಪಿ ಈಗ ಅದಕ್ಕೆ ಪೂರಕವಾಗಿ ಸಂಸತ್ತಿಗೆ ವಿಧಾನಸಭೆಗಳಿಗೆ ಐದು ವರ್ಷಗಳ ನಿಗದಿತ ಅವಧಿ ಇರಬೇಕೆಂದು ಹೇಳಿದೆ. ವಿಭಿನ್ನ ರೀತಿಯ ಪಕ್ಷಗಳಲ್ಲಿ ಒಂದು ಸಮಾನ ನಿಲುವು ಹಾಗೂ ಜನತೆಯ ಪ್ರತಿಯಾಗಿ ಹೊಣೆ ಎಂಬುದು ಇರಲಿ, ಇಲ್ಲದಿರಲಿ ಅವೆಲ್ಲಾ ಸೇರಿ ಒಂದು ಸರ್ಕಾರವನ್ನು ರಚಿಸಲೇಬೇಕು ಎಂದೇ ಇದರ ಅರ್ಥ. ಶಾಶ್ವತವಾಗಿ ಅಧಿಕಾರದಲ್ಲಿ ಇರಲು ಯಾವುದೇ ನಾಚಿಕೆಯಿಲ್ಲದೆ ಮುಂದಿಟ್ಟಿರುವ ಪ್ರತಿಪಾದನೆ ಇದು.

3. ಜರ್ಮನಿಯಲ್ಲಿರುವ 'ರಚನಾತ್ಮಕ ಅವಿಶ್ವಾಸ ಮತ'ದ ವ್ಯವಸ್ಥೆ ತರಬೇಕೆಂಬ ಅದರ ಪ್ರಸ್ತಾಪವೂ ಅಧಿಕಾರದಿಂದ ತಮ್ಮನ್ನು ಇಳಿಸದಂತೆ ರಕ್ಷಿಸಿಕೊಳ್ಳುವ ಇನ್ನೊಂದು ಸಾಧನವಲ್ಲದೆ ಬೇರೇನೂ ಅಲ್ಲ. ಒಂದು ಪರ್ಯಾಯ ಸರಕಾರದ ಪ್ರಸ್ತಾಪವಿಲ್ಲದಿದ್ದರೆ ಪ್ರಸಕ್ತ ಸರಕಾರದ ವಿರುದ್ಧ ಅವಿಶ್ವಾಸ ಮತ ತರಬಾರದು ಎಂಬುದು ಈ ಪ್ರಸ್ತಾವದ ಹೂರಣ. ಜನಾದೇಶ ಇಲ್ಲದೆ ಅಧಿಕಾರದಲ್ಲಿರಲು ಈ ಪ್ರಜಾಪ್ರಭುತ್ವವಾದಿ ಎನ್ನುವ ಕೂಟ ಏನು ಮಾಡಲೂ ಹಿಂಜರಿಯುವುದಿಲ್ಲ.

4. ಇಲ್ಲಿ ಬಾಳಿ-ಬದುಕಿ ಭಾರತೀಯ ನಾಗರಿಕರಾಗುವವರು ಉನ್ನತ ಸ್ಥಾನಗಳನ್ನು ಪಡೆಯದಂತೆ ನಿಷೇಧವಿರಬೇಕು ಎಂಬ ಪ್ರಸ್ತಾಪ ಆರ್.ಎಸ್.ಎಸ್. ನ ಸಂಕುಚಿತ ವಿಚಾರದ ಪ್ರತೀಕ. ಹಿಂದೂವೇತರ 'ವಿದೇಶಿ' ಧರ್ಮಗಳ ಅನುಯಾಯಿಗಳನ್ನು ಎರಡನೇ ದರ್ಜೆಯ ನಾಗರೀಕರಾಗಿಸುವ ಆಶಯದ ವಿಚಾರ ಇದು.

ವಿಚಾರಶೂನ್ಯತೆಯ ಪ್ರತೀಕ

ಒಟ್ಟಿನಲ್ಲಿ ಎನ್.ಡಿ.ಎ. ಅಂಗೀಕರಿಸಿದ ವೇದಿಕೆಯ ದಿವಾಳಿಕೋರತನ ಅದರ ಪ್ರಣಾಳಿಕೆಯ ಸ್ವರೂಪದಿಂದಲೇ ಸ್ಪಷ್ಟವಾಗುತ್ತದೆ. ಫೋಟೋಗಳಿಂದಲೇ ಚುನಾವಣೆ ಗೆಲ್ಲಬಹುದಾದರೆ ಎನ್.ಡಿ.ಎ. ಯ ಗೆಲವು ಖಂಡಿತ[illegible]. ಏಕೆಂದರೆ ಬಿಜೆಪಿ ಮತ್ತು ಅ[illegible] ಮಿತ್ರರು ತಯಾರಿಸಿದ ಈ 20 ಪುಟಗಳ ದಸ್ತಾವೇಜಿನಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ ಒಟ್ಟು ಹತ್ತು ಚಿತ್ರಗಳಿವೆ. ನಿಜ ಸಂಗತಿಯೆಂದರೆ ಈ ಪ್ರಣಾಳಿಕೆಯಲ್ಲಿ ಮುದ್ರಿತ ಅಕ್ಷರಗಳಿಗಿಂತ ಫೋಟೋಗಳು ಆಕ್ರಮಿಸಿರುವ ಜಾಗವೇ ಹೆಚ್ಚು. ವಿಚಾರ ಶೂನ್ಯತೆಯ ಪ್ರತಿಬಿಂಬ ಇದು. ಬಿಜೆಪಿ ಜನಗಳನ್ನು ಮತ್ತು ತನ್ನದೇ ಮಿತ್ರಕೂಟವನ್ನು ತುಚ್ಛವಾಗಿ ಕಂಡಿದೆ. ಇಂತಹ ಒಂದು ಟೊಳ್ಳು ಪ್ರಣಾಳಿಕೆಯನ್ನು ನೋಡಿದರೆ ನಿಜವಾದ ಅಜೆಂಡಾ ಇನ್ನೂ ಬರಬೇಕಷ್ಟೇ ಎಂಬುದು ಸ್ವಯಂವೇದ್ಯ.

○

ಇಲ್ಲಿದೆ ನೋಡಿ ಮೂರನೇ ಪರ್ಯಾಯ



ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ದೇಶದ ಮುಂದಿಟ್ಟಿರುವ ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ತೊಲಗಿಸುವ ಪರ್ಯಾಯ

ದೇಶದ ಮುಂದೆ ಇರುವುದು ಈಗ ಎರಡೇ ಆಯ್ಕೆ ಬಿಜೆಪಿ ರಂಗ ಅಥವಾ ಕಾಂಗ್ರೆಸ್ ಅದೂ ಕೂಡಾ ಕೇವಲ ವಾಜಪೇಯಿ Vs ಸೋನಿಯಾ ಎಂಬಂತೆ ಮಾಧ್ಯಮಗಳು ಚಿತ್ರಿಸುತ್ತಿವೆ. ಜನಗಳ ನೈಜ ಸಮಸ್ಯೆಗಳ ಬಗ್ಗೆ, ಅವುಗಳು ಏಕೆ ಉಂಟಾಗಿವೆ, ಅವಕ್ಕೆ ಪರಿಹಾರವೇನು ಎಂಬ ಬಗ್ಗೆ ಚರ್ಚೆ ಕಾಣುತ್ತಲೇ ಇಲ್ಲ. ಏಕೆಂದರೆ ಈ ವಿಷಯದಲ್ಲಿ ಈ ಎರಡರ ನಡುವೆ ವ್ಯತ್ಯಾಸಗಳೂ ಇಲ್ಲ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಚುನಾವಣೆಯಲ್ಲಿ ಚರ್ಚೆ ನಡೆಯಬೇಕಾದ ಮೂಲಭೂತ ಪ್ರಶ್ನೆಗಳನ್ನು ಎತ್ತುವ, ಅವುಗಳ ಪರಿಹಾರಕ್ಕೆ, ಪರ್ಯಾಯಕ್ಕೆ ನೀತಿಗಳನ್ನು ಮುಂದಿಡುವ ಪ್ರಯತ್ನ ನಡೆಸಿವೆ. ಕಳೆದ ಸಂಚಿಕೆಯಲ್ಲಿ ಪ್ರಸಕ್ತ ಚುನಾವಣೆಯ ಹಿನ್ನೆಲೆಯನ್ನು ಸಿಪಿಐ(ಎಂ) ಪ್ರಣಾಳಿಕೆ ಹೇಗೆ ಪರಿಶೀಲಿಸಿದೆ ಎಂದು ನೋಡಿದ್ದೀರಿ. ಪ್ರಣಾಳಿಕೆಯ ಎರಡನೇ ಭಾಗದಲ್ಲಿ ದೇಶದ ಮುಂದಿಟ್ಟ ಸಮಗ್ರ ಪರ್ಯಾಯದ ಒಂದು ಚಿತ್ರ ಇಲ್ಲಿದೆ.

ಸ್ವಾತಂತ್ರ್ಯದ ಐವತ್ತು ವರ್ಷಗಳ ನಂತರವೂ ಸರಕಾರಗಳು ಅನುಸರಿಸಿದ ನೀತಿಗಳಿಗಾಗಿ ಜನಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಏಕೆಂದರೆ ಅವೆಲ್ಲಾ ಅನುಸರಿಸಿಕೊಂಡು ಬಂದದ್ದು ದೊಡ್ಡ ಬಂಡವಾಳ ಶಾಹಿಗಳಿಗೆ, ಭೂಮಾಲಿಕರಿಗೆ ಅನುಕೂಲ ಮಾಡಿಕೊಡುವ ನೀತಿಗಳನ್ನೇ. ಭಾರತ 21ನೇ ಶತಮಾನವನ್ನು ಪ್ರವೇಶಿಸುತ್ತಿರುವಾಗ ಪ್ರಜಾಪ್ರಭುತ್ವ, ಎಲ್ಲಾ ನಾಗರಿಕರಿಗೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸಲು ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸಲು ಒಂದು ಸಮಗ್ರವಾದ ಪರ್ಯಾಯ ಧೋರಣೆಗಳ ವೇದಿಕೆ ಅಗತ್ಯ. ಇದು ಮೂರನೇ ಪರ್ಯಾಯದ ಆಧಾರವಾಗುತ್ತದೆ. ಚುನಾವಣೆಗಳಲ್ಲಿ ಸಿಪಿಐ(ಎಂ) ಇಂತಹ ಧೋರಣೆಗಳಿಗಾಗಿ ಹೋರಾಟವನ್ನು ಮುಂದೊಯ್ಯ ಬಯಸುತ್ತದೆ.

ದೇಶದ ಜಾತ್ಯಾತೀತ ಆಧಾರವನ್ನು ರಕ್ಷಿಸಿ ಬಲಪಡಿಸುವುದು ಹಾಗೂ ಒಕ್ಕೂಟ ತತ್ವ ಇವು ರಾಷ್ಟ್ರೀಯ ಐಕ್ಯತೆಯ ಮೂಲಭೂತ ಅಂಶಗಳು. ಪ್ರಸ್ತುತ ಘಟ್ಟದಲ್ಲಿ ಇದರ ಈಡೇರಿಕೆಗಾಗಿ ಕೈಗೊಳ್ಳಬೇಕಾದ ಮೂರ್ತ ಕ್ರಮಗಳೆಂದರೆ ಬೊಮ್ಮಾಯಿ ಕೇಸಿನಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಬೆಳಕಿನಲ್ಲಿ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಶಾಸನ, ಚುನಾವಣಾ ಉದ್ದೇಶಗಳಿಗೆ ಧಾರ್ಮಿಕ ಪ್ರಶ್ನೆಗಳ ಬಳಕೆಯ ಮೇಲೆ ಪರಿಣಾಮಕಾರಿ ನಿರ್ಬಂಧ, ಪೂಜಾಸ್ಥಳಗಳ ರಕ್ಷಣೆಯ ಕಾನೂನಿನ ಜಾರಿ, ಅಯೋಧ್ಯಾ ವಿವಾದದ ಕುರಿತು ತ್ವರಿತ ನ್ಯಾಯಾಂಗ ತೀರ್ಪಿಗಾಗಿ ಕಲಮು 138(2) ರ ಪ್ರಕಾರ ಅದನ್ನು ಸುಪ್ರೀಂಕೋರ್ಟಿಗೆ ಒಪ್ಪಿಸುವುದು ಹಾಗೂ ಶ್ರೀಕೃಷ್ಣ ಆಯೋಗ ತಪ್ಪಿತಸ್ಥರೆಂದು ಗುರುತಿಸಿದವರಿಗೆಲ್ಲ ಶಿಕ್ಷೆ ವಿಧಿಸಲು ವಿಶೇಷ ಕ್ರಮ.

ಆರ್ಥಿಕ ಹಾಗೂ ರಾಜಕೀಯ [illegible]ಲಯಗಳಲ್ಲಿ ರಾಜ್ಯಗಳಿಗೆ [illegible]ನ್ನಷ್ಟು ಅಧಿಕಾರಗಳ [illegible]ಕೇಂದ್ರೀಕರಣ, ಅಂತರ-ರಾಜ್ಯ ಮಂಡಳಿ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಸಾಕಷ್ಟು ಅಧಿಕಾರಗಳನ್ನು ನೀಡಿ ಒಕ್ಕೂಟ ತತ್ವಕ್ಕೆ ಒಂದು ನಿರ್ದಿಷ್ಟ ಸ್ವರೂಪ ಕೊಡಬೇಕು ಎಂದು ಸಿಪಿಐ(ಎಂ) ಸೂಚಿಸಿದೆ. 356ನೇ ಕಲಮನ್ನು ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ಪ್ರದೇಶದ ರಾಜ್ಯಗಳಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಸೂಚನೆಗಳನ್ನು ಪ್ರಣಾಳಿಕೆ ಮುಂದಿಟ್ಟಿದೆ.

ಪರ್ಯಾಯ ಆರ್ಥಿಕ ನೀತಿ

1991 ರಿಂದ ಆರಂಭಿಸಿದ ಉದಾರೀಕರಣ ನೀತಿಗಳು ಮೇಲಿನ ಹಂತದ 10% ಉಳ್ಳವರಿಗೆ ಮಾತ್ರ ಪ್ರಯೋಜನ ಕೊಟ್ಟಿದೆ. ಇತರರನ್ನು ಸಂಪೂರ್ಣವಾಗಿ ವಂಚಿತರಾಗಿ ಮಾಡಿದೆ. ಬಿಜೆಪಿ ನೇತೃತ್ವದ ಸರಕಾರ ಇವೇ ನೀತಿಗಳನ್ನು ಇನ್ನಷ್ಟು ಮುಂದೊತ್ತಿದೆ. ಇವು ಐ.ಎಂ.ಎಫ್.-ವಿಶ್ವಬ್ಯಾಂಕ್ ಸಾಧಿಸ ಬೇಕೆಂದಿರುವ, ಸಾಮ್ರಾಜ್ಯಶಾಹಿ ದೇಶಗಳ ಹಿತಾಸಕ್ತಿ ಈಡೇರಿಸುವ ಜಾಗತೀಕರಣಕ್ಕಷ್ಟೇ ಅನುಕೂಲವಾದಂತವು. ಇದರ ಬದಲು ಸಿಪಿಐ(ಎಂ) ಒಂದು ಸಮಗ್ರ ಆರ್ಥಿಕ ಧೋರಣೆಯ ರೂಪರೇಶೆಯನ್ನು ಪ್ರಣಾಳಿಕೆಯ ಮೂಲಕ ದೇಶದ ಮುಂದಿಟ್ಟಿದೆ.

ತ್ವರಿತ ಹಾಗೂ ಸಮಗ್ರ ಭೂಸುಧಾರಣೆ ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು, ನೀರಾವರಿ ಸೌಲಭ್ಯಗಳನ್ನು, ಸಾಲ ಸೌಲಭ್ಯಗಳನ್ನು ಹೆಚ್ಚಿಸುವುದು ಮತ್ತು ಸಮಗ್ರ ಬೆಳೆ ವಿಮೆ ಇತ್ಯಾದಿಗಳ ಮೂಲಕ ಕೃಷಿಯ ಅಭಿವೃದ್ಧಿಯ ಮೂರ್ತ ಸೂಚನೆಗಳು ಈ ಪ್ರಣಾಳಿಕೆಯಲ್ಲಿವೆ. ಕೈಗಾರಿಕಾ ರಂಗದಲ್ಲಿ ಮೂಲರಚನೆಯಲ್ಲಿ ಸಾರ್ವಜನಿಕ ಹೂಡಿಕೆಯ ಹೆಚ್ಚಳ, ವಿದ್ಯುತ್ ಮತ್ತು ಟೆಲಿಕಾಂ ನೀತಿಗಳ ಮರುಪರಿಶೀಲನೆಯಾಗಬೇಕು, ಸಾರ್ವಜನಿಕ ವಲಯದಲ್ಲಿ ಹೊಸ ಬಂಡವಾಳ, ತಂತ್ರಜ್ಞಾನ ಅಳವಡಿಸಿ ಅದನ್ನು ಬಲಪಡಿಸಬೇಕು ಎಂದು ಸಿಪಿಐ(ಎಂ) ಸೂಚಿಸಿದೆ. ಸ್ಪಷ್ಟ ಆದ್ಯತೆಗಳನ್ನು ಗುರುತಿಸಿ ನಿರ್ದಿಷ್ಟ ವಲಯಗಳಲ್ಲಿ ವಿದೇಶಿ ಬಂಡವಾಳವನ್ನು ಆಹ್ವಾನಿಸಬೇಕು, ಖಾಸಗೀ ವಲಯ ಹೊಸ ಉತ್ಪಾದಕ ಕ್ಷೇತ್ರಗಳಲ್ಲಿ, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹಣ ಹೂಡುವಂತೆ ಪ್ರೋತ್ಸಾಹಿಸುವುದು, ಬೇಕಾಬಿಟ್ಟಿಯಾಗಿ ಆಮದು ತೆರಿಗೆ ಕಡಿತ ಮತ್ತು ವಿದೇಶಿ ಕಂಪನಿಗಳು ದೇಶಿ ಕಂಪನಿಗಳನ್ನು ವಹಿಸಿಕೊಳ್ಳುವುದನ್ನು ತಡೆದು ದೇಶೀ ಉದ್ದಿಮೆಗಳಿಗೆ ರಕ್ಷಣೆ ನೀಡುವುದು, ಸಣ್ಣ ಉದ್ದಿಮೆಗಳಿಗೆ ಸಾಕಷ್ಟು ಸಾಲಸೌಲಭ್ಯಗಳ ಮೂಲಕ ಸಾಕಷ್ಟು ಪ್ರೋತ್ಸಾಹ, ಕೈಮಗ್ಗದಂತಹ ಪಾರಂಪರಿಕ ಉದ್ದಿಮೆಗಳಿಗೆ ರಕ್ಷಣೆ ಹಾಗೂ ಮಾರುಕಟ್ಟೆ ಸೌಲಭ್ಯ ಮತ್ತು ಆಳ ಸಮುದ್ರ ಟ್ರಾಲರುಗಳನ್ನು ನಿಲ್ಲಿಸಿ ಮೀನುಗಾರ ಸಮುದಾಯದ ಹಕ್ಕುಗಳ ರಕ್ಷಣೆ ಸಿಪಿಐ(ಎಂ) ಪ್ರಣಾಳಿಕೆ ಮುಂದ[illegible]ಟ್ಟಿರುವ ಇತರ ನಿರ್ದಿಷ್ಟ ಸೂ[illegible]ಗಳು.

ವಿಮಾ ಉದ್ದಿಮೆ ಸಾರ್ವಜನಿಕ ವಲಯದಲ್ಲೇ ಮುಂದುವರೆಯಬೇಕು, ಬ್ಯಾಂಕಿಂಗ್ ವಲಯದ ಖಾಸಗೀ ಕರಣವನ್ನು ನಿಲ್ಲಿಸಬೇಕು, ಬಂಡವಾಳದ ಹರಿವಿನ ಮೇಲೆ ನಿಯಂತ್ರಣವಿಡಬೇಕು ಎಂದೂ ಸಿಪಿಐ(ಎಂ) ಸೂಚಿಸಿದೆ.

ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದ 1999 ರಲ್ಲಿ ಮರು ಪರಿಶೀಲನೆಗೆ ಬರುತ್ತದೆ, ಆಗ ಹಿಂದಿನ ಒಪ್ಪಂದಗಳ ತೀಕ್ಷ್ಣ ವಿಮರ್ಶೆ ನಡೆಯುವಂತೆ ಭಾರತ ಹೇಗೆ ಒತ್ತಾಯಿಸಬೇಕು ಎಂದೂ ಸಿಪಿಐ(ಎಂ) ಸೂಚಿಸಿದೆ.

ಸಂಪನ್ಮೂಲ ಸಂಗ್ರಹ ಹೇಗೆ?

ಜನಸಾಮಾನ್ಯರ ಮೇಲೆ ಪರೋಕ್ಷ ತೆರಿಗೆಗಳನ್ನು, ಬೆಲೆಗಳನ್ನು ಹೆಚ್ಚಿಸುವುದು ಬಿಜೆಪಿ ನೇತೃತ್ವದ ಸರಕಾರವೂ ಸೇರಿದಂತೆ ಇದುವರೆಗಿನ ಎಲ್ಲಾ ಸರ್ಕಾರಗಳಿಗೆ ಕಂಡಿರುವ ಏಕೈಕ ದಾರಿ. ತೆರಿಗೆ ತೆರುವ ಸಾಮರ್ಥ್ಯವುಳ್ಳ ಶ್ರೀಮಂತರ ಮೇಲಿನ ತೆರಿಗೆಗಳನ್ನು ಇಳಿಸುವ ಪ್ರವೃತ್ತಿ ಕೈಬಿಟ್ಟು ಶ್ರೀಮಂತ ವಿಭಾಗಗಳಲ್ಲಿ ಹೆಚ್ಚೆಚ್ಚು ಜನ ನೇರ ತೆರಿಗೆ ವ್ಯಾಪ್ತಿಗೆ ಬರುವಂತೆ ಮಾಡಬೇಕು, ತೆರಿಗೆ ವಂಚನೆ ತಡೆಯಲು, ಕಪ್ಪು ಹಣವನ್ನು ಹೊರತೆಗೆಯಲು, ಸಾರ್ವಜನಿಕ ಹಣದ ದುರ್ಬಳಕೆ ತಡೆಯಲು ಕ್ರಮಗಳನ್ನು ಕೈಗೊಂಡು ಸಂಪನ್ಮೂಲಗಳ ಕ್ರೋಢೀಕರಣ ನಡೆಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ದುಡಿಯುವ ಜನರ ಹಕ್ಕುಗಳು

ದುಡಿವ ಜನರ ಪಕ್ಷವಾದ ಸಿಪಿಐ(ಎಂ)ಗೆ ಸಹಜವಾಗಿಯೇ ಬೇರೆ ಪಕ್ಷಗಳಂತಲ್ಲದೆ ದುಡಿಯುವ ಜನರ ಹಕ್ಕುಗಳ ರಕ್ಷಣೆ ಮತ್ತು ವಿಸ್ತರಣೆ ಪರ್ಯಾಯ ಧೋರಣೆಯ ಒಂದು ಪ್ರಮುಖ ಅಂಶ. ಕೃಷಿಕೂಲಿಕಾರರು, ಸರ್ಕಾರದ ನೀತಿಗಳಿಂದಾಗಿ ಬಿಕ್ಕಟ್ಟುಗ್ರಸ್ತಗೊಂಡಿರುವ ಉದ್ದಿಮೆಗಳ ಕಾರ್ಮಿಕರು, ಮತ್ತಿತರ ದುಡಿಯುವ ಜನಗಳ ಬದುಕಿನ ರಕ್ಷಣೆಗಾಗಿ ತಕ್ಷಣವೇ ಜಾರಿಗೆ ತರಬಹುದಾದ ಕನಿಷ್ಟ ಕೂಲಿ, ಸಾಮಾಜಿಕ ಸೌಲಭ್ಯಗಳು, ಕೆಲಸದ ಭದ್ರತೆ, ಬೋನಸ್ ಕಾಯ್ದೆ, ಕಾರ್ಮಿಕ ಸಂಘಟನೆಯ ಹಕ್ಕು ಇತ್ಯಾದಿಗಳನ್ನು ಪ್ರಣಾಳಿಕೆ ಪಟ್ಟಿ ಮಾಡಿದೆ. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾಡಬೇಕೆಂದು ಒತ್ತಾಯಿಸಿರುವುದಲ್ಲದೆ ದುಡಿಯಬಲ್ಲ ಕೈಗಳಿಗೆ ಕೆಲಸ ಒದಗಿಸಲು ಇತರ ಕ್ರಮಗಳ ಬಗ್ಗೆಯೂ ಹೇಳಿದೆ.

ಮಹಿಳೆಯರಿಗೆ ಶಾಸಕಾಂಗಗಳಲ್ಲಿ 33% ಮೀಸಲಾತಿ ಮಾತ್ರವೇ ಅಲ್ಲದೆ ಎಲ್ಲಾ ವಿಭಾಗಗಳ ಮಹಿಳೆಯರಿಗೆ ಸಮಾನ ಕಾನೂನಾತ್ಮಕ ಹಕ್ಕುಗಳು, ವಿವಾಹದ ಕಡ್ಡಾಯ ನೋಂದಣಿ, ರಾಷ್ಟ್ರೀಯ ಆಂದೋಲನವಾಗಿ ವರದಕ್ಷಿಣೆ ನಿರ್ಮೂ[illegible]ನೆ, ಸಮಾನ ಆಸ್ತಿಯ ಹಕ್ಕು, ಜ[illegible] ಪಟ್ಟಾ, ಗ್ರಾಮೀಣ ಪ್ರದೇಶದ [illegible] ಮಹಿಳಾ-ಮುಖ್ಯಸ್ಥ ಕುಟುಂಬಗಳಿಗೆ ವಿಶೇಷ ಯೋಜನೆ ಹಾಗೂ ಮಹಿಳೆಯರನ್ನು ಗ್ರಾಹಕ ವಸ್ತುವನ್ನಾಗಿ ಮಾಡುವ ಪ್ರವೃತ್ತಿಯನ್ನು ತಡೆಯಲು ಮಾಧ್ಯಮ ಕಾನೂನು ಇತ್ಯಾದಿಗಳು ಮಹಿಳೆಯರನ್ನು ಕುರಿತಂತೆ ಈ ಪರ್ಯಾಯ ನೀತಿಗಳ ಮುಖ್ಯ ಅಂಶಗಳು.

ಸಾರ್ವತ್ರಿಕ ಶಿಕ್ಷಣ, ಸಾಕ್ಷರತೆ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಈ ರಂಗದಲ್ಲಿ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳನ್ನು ಪ್ರಣಾಳಿಕೆ ಪಟ್ಟಿ ಮಾಡಿದೆ.


ಜನಸಾಮಾನ್ಯರ ಬದುಕನ್ನು ಸುಗಮಗೊಳಿಸುವ ಒಂದು ಮುಖ್ಯ ಕ್ರಮವೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ರೇಶನ್ ಪದ್ಧತಿಯನ್ನು ಬಲಪಡಿಸುವುದು, ವಿಸ್ತರಿಸುವುದು. ಬೂರ್ಜ್ವಾ ಪಕ್ಷಗಳು ಬೇರೆ ಬೇರೆ ಹೆಸರಲ್ಲಿ ಇದನ್ನು ಮೊಟಕುಗೊಳಿಸಲು ಪ್ರಯತ್ನಿಸುತ್ತಿರುವಾಗ ಸಿಪಿಐ(ಎಂ) ಅದನ್ನು ವಿಸ್ತರಿಸುವ ನಿರ್ದಿಷ್ಟ ಕ್ರಮಗಳನ್ನು ಸೂಚಿಸಿದೆ. ಸಿಪಿಐ(ಎಂ) ನೇತೃತ್ವದ ರಾಜ್ಯ ಸರಕಾರಗಳಲ್ಲಿ ಇವನ್ನು ಜಾರಿಗೆ ತಂದ ಮೂರ್ತ ಅನುಭವದಿಂದ ಪ್ರಣಾಳಿಕೆ ಈ

ಪುಟ 9 ನೋಡಿ


50 ಸಾವಿರ ಕೋಟಿ ರೂಪಾಯಿ ಟೆಲಿಕಾಂ ಹಗರಣ

ಬಿಜೆಪಿ ವಿಕ್ರಮ

- 1994 ರ ಸುಖರಾಂ ಹಗರಣದ ಎರಡೂವರೆ ಪಟ್ಟು
- ಸರಕಾರಕ್ಕೆ 50 ಸಾವಿರ ಕೋಟಿ ರೂ. ಲೈಸೆನ್ಸ್ ಶುಲ್ಕ ಪಂಗನಾಮ
- ಮಹಾನಗರಗಳ ಎಂಟು ಸೆಲ್ಯೂಲರ್ ಕಂಪನಿಗಳಿಗೆ ಲಾಭ ಸೂರೆ ಮಾಡಲು ತರಾತುರಿಯಲ್ಲಿ ಟೆಲಿಕಾಂ ನೀತಿ ಬದಲಾವಣೆ
- ಅಡ್ವಕೇಟ್ ಜನರಲ್ ಟೆಲಿಕಾಂ ಮಂತ್ರಿ ವಿರೋಧವಿದ್ದಾಗ್ಯೂ, ನೀತಿ ಜಾರಿ
- ಟೆಲಿಕಾಂ ಮಂತ್ರಿ ಜಗಮೋಹನ್ ಎತ್ತಂಗಡಿ
- ಚುನಾವಣಾ ಆಯೋಗ, ಹೈಕೋರ್ಟ್‌ನ ಪ್ರತಿಕೂಲ ಟಿಪ್ಪಣಿ



ಟೈಂಸ್‌ನ ಜೈನ್‌ಗಳ ಮೇಲಿನ ಆದಾಯ ತೆರಿಗೆ ಕೇಸನ್ನು ರುಸ್ಸೆನಿಸಲು
ಬೇಜ್‌ಬರುವಾ ವರ್ಗಾವಣೆ - ನಂತರ
ಜಯಲಲಿತಾ ಮೇಲೆ ಆ ಆಪಾದನೆ.



ಅಡ್ವಾಣಿ ಶಿಷ್ಯ ಮಾಜಿ ಆರ್ಥಿಕ ಸಲಹೆಗಾರ ಬಿಜೆಪಿಯ ಗುರುಸ್ವಾಮಿ ಉವಾಚ -

- ಹಿಂದೂಜಾ ಗುಂಪಿನ ಫಾಸ್ಟ್‌ಟ್ರಾಕ್ ವಿದ್ಯುತ್ ಯೋಜನೆಗೆ ವಾಜಪೇಯಿ ಒತ್ತಡ.
- ಐಟಿಸಿ ಯ ಶೇರುಗಳನ್ನು 2500 ರೂ.ಗೆ ಬದಲು 800 ರೂ. ಗೆ ಮಾರಿ ವಿದೇಶಿ ಕಂಪನಿ 'BAT' ಗೆ ಒಪ್ಪಿಸಲು ಹಣಕಾಸು ಮಂತ್ರಿಗಳ ಒತ್ತಡ
- ಇಸ್ಪಾತ್ ಗುಂಪಿನ ಮಿತ್ತಲ್‌ಗಳಿಗೆ ಲಾಭ ಮಾಡಿಸಲು ಉಕ್ಕು ಆಮದು ಮೇಲೆ ಬದಲಾವಣೆಗೆ

ಇಂಡಿಯನ್ ಏರ್‌ಲೈನ್ಸ್ ವಿಮಾನ ಖರೀದಿ ಹಗರಣ

ಭ್ರಷ್ಟಾಚಾರದಲ್ಲಿ ಕಾಂಗ್ರೆಸ್‌ನ್ನು ಮೀರಿಸಿದ ಬಿಜೆಪಿ ಕೂಟವನ್ನು ಸೋಲಿಸಿ

ಹಗರಣಗಳ ಮೂಲವಾದ ಉದಾರೀಕರಣ ನೀತಿಗೆ ಬದಲಿ ರೂಪಿಸಲು

ಸಿಪಿಐ(ಎಂ)ಗೆ ನಿಮ್ಮ ಮತ

ಸಮರಶೀಲತೆಯ ಪರಂಪರೆಗೆ ಮರಳಲು ಕಾತರಿಸುತ್ತಿದೆ ಅಬ್ಬಕ್ಕನ ನಾಡು......

ಕಳೆದ ಐದು ವರ್ಷಗಳಿಂದ ಕೋಮುವಾದಿ ಪಕ್ಷದ ವ್ಯಕ್ತಿಯೋರ್ವ ಉಳ್ಳಾಲದ ಜನಪ್ರತಿನಿಧಿಯಾಗಿದ್ದುದು ಧೀರ ಪರಂಪರೆಯ ಅಬ್ಬಕ್ಕ ರಾಣಿಯನಾಡಿಗೆ ಅಂಟಿಕೊಂಡ ಮಹಾಕಳಂಕ. ಈ ಶಾಸಕ, ಶಾಸನ ಸಭೆಯೊಳಗೆ ತುಟಿ ಬಿಚ್ಚಿದ್ದೂ ಇಲ್ಲ, ತನ್ನ ಕ್ಷೇತ್ರದಲ್ಲಿ ಕೆಲಸಮಾಡಿದ್ದೂ ಇಲ್ಲ. ಶಾಲಾ ಸಮಾರಂಭಗಳಲ್ಲಿ, ಅಂಗಡಿ ಉದ್ಘಾಟನೆಗಳಿಗೆ ಮಾತ್ರ ತಪ್ಪದೇ ಹಾಜರಿರುತ್ತಿದ್ದ ಈ ಪ್ರಚಾರ ಪ್ರಿಯ ಶಾಸಕ ತನ್ನನ್ನು ಹೊಗಳುವ ಬ್ಯಾನರ್‌ಗಳನ್ನು ತಾನೇ ಹಾಕಿಸಿಕೊಂಡು 'ಬ್ಯಾನರ್ ಪ್ರಿಯ' ನೆಂದೇ ಪ್ರಸಿದ್ಧರಾದವರು. ಇಲ್ಲಿರುವ ಸಹಸ್ರಗಟ್ಟಲೆ ಬೀಡಿ ಕಾರ್ಮಿಕರ ಕಷ್ಟಗಳ ಬಗ್ಗೆಯಾಗಲೀ, ಹೆಂಚು ಮಜೂರರ ಬವಣೆಗಳ ಬಗ್ಗೆಯಾಗಲೀ ಒಂದಿಷ್ಟೂ ತುಟಿಬಿಚ್ಚದೆ ಮೌನಿಯಾಗಿದ್ದ ಜಯರಾಮಶೆಟ್ಟಿ ಎಂಬ ಈ ಶಾಸಕ ಬಂಡವಾಳಶಾಹಿಗಳ, ಮಾಲಕರ ಪ್ರೀತಿಗೆ ಪಾತ್ರನಾಗಿದ್ದ. ಇಲ್ಲಿಯ ಬಡಜನರು, ದೀನದಲಿತರು ಕಳೆದ 5 ವರ್ಷಗಳಲ್ಲಿ ತಮ್ಮನ್ನು ಪ್ರತಿನಿಧಿಸುವವರಿಲ್ಲದೆ ಅನಾಥರಂತಾಗಿದ್ದರು.

ಇದೀಗ ತನ್ನ ಸಮರಶೀಲತೆಯ ಪರಂಪರೆಗೆ ಮರಳಲು ಅಬ್ಬಕ್ಕ ನಾಡು ಕಾತರಿಸುತ್ತಿದೆ, ತನ್ನ ನಾಡಿಗೆ ಮಸಿ ಬಳಿದ ಕೋಮುವಾದಿಗಳ ವಿರುದ್ಧ ಸೇಡು ತೀರಿಸಲು ತವಕಿಸುತ್ತಿದೆ. ಅದಕ್ಕೆ ಒಂದು ಒಳ್ಳೆಯ ಅವಕಾಶವೂ ಲಭಿಸಿದೆ - ವಿಧಾನಸಭಾ ಚುನಾವಣಾ ಸಮರದ ಮೂಲಕ.

ಬಿ.ಮಾಧವರರವರು ಈ ಬಾರಿ ಉಳ್ಳಾಲದಲ್ಲಿ ಸಿಪಿಐ(ಎಂ) ವತಿಯಿಂದ ಸ್ಪರ್ಧಿಸುತ್ತಿದ್ದಾರೆ ಎಂಬ ಸುದ್ದಿ ಕೇಳಿದೊಡನೆ ಜಿಲ್ಲೆಯ ಕಾರ್ಮಿಕ, ರೈತ, ವಿದ್ಯಾರ್ಥಿ ಯುವಜನ ಸಮುದಾಯ ರೋಮಾಂಚನ ಗೊಂಡಿದ್ದಾರೆ. ಉಳ್ಳಾಲ ನಾಡಿನ ಜನತೆ ಬಹಳ ದಿನಗಳಿಂದ ಕಾಯುತ್ತಿದ್ದ ಜನನಾಯಕ ಇದೀಗ ಚುನಾವಣಾ ಹೋರಾಟಕ್ಕೆ ಧುಮುಕಿದ್ದಾರೆ. ಮಾಧವರನ್ನು ಗೆಲ್ಲಿಸಲು ಅಹೋರಾತ್ರಿ ದುಡಿಯಲು ಜನಸಮೂಹವೇ ರಣಾಂಗಣದಲ್ಲಿ ಅಣಿನೆರೆಯುತ್ತಿದ್ದಾರೆ.

ಒಂದು ಲಕ್ಷದ ಮೂವತ್ತ ನಾಲ್ಕು ಸಾವಿರ ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಮಾಧವರಿಗೆ ಗೆಲುವಿನ ನಿಚ್ಚಳ ಸಾಧ್ಯತೆಯಿದೆ. ಕಳೆದ ಬಾರಿ ಜನತಾದಳ ಮತ್ತು ಸಿಪಿಐ(ಎಂ) ಪ್ರತ್ಯೇಕವಾಗಿ ಸ್ಪರ್ಧಿಸಿದ ಕಾರಣ ಬಿಜೆಪಿಗೆ ಜಯ ಸಾಧ್ಯವಾಗಿತ್ತು. ಇವೆರಡೂ ಪಕ್ಷಗಳು ಗಳಿಸಿದ ಮತವನ್ನು ಕೂಡಿ ಹಾಕಿದರೆ ಬಿಜೆಪಿ ಮತಕ್ಕೆ ಸರಿಯಾಗಿತ್ತು. ಆದರೆ ಈ ಬಾರಿ ಜನತಾದಳ(ಜಾ) ದ ಪೂರ್ಣ ಬೆಂಬಲವಿರುವುದು ಸಿಪಿಐ(ಎಂ) ವಿಜಯದ ಸಾಧ್ಯತೆಯನ್ನು ಹೆಚ್ಚಿಸಿದೆ. ಕಳೆದ ವಿಧಾನಸಭಾ ಚುನಾವಣೆಯ ಬೆನ್ನಲ್ಲೇ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಎರಡೂ ಸೀಟನ್ನು ಜನತಾದಳ ಮತ್ತು ಸಿಪಿಐ(ಎಂ) (ತಲಾ ಒಂದೊಂದು) ಒಕ್ಕೂಟವಾಗಿ ಪಡೆದು ಬಿಜೆಪಿ ಭಾರೀ ಮುಖಭಂಗಕ್ಕೆ ಒಳಗಾಗಿತ್ತು ಎಂಬುದು ಉಲ್ಲೇಖಾರ್ಹ. 5 ವರ್ಷಗಳ ಹಿಂದಿನ ಶ್ರೀರಾಮಮಂದಿರದ ಭಾವೋದ್ವೇಗದ ಅಲೆಯೂ ಇಂದು ನಿಶ್ಚಲವಾಗಿದೆ. ಅದೂ ಅಲ್ಲದೆ ಅತ್ಯಂತ ಸಮರ್ಥ ಅಭ್ಯರ್ಥಿ ಎನ್ನುವ ನೆಲೆಯಲ್ಲಿ ಮಧ್ಯಮ ವರ್ಗದವರು, ಶಿಕ್ಷಿತರ, ಬುದ್ಧಿಜೀವಿಗಳ ಒಲವೂ ಮಾಧವರತ್ತ ವಾಲಿರುವ ಕಾರಣ ಮಾಧವರು ಜಯಿಸುವ ಸಾಧ್ಯತೆಗಳ ಬಗ್ಗೆ ಕ್ಷೇತ್ರವಿಡೀ ಮಾತುಗಳು ಕೇಳಿಬರುತ್ತಿವೆ.

ಅಲ್ಪಸಂಖ್ಯಾತರೂ ಕೂಡಾ ತಮ್ಮ ಹಿತರಕ್ಷಣೆ ಮಾಡುವ ಏಕೈಕ ಪಕ್ಷ ಸಿಪಿಐ(ಎಂ) ಎಂಬುದನ್ನು ಅರಿತು ಸಕ್ರಿಯವಾಗಿ ಮಾಧವರ ಬೆಂಬಲಕ್ಕೆ ಇಳಿದಿದ್ದಾರೆ. ಇತರ ಶ್ರೀಮಂತ, ಬಂಡವಾಳಶಾಹಿಗಳ ಅಬ್ಬರದ ಹಣಬಲದ ಎದುರು ಸಿಪಿಐ(ಎಂ) ತನ್ನ ಪ್ರಾಮಾಣಿಕ ಕಾರ್ಯಕರ್ತರ ಶ್ರಮದಿಂದಾಗಿ ಮತದಾರರ ಒಲವನ್ನು ಸಂಪಾದಿಸುತ್ತಿದೆ.

ಅಬ್ಬಕ್ಕನ ನಾಡು ತನ್ನ ಪ್ರೀತಿಯ ಜನನಾಯಕನ ಗೆಲುವಿನ ನಿರೀಕ್ಷೆಯಲ್ಲಿ ಈ ದಿನಗಳನ್ನು ಎದುರು ನೋಡುತ್ತಿದೆ.

ಉತ್ಸಾಹ ತುಂಬಿದ ಚುನಾವಣಾ ಪ್ರಚಾರದ ಉದ್ಘಾಟನೆ

ಪಕ್ಷದ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಬಿ. ಮಾಧವರವರು ದಿನಾಂಕ 18ರಂದು ಮಧ್ಯಾಹ್ನ ಪಕ್ಷದ ನೂರಾರು ಕಾರ್ಯಕರ್ತರು ಹಿತೈಷಿಗಳೊಂದಿಗೆ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಛೇರಿ ಸಂಕೀರ್ಣದಲ್ಲಿ ಇರುವ ಚುನಾವಣಾಧಿಕಾರಿ ಯವರಲ್ಲಿ ನಾಮಪತ್ರ ಸಲ್ಲಿಸಿದರು. ಈಗಾಗಲೇ ಪ್ರಥಮ ಹಂತದ ಪೂರ್ವ ಭಾವೀ ಕೆಲಸಗಳು ಈ ಕ್ಷೇತ್ರದ ಉದ್ದಗಲಕ್ಕೂ ನಡೆದಿದ್ದು ಕಾರ್ಯಕರ್ತರ ಹಿತೈಷಿಗಳ ಮಧ್ಯೆ ಹೊಸ ಲವಲವಿಕೆ ಹುರುಪು ಉಲ್ಲಾಸಗಳು ಎಲ್ಲೆಲ್ಲೂ ಕಾಣಬರುತ್ತಿದೆ. ಬ್ಯಾನರ್ ಪ್ರಿಯ ಹಾಲಿ ಶಾಸಕ ಜಯರಾಂ ಶೆಟ್ಟಿಯವರ ಪಾಳೆಯದಲ್ಲಿ ಬಿ.ಮಾಧವರ ಚುನಾವಣಾ ಪ್ರವೇಶವು ನಡುಕ ಹುಟ್ಟಿಸಿದೆ. ಕಾಂಗ್ರೆ ಪಾಳೆಯದಲ್ಲಿ ಕೊನೆ ದಿನದವರೆಗೂ ನಡೆದಂತಹ ಟಿಕೇಟಿಗಾಗಿನ ಪೈಪೋಟಿಯಲ್ಲಿ ಕೊನೆಗೂ ಮಾಜಿ ಶಾಸಕ ಯು.ಟಿ. ಫರೀದ್‌ರವರಿಗೆ ನೀಡಲಾಗಿರುವುದು ಕಾಂಗ್ರೆ ವಲಯದಲ್ಲಿ ಅಸಂತೃಪ್ತಿ ಮತ್ತಷ್ಟು ಹೆಚ್ಚಲು ಕಾರಣವಾಗಿದೆ. ಉಭಯ ಜಿಲ್ಲೆಗಳಲ್ಲಿ ಸ್ಪರ್ಧಿಸುತ್ತಿರುವ ವಿವಿಧ ರಾಜಕೀಯ ಪಕ್ಷದ ಮತ್ತು ಪಕ್ಷೇತರ ಅಭ್ಯರ್ಥಿಗಳ ಪಟ್ಟಿಯಲ್ಲಿ ಬಿ.ಮಾಧವರವರ ಸರ್ವಾಂಗೀಣ ವ್ಯಕ್ತಿತ್ವವೇ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿದೆ.

ಎಲ್.ಐ.ಸಿ. ಕಛೇರಿಗಳಿಗೆ ಭೇಟಿ

ಮಂಗಳೂರಿನ ಎಲ್ಲಾ ಎಲ್.ಐ.ಸಿ. ಕಛೇರಿಗಳನ್ನು ಬಿ.ಮಾಧವರವರು ಭೇಟಿ ನೀಡಿ ಚುನಾವಣೆಯಲ್ಲಿ ಬೆಂಬಲಿಸಿ ಸಹಾಯ ಸಹಕಾರ ನೀಡಬೇಕೆಂದು ಮನವಿ ಮಾಡಿ ಮಾಡುವ ಕಾರ್ಯಕ್ರಮ ಕೂಡಾ ನಡೆಯಿತು. ಉಡುಪಿ ವಿಭಾಗೀಯ ಎ.ಐ.ಇ.ಇ.ಎ. ಯ ಘಟಕವೂ ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಿ ಬಿ.ಮಾಧವರನ್ನು ಬೆಂಬಲಿಸಿ ದುಡಿಯಬೇಕೆಂದು ವಿನಂತಿಸಿದೆ. ನಿರಂತರವಾಗಿ ಮಂಗಳೂರಿನ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿರುವ ಕಾರ್ಮಿಕ ಸಂಘಟನೆಗಳು, ರೈತ ಸಂಘ, ಎಸ್.ಎಫ್.ಐ., ಡಿವೈಎಫ್‌ಐ, ಜೆಎಂಎಸ್‌ಗಳು ಸಭೆ ಸೇರಿ ಬಿ.ಮಾಧವರ ವಿಜಯಕ್ಕಾಗಿ ದುಡಿಯಲು ತೀರ್ಮಾನಿಸಿ ಕಾರ್ಯಪ್ರವೃತ್ತರಾಗಿದ್ದಾರೆ.

ಮಂಗಳೂರಿನ ಪ್ರಮುಖ ಪತ್ರಿಕೆಗಳ ಕಛೇರಿಗಳಿಗೆ ಭೇಟಿ ನೀಡಿ ಪತ್ರಿಕಾ ಸಂಪಾದಕರುಗಳೊಡನೆ ಸಂವಾದ ನಡೆಯಿತು.

ಉದ್ಘಾಟನಾ ಸಭೆ

ಕಿಕ್ಕಿರಿದು ತುಂಬಿದ ಸಾವಿರಾರು ಕಾರ್ಯಕರ್ತರ ಗೆಲುವಿನ ಮಂದಹಾಸದೊಡನೆ ದಿನಾಂಕ 22 ರಂದು ಕೊಲ್ಯದ ಕುಲಾಲ ಮಂದಿರದಲ್ಲಿ ಚುನಾವಣಾ ಪ್ರಚಾರ ಸಭೆ ಈಗಾಗಲೇ ನಡೆದಿರುವ ಎಲ್ಲಾ ಕೆಲಸ ಕಾರ್ಯಗಳ ಪ್ರತಿರೂಪದಂತೆ ಕಂಡು ಬಂತು. ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯ ನಾರಾಯಣ ರಾವ್, ಕಾಸರಗೋಡಿನ ಮಾಜಿ ಸಂಸತ್ ಸದಸ್ಯರಾದ ಎಂ.ರಾಮಣ್ಣ ರೈಯವರು, ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಅಭ್ಯರ್ಥಿ ಬಿ.ಮಾಧವ ಮೊದಲಾದವರುಗಳು ಭಾಷಣ ಮಾಡಿದರು. ಜಾತ್ಯಾತೀತ ಜನತಾದಳದ ನಾಯಕರಾದ ಫರೂಕ್ ಉಳ್ಳಾಲ್‌ರವರು ಮಾತನಾಡುತ್ತಾ, ಅಲ್ಪಸಂಖ್ಯಾತ ವರ್ಗ ಪೂರ್ಣಪ್ರಮಾಣದಲ್ಲಿ ಬಿ.ಮಾಧವರನ್ನು ಬೆಂಬಲಿಸಲಿದೆ ಎಂದು ಘೋಷಿಸಿದರು.

ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸದ ಚೆಡ್ಡಿ ಪ್ರಚಾರಕರು

ಕೋಮುವಾದಿ ಬಿಜೆಪಿ ಮತ್ತು ಸಂಘಪರಿವಾರ ಮತ್ತೆ ಅಧಿಕಾರ ಕಬಳಿಸಲು ಜನರ ನಡುವೆ ಸುಳ್ಳಿನ ಸರಮಾಲೆಗಳನ್ನೇ ಹರಿಯ ಬಿಡುತ್ತಿದ್ದಾರೆ. ಪ್ರಾಮಾಣಿಕ, ಪ್ರಗತಿಪರ ಚಿಂತನೆಗಳಿಲ್ಲದ ಬಿಜೆಪಿ ತನ್ನ 13 ತಿಂಗಳ ವಿನಾಶಕಾರಿ ಆಡಳಿತದಲ್ಲಿ ದೇಶವನ್ನು ಎಂತಹ ಅಭದ್ರ ಸ್ಥಿತಿಗೆ ತಂದೊಡ್ಡಿದ್ದಾರೆಂದು ಇಡೀ ದೇಶದ ಜನಕ್ಕೆಲ್ಲಾ ಗೊತ್ತು. ಆದರೂ ಹಣ, ಬಂಡವಾಳಶಾಹಿ ಮಾಧ್ಯಮಗಳನ್ನು ತಮ್ಮ ಕೈವಶಮಾಡಿಕೊಂಡು ಜನರನ್ನು ವಂಚಿಸಿ ಅಧಿಕಾರಕ್ಕೇರಲು ಕುತಂತ್ರಗಳನ್ನು ಹೂಡುತ್ತಿದ್ದಾರೆ.

ಆಗಸ್ಟ್ 23 ರಂದು ಸಾಯಂಕಾಲ 5 ಘಂಟೆಯ ಸಮಯದಲ್ಲಿ ಬೆಂಗಳೂರು ಬಸ್ ನಿಲ್ದಾಣ (ಮೆಜೆಸ್ಟಿಕ್)ನಲ್ಲಿ ಚಡ್ಡಿ (ಬಿಜೆಪಿ) ಪ್ರಚಾರಕರು ಜನ ನಿಬಿಡ ಪ್ರದೇಶವಾದ ರಸ್ತೆ ಬದಿಯಲ್ಲಿ ತಮ್ಮ ನಾಟಕವನ್ನು ಪ್ರಾರಂಭಿಸಿದರು. ಬುಡಬುಡಕನ ವೇಶ ಧರಿಸಿ ವ್ಯಾನಿನ ಮೇಲೆ ನಿಂತು ಬಿಜೆಪಿಯ 13 ತಿಂಗಳ 'ಸಾಧನೆ'ಗಳನ್ನು ಒದರತೊಡಗಿದರು. ಮಹಿಳೆರಿಂದ ಅವನಿಗೆ ಕೊರಸ್ಸು . ಜನಗಳು ತಮ್ಮ ಕಛೇರಿಗಳಿಂದ, ಊರುಗಳಿಂದ, ತಮ್ಮ ವ್ಯವಹಾರಗಳಿಂದ ಮನೆಗಳಿಗೆ ಹೊಗಲು ಸಿಗದ ಬಸ್ಸುಗಳ ಪರದಾಟದಲ್ಲಿ ಇವರ ಜನವಂಚನೆಯ ನಾಟಕ ನೊಡಲು ಆಗಮಿಸಿದರು. ಚಡ್ಡಿಗಳೇ ಪ್ರಶ್ನೆಕೇಳುವುದು- ಅವಕ್ಕೇ ಉತ್ತರಿಸುವುದು ಅವರ ಮುಖ್ಯ ಕೆಲಸವಾಗಿತ್ತು. ಇವರ ಮೋಸಗಾರಿಕೆಯನ್ನು ಅರಿತ ಸಾರ್ವಜನಿಕರು ಪ್ರಶ್ನೆಗಳ ಸುರಿಮಳೆಯನ್ನೇ ಹರಿಸಿದರು.

ಚಡ್ಡಿಗಳು ಕಾರ್ಗಿಲ್ ವಿಜಯ ಬಿಜೆಪಿಯದ್ದು ಎಂದರೆ "ಇಲ್ಲಾ ಇಲ್ಲಾ ನಮ್ಮ ವೀರ ಸೈನಿಕರದ್ದು" ಎಂದು ಜನರ ಗುಂಪಿನ ಉತ್ತರ. ಬಿಜೆಪಿಯ ಆಡಳಿತದಲ್ಲಿ ಕೋಮುಗಲಭೆಗಳಿಲ್ಲ ಎಂಬ ಚಡ್ಡಿಗಳ ವಾದಕ್ಕೆ ಅಲ್ಲಿದ್ದ ಯುವಕನ ಪ್ರತಿ ಉತ್ತರ "ಸುಳ್ಳು ಸುಳ್ಳು ಸುರತ್ಕಲ್ ಗಲಭೆ, ಒರಿಸ್ಸಾದಲ್ಲಿ ಕ್ರಿಶ್ಚಿಯನ್ ಪಾದ್ರಿ ಮತ್ತು ಮಕ್ಕಳ ಸಜೀವ ದಹನ, ಬಾಬಬುಡನಗಿರಿ ಗಲಭೆ, ಅಲ್ಲದೇ ರೈತರ ಮೇಲೆ ಗುಂಡೇಟು ಉದಾಹರಣೆ ಶಿರಾ ರೈತರನ್ನೇ ತಗೊಳ್ಳಿ - ಒಂದೇ, ಎರಡೇ"

ಅಷ್ಟೊತ್ತಿಗಾಗಲೇ ಚಡ್ಡಿ ಪ್ರಚಾರಕರ ಮುಖಗಳಲ್ಲಿ ಬೆವರಿಳಿಯ ತೊಡಗಿತ್ತು. ಪ್ರಚಾರಕರ ಗುಂಪಿನಲ್ಲಿದ್ದ ಮಹಿಳೆಯೊಬ್ಬಳು "ಬಿಜೆಪಿಯ ಆಡಳಿತದಲ್ಲಿ ಬೆಲೆ ಇಳಿತ" ಎಂದಳು, ಅವಳ ಸುಳ್ಳಿನ ಜಾಲಕ್ಕೆ ಸವಾಲೊಡ್ಡಿದ ಮಧ್ಯವಯಸ್ಸಿನ ವ್ಯಕ್ತಿ "ಸುಳ್ಯಾಕೆ ಹೇಳಿತ್ತೀರಿ. ರೇಷನ್, ಈರುಳ್ಳಿ, ಎಲ್ಲಾ ಪದಾರ್ಥಗಳ ಬೆಲೆ ಜಾಸ್ತಿ ಮಾಡಿದ್ದಾರೆ" ಅಲ್ಲೇ ಇದ್ದ ಕಾಲೇಜ್ ಯುವಕ ಮರುಪ್ರಶ್ನೆ ಕೇಳಿದ- "ಇತ್ತೀಚಿಗೆ ಪ್ರಧಾನ ಮಂತ್ರಿಯವರ ಕಛೇರಿಯಲ್ಲೇ ನಡೆದ 50,000 ಸಾವಿರ ಕೋಟಿ ರೂ. ಹಗರಣ ಏನು?'' ಎಂದ. ಕೊನೆಗೂ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸದೆ ನೀವು ಕಛೇರಿಗೆ ಬನ್ನಿ, ಮನೆಗೆಬನ್ನಿ ಅಲ್ಲಿ ಚರ್ಚಿಸೋಣ ಎಂದು ಜಾರತೊಡಗಿದರು. ವಿದೇಶಿ ಮಹಿಳೆ ಬೇಡ ಸ್ವದೇಶಿ ಆಳ್ವಿಕೆ ಬೇಕು-ಚಡ್ಡಿಗಳ ಘೋಷಣೆ. ಸಾರ್ವಜನಿಕರ ಗುಂಪಿನಿಂದ ನಿಮ್ಮ ನೀತಿಗಳೆಲ್ಲಾ ವಿದೇಶಿಯರಿಗಾಗಿಯೇ ಎಂದು ಸವಾಲು. ಮತ್ತೊಮ್ಮೆ ಚಡ್ಡಿಗಳ ಸಮರ್ಥನೆ -"ದೇಶದ ಭದ್ರತೆಗೆ ಪ್ರೋಖ್ರಾನ್ ಸಿಡಿಸಿದ್ದು". ಹೊಟ್ಟೆಗೆ ಹಿಟ್ಟಿಲ್ಲದೆ ಇದ್ದೂ ಜುಟ್ಟಿಗೆ ಮಲ್ಲಿಗೆ ಹೂ ಅಂದಾಗಾಯ್ತು ನಿಮ್ಮ ಕತೆ ಎಂದ ಅಲ್ಲಿದ್ದ ಮುದುಕ.

ಚಡ್ಡಿಗಳು ದನಿ ಬದಲಾಯಿಸಿ ನಮ್ಮ ನಾಯಕ ಅನಂತಕುಮಾರ್ ದೇವನ ಹಳ್ಳಿಗೆ ವಿಮಾನ ನಿಲ್ದಾಣ ಜಾರಿ ಮಾಡಿದರು ಎಂದಾಗ ಜನರ ಗುಂಪಿನಿಂದ "ಯಾರಿಗೆ ಬೇಕು ವಿಮಾನ ನಿಲ್ದಾಣ ನಮಗೆ ಸರಿಯಾಗಿ ಬಿ.ಟಿ.ಎಸ್. ಬಸ್ಸ್ ಇಲ್ಲ. ಆ ವಿಮಾನ ನಿಲ್ದಾಣ ಮಾಡೊದ್ರಿಂದ ವಿದೇಶಿಯರಿಗೆ, ಸಾಹುಕಾರರಿಗೆ ಅನುಕೂಲವಿನಃ ನಮಗೇನು ಉಪಯೋಗ ಇಲ್ಲ" ಮತ್ತೊಬ್ಬ ದೇಶದಲ್ಲಿ ಎಲ್ಲಾ ಜಾತಿ, ಧರ್ಮದ ಜನ ಅಣ್ಣ ತಮ್ಮಂದಿರ ರೀತಿ ಇದ್ದರೆ ಅವರಲ್ಲಿ ಕೋಮು ಗಲಭೆ ಎಬ್ಬಿಸಿ ಹಿಂಸೆ ನೀಡೋ ನಿಮ್ಮನ್ನ ಚೆನ್ನಾಗಿ ನೋಡಿದ್ದೇವೆ ಎಂದು ಸಾರ್ವಜನಿಕರ ಆಕ್ರೋಶಕ್ಕೆ ದನಿ ನೀಡಿದ.

ಹೀಗೆ ಸಾರ್ವಜನಿಕರ ಮತ್ತು ಚಡ್ಡಿಗಳ ನಡುವೆ ವಾದ ವಿವಾದಗಳು ನಡೆದಾಗ, ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಾಗದ ಚಡ್ಡಿ ಪ್ರಚಾರಕರು ಪೊಲೀಸರ ಮೊರೆ ಹೋಗಿ ಅಲ್ಲಿಂದ ವ್ಯಾನಿಗೊಳಗೆ ಹೋಗಿ ಕಾಲ್ಕಿತ್ತರು.

ಬಿ. ರಾಜಶೇಖರ ಮೂರ್ತಿ.

......ಮೂರನೇ ಪರ್ಯಾಯ

ಪುಟ 7 ರಿಂದ

ಸೂಚನೆಗಳನ್ನು ನೀಡಿದೆ.

ಇದೇ ರೀತಿ ಆದಿವಾಸಿ ಮತ್ತು ದಲಿತರಿಗೆ ಸಾಮಾಜಿಕ ನ್ಯಾಯ, ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತಂತೆ ಮೀಸಲಾತಿ, ಪ್ರಾದೇಶಿಕ ಸ್ವಾಯತ್ತತೆ, ಭಾಷೆ-ಸಂಸ್ಕೃತಿಯ ಅಭಿವೃದ್ಧಿ ಪಕ್ಷಪಾತದ ನಿರ್ವಹಣೆ ಇತ್ಯಾದಿ ವಲಯಗಳಲ್ಲಿ ಪ್ರಮುಖ ಕ್ರಮಗಳು ಏನಿರಬೇಕು ಎಂದು ಸ್ಪಷ್ಟವಾಗಿ ಸಿಪಿಐ(ಎಂ) ಪ್ರಣಾಳಿಕೆ ತಿಳಿಸಿದೆ.

ಮಾಧ್ಯಮ, ಸಂಸ್ಕೃತಿ ಇತ್ಯಾದಿ

ಅದೇ ರೀತಿ ನಮ್ಮ ಸಮಾಜದ ಇತರ ಮುಖ್ಯ ವಿಷಯಗಳಾದ ಮಾಧ್ಯಮ ಮತ್ತು ಸಂಸ್ಕೃತಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಚುನಾವಣಾ ಸುಧಾರಣೆಗಳು, ನ್ಯಾಯಾಂಗ ಸುಧಾರಣೆಗಳ ಬಗ್ಗೆಯೂ ಸ್ಪಷ್ಟ ಪ್ರಜಾಸತ್ತಾತ್ಮಕ ನಿಲುವುಗಳನ್ನು ಸಿಪಿಐ(ಎಂ) ಪ್ರಣಾಳಿಕೆಯಲ್ಲಿ ಕಾಣಬಹುದು.

ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರದ ನಿರ್ಮೂಲನ ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸುತ್ತಾ ಪ್ರಧಾನಮಂತ್ರಿಯೂ ಒಳಗೊಂಡಂತೆ ಎಲ್ಲಾ ಸಾರ್ವಜನಿಕ ವ್ಯಕ್ತಿಗಳನ್ನು ಒಳಗೊಳ್ಳುವಂತೆ ಲೋಕಪಾಲ ಮಸೂದೆಯನ್ನು ಅಂಗೀಕರಿಸಬೇಕು, ಸಿಬಿಐ ಮತ್ತು ಇತರ ತನಿಖಾ ಸಂಸ್ಥೆಗಳಿಗೆ ಅವುಗಳ ಕೆಲಸದಲ್ಲಿ ಸ್ವಾಯತ್ತತೆ ನೀಡಬೇಕು ಎಂಧು ಪ್ರಣಾಳಿಕೆ ಮತ್ತೆ ಹೇಳಿದೆ.

ವಾಜಪೇಯಿ ಸರಕಾರ ಬುಡಮೇಲು ಮಾಡಿರುವ ವಿದೇಶಾಂಗ ನೀತಿಯನ್ನು ಸರಿಪಡಿಸುವ ಬಗ್ಗೆ, ರಾಷ್ಟ್ರೀಯ ಭದ್ರತೆಯ ಪ್ರಶ್ನೆಯಲ್ಲಿ ಕೈಗೊಳ್ಳಬೇಕಾದರೆ ನಿರ್ದಿಷ್ಟ ಕ್ರಮಗಳು ಏನೇನು ಎಂದು ಇಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ಈ ಪರ್ಯಾಯ ನೀತಿಗಳನ್ನು ರಾಷ್ಟ್ರಮಟ್ಟದಲ್ಲಿ ಜಾರಿಗೆ ತರಲು ವೇದಿಕೆ ಸಿದ್ಧವಾಗಬೇಕಾದರೆ ಮೊದಲು ಈ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ಕೂಟವನ್ನು ಸೋಲಿಸುವುದು, ಎಡ ಪಕ್ಷಗಳನ್ನು ಬಲಗೊಳಿಸುವುದು ಹಾಗೂ ಜಾತ್ಯಾತೀತ ಸರಕಾರಕ್ಕಾಗಿ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸುವುದು ಅಗತ್ಯ ಎಂದು ಸಿಪಿಐ(ಎಂ) ಪ್ರಣಾಳಿಕೆ ಹೇಳಿದೆ.

"ಈ ಚುನಾವಣೆ 21 ನೇ ಶತಮಾನದ ಹೊಸ್ತಿಲಲ್ಲಿ ಭಾರತಕ್ಕೆ ಮುಂದಿನ ದಿಕ್ಕು ತೋರುವ ಒಂದು ಸರಕಾರವನ್ನು ತರುತ್ತದೆ. ನಮ್ಮ ಮುಂದಿರುವ ಆಯ್ಕೆ ಸ್ಪಷ್ಟ - ನಾವು ಭಾರತವನ್ನು ಒಂದು ಧರ್ಮನಿರಪೇಕ್ಷ ಗಣತಂತ್ರವಾಗಿ, ಎಲ್ಲಾ ನಾಗರಿಕರನ್ನು ಪ್ರತಿಯೊಂದು ದೃಷ್ಟಿಯಿಂದಲೂ ಸಮಾನರಾಗಿ ಕಾಣುವ ಒಂದು ಗಣತಂತ್ರವನ್ನು ಬಲಪಡಿಸಬಯಸುತ್ತೇವೆಯೇ ಅಥವಾ ಸಂಕುಚಿತ ಮತೀಯ ದ್ವೇಷದ, ತಿಕ್ಕಾಟದ ಕೆಸರಿನಲ್ಲಿ ಭಾರತ ಹೂತುಹೋಗಬೇಕೆಂದು ಬಯಸುತ್ತೇವೆಯೇ"

ವಿದೇಶಿ ಯಾರು? ಸ್ವದೇಶಿ ಯಾರು?

ಬಿಜೆಪಿ ದುರಾಡಳಿತದ ಗಬ್ಬುನಾತ ಮರೆಸಲು 'ವಿದೇಶಿ ಹುಟ್ಟು' ಚರ್ಚೆ

ಇವೆಲ್ಲಾ ಸ್ವದೇಶಿ ನೀತಿಗಳೇ?

- ವಿಮಾ ಉದ್ದಿಮೆಯನ್ನು ವಿದೇಶಿ ಕಂಪನಿಗಳಿಗೆ ಒಪ್ಪಿಸುವ ಶತಪ್ರಯತ್ನ
- ಮಾರುತಿ ಕಂಪನಿಯನ್ನು ಸುಜುಕಿಗೆ ಒತ್ತೆಯಿಟ್ಟದ್ದು
- ಸಾರ್ವಜನಿಕ ಒಡೆತನದ ಸ್ವದೇಶಿ ಕಂಪನಿಗಳ ಮಾರಾಟ
- ಇಂಡಿಯನ್ ಏರ್‌ಲೈನ್ಸ್ ಅನ್ನು ವಿದೇಶಿ ಕಂಪನಿಗೆ ಮಾರಲು ತರಾತುರಿ
- ಬೇವು, ಅರಿಶಿಣ ಎಲ್ಲವನ್ನೂ ವಿದೇಶಿ ಕಂಪನಿಗಳಿಗೆ ಒಪ್ಪಿಸುವ ಪೇಟೆಂಟ್ ತಿದ್ದುಪಡಿ
- 1200 ಕೃಷಿ ಉತ್ಪನ್ನಗಳ ಮುಕ್ತ ಆಮದು






ವ್ಯಂಗ್ಯ ಚಿತ್ರಕೃಪೆ: ಔಟ್‌ಲುಕ್

- ಕ್ಲಿಂಟನ್ ಒತ್ತಡಕ್ಕೆ ಮಣಿದು ಸಿಟಿಬಿಟಿಗೆ ಸಹಿಹಾಕಲು ಗುಪ್ತ ಮಾತುಕತೆ
- ಅಲಿಪ್ತ ನೀತಿಗೆ ತಿಲಾಂಜಲಿ ಕೊಟ್ಟು ಅಮೆರಿಕನ್ ಪರ ವಿದೇಶಿ ನೀತಿ

ಬಿಜೆಪಿ-ಕಾಂಗ್ರೆಸ್‌ಗಳ ವಿದೇಶಿ ಪರ ನೀತಿಯನ್ನು ತಿರಸ್ಕರಿ

ನಿಜವಾದ ಸ್ವದೇಶಿ ಸ್ವಾವಲಂಬೀ ನೀತಿಗಳಿಗಾಗಿ

ಸಿಪಿಐ(ಎಂ)ಗೆ ನಿಮ್ಮ ಮತ






ಸಿಪಿಐ(ಎಂ) ಅಭ್ಯರ್ಥಿಗಳು

ಬಾಗೇಪಲ್ಲಿ : ಜಿ.ವಿ.ಶ್ರೀರಾಮರೆಡ್ಡಿ

ಕರ್ನಾಟಕದ ವಿಸರ್ಜಿತ ಶಾಸನಸಭೆಯಲ್ಲಿ




ಸಿಪಿಐ(ಎಂ)ನ ಏಕೈಕ ಸದಸ್ಯರಾಗಿದ್ದವರು ಕಾಂ. ಜಿ.ವಿ.ಶ್ರೀರಾಮರೆಡ್ಡಿ. ತಮ್ಮ ಸಾಧನೆಗಳು-ಮಾಡಿದ ಕೆಲಸಗಳಿಂದಲೇ ಈ ಬಾರಿಯ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸದಿಂದಿರುವವರು.

ಕರ್ನಾಟಕ ರಾಜ್ಯದ ಪ್ರಮುಖ ಸಂಘಟನೆಯಾದ ಎಸ್‌ಎಫ್‌ಐನ ಸಂಸ್ಥಾಪಕ ಮುಖಂಡರಾದ ಕಾಂ. ಜಿ.ವಿ.ಎಸ್. ರಾಜ್ಯಾದ್ಯಂತ ಸಂಘಟನೆಯನ್ನು ಕಟ್ಟಿ, ವಿದ್ಯಾರ್ಥಿಗಳ, ಸಮಸ್ಯೆಗಳ ಪರಿಹಾರಕ್ಕೆ ಹೋರಾಡಿ, ಈದಿನ ಎಸ್‌ಎಫ್‌ಐ ಒಂದು ಪ್ರಮುಖ ವಿದ್ಯಾರ್ಥಿ ಸಂಘಟನೆಯಾಗುವಲ್ಲಿನ ಅವರ ಪಾತ್ರ ಅಮೋಘ. ವಿದ್ಯಾರ್ಥಿ ಜೀವನದಿಂದಲೇ ಹೋರಾಟದ ಕಣಕ್ಕಿಳಿದ ಜಿ.ವಿ.ಎಸ್.ರವರ ಹೋರಾಟಗಳು ಚಿರಪರಿಚಿತ. ಯುವಜನ ಸಂಘಟನೆಯಾದ ಡಿವೈಎಫ್‌ಐನ್ನು ಸ್ಥಾಪಿಸಿ ಯುವಜನರ ಸಮಸ್ಯೆಗಳ ಪರಿಹಾರಕ್ಕೂ ದಣಿವರಿಯದೆ ಹೋರಾಡಿದ ಜಿ.ವಿ.ಎಸ್. ಪ್ರಸ್ತುತ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಸದಸ್ಯರು ಮತ್ತು ಕೋಲಾರ ಜಿಲ್ಲಾ ಕಾರ್ಯದರ್ಶಿಗಳು.

ಭೂಮಿ, ಕನಿಷ್ಠ ಕೂಲಿಗಾಗಿ ಕೃಷಿ ಕೂಲಿಕಾರರನ್ನು, ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ, ವಿದ್ಯುತ್ ಇತರೆ ಸಮಸ್ಯೆಗಳ ಪರಿಹಾರಕ್ಕಾಗಿ ಈ ಜನ ವಿಭಾಗವನ್ನು ಸಂಘಟಿಸುತ್ತಾ ಹೋರಾಡುತ್ತಿರುವಾಗಲೇ ಶಾಸನ ಸಭೆಯನ್ನು ಜನಸಾಮಾನ್ಯರ ಹೋರಾಟದ ವೇದಿಕೆಯಾಗಿ ಬದಲಾಯಿಸಲು ಹೋರಾಡುತ್ತಿರುವ, ಪಕ್ಷಕ್ಕಾಗಿಯೇ ದುಡಿಯುವ ಜನತೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವ ಪಕ್ಷದ ಪೂರ್ಣಾವಧಿ ಕಾರ್ಯಕರ್ತರು.

ಕಾಂ. ಜಿ.ವಿ.ಎಸ್.ರವರು ಶಾಸಕರಾಗಿದ್ದ ಸಮಯದಲ್ಲಿ ಅತ್ಯಂತ ಹಿಂದುಳಿದ ಬಾಗೇಪಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮತ್ತು ರಾಜ್ಯದ ದುಡಿಯುವ ಜನರ ಸಂಕಷ್ಟಗಳಿಗೆ ಯಾವ ರೀತಿ ಸ್ಪಂದಿಸಿದ್ದಾರೆ ಎನ್ನುವುದು ಐಕ್ಯರಂಗ ಓದುಗರಿಗೆ ತಿಳಿದೇಯಿದೆ.


ಕೆ.ಜಿ.ಎಫ್.(ಮೀಸಲು) - ಟಿ.ಎಸ್.ಮಣಿ



ಕೋಲಾರ ಚಿನ್ನದ ಗಣಿಯಲ್ಲಿ ಕಾರ್ಮಿಕನಾಗಿ ತನ್ನ ದುಡಿಮೆಯ ಜೀವನ ಆರಂಭಿಸಿದ ಕಾಂ ಟಿ.ಎಸ್.ಮಣಿ ನಮ್ಮ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಪ್ರಮುಖ ಸ್ಥಾನ ಹೊಂದಿರುವ ಚಿನ್ನದ ಗಣಿ ಆಂದೋಲನದ ಮುಖಂಡನಾಗಿ ಬೆಳೆದವರು. ಕಾರ್ಮಿಕ ಆಂದೋಲನಕ್ಕೆ ಧುಮುಕಿದ ನಂತರ ಕಮ್ಯುನಿಸ್ಟ್ ಚಿಂತನೆಗಳ ಕಡೆ ಆಕರ್ಷಿತರಾಗಿ ಕಾಂ. ಮಣಿ ಈಗ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರುಗಳು, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು ಮತ್ತು ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. 1985 ರಲ್ಲಿ ಕೆ.ಜಿ.ಎಫ್.ಕ್ಷೇತ್ರದಿಂದಲೇ ವಿಧಾನಸಭೆಗೆ ಆಯ್ಕೆಯಾಗಿದ್ದವರು ಮತ್ತು ಕೆ.ಜಿ.ಎಫ್. ಪುರಸಭೆಯ ಸದಸ್ಯರಾಗಿಯೂ ದುಡಿಯುವ ಜನತೆಯ ಪರವಾಗಿ ಧ್ವನಿಯೆತ್ತಿದ್ದವರು.

ವರ್ತೂರು ಹೆಚ್.ಎನ್.ಗೋಪಾಲ ಗೌಡ

ಬೆಂಗಳೂರಿನ ಪೂರ್ವಕ್ಕೆ ಬರುವ ವರ್ತೂರು ವಿಧಾನಸಭಾ ಕ್ಷೇತ್ರದಿಂದ ಕಾಂ. ಹೆಚ್.ಎನ್.ಗೋಪಾಲಗೌಡ ಸ್ಪರ್ಧಿಸುತ್ತಿದ್ದಾರೆ. 50 ರ ಪ್ರಾಯದ ಎಂ.ಕಾಂ. ಪದವೀಧರರಾದ ಕಾಂ. ಹೆಚ್.ಎನ್.ಗೋಪಾಲಗೌಡರು, ಸಿಪಿಐ(ಎಂ)ನ ವರ್ತೂರು ವಲಯ ಸಮಿತಿ ಕಾರ್ಯದರ್ಶಿಗಳು, ಜಿಲ್ಲಾ



ಕಾರ್ಯದರ್ಶಿ ಮಂಡಳಿ ಸದಸ್ಯರು ಮತ್ತು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ತಮ್ಮನ್ನು ಪೂರ್ತಿ ದುಡಿಯುವ ಜನರ ಚಳುವಳಿಗೆ ಅರ್ಪಿಸಿಕೊಂಡವರು.

1978 ರಲ್ಲಿ ಹೂಡಿ ಗ್ರಾಮಕ್ಕೆ ಸೇರಿದ್ದ ಜಮೀನೊಂದನ್ನು ಪಟ್ಟಭದ್ರ ಶಕ್ತಿಗಳು ಲಪಟಾಯಿಸಲು ಪ್ರಯತ್ನಿಸಿದ್ದರ ವಿರುದ್ಧ ಹೋರಾಡಿ ಆ ಜಮೀನನ್ನು ಸಾರ್ವಜನಿಕರಿಗೆ ಸಿಗುವಂತೆ ಮಾಡಿದರು, ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ವಿರುದ್ಧ ನಿರಂತರ ಹೋರಾಡುತ್ತಿರುವ ಗೋಪಾಲಗೌಡರು, ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಸಂಘಟಿಸಿ ಅವರ ಹಕ್ಕುಗಳ ರಕ್ಷಣೆಗೆ, ಸಮಸ್ಯೆಗಳ ಪರಿಹಾರಕ್ಕೆ ಹೋರಾಡುತ್ತಿರುವವರು. ಬಿ.ಪಿ.ಎಲ್. ಕಾರ್ಮಿಕರ ಹೋರಾಟ, ಇತರೆ ಅನೇಕ ರೈತ-ಕಾರ್ಮಿಕ ಚಳುವಳಿಗಳಲ್ಲಿ ಜೈಲುವಾಸ, ಪೋಲೀಸರ, ವಕ್ರದೃಷ್ಟಿಗೆ ಬಲಿಯಾದರು, ಛಲ ಬಿಡದೆ ದುಡಿಯುವ ಜನರ ಪರವಾಗಿ ಹೋರಾಡುತ್ತಿದ್ದಾರೆ.

ದೊಡ್ಡಬಳ್ಳಾಪುರ ಚಂದ್ರತೇಜಸ್ವಿ.ಆರ್.




ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಮುಖಂಡರಾಗಿ ವಿದ್ಯಾರ್ಥಿಗಳ ಸಮಸ್ಯೆಗಳ ವಿರುದ್ಧ ನಿರಂತರ ಹೋರಾಡಿ, ಎಡಪಂಥೀಯ ಚಿಂತನೆಗಳ ಕಡೆ ಒಲಿದ ಕಾಂ. ತೇಜಸ್ವಿ ಪ್ರಸ್ತುತ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರು ಮತ್ತು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರು.

ಪ್ರೌಢಶಾಲಾ ಶಿಕ್ಷಕರಾಗಿದ್ದು, ಆ ಹುದ್ದೆಗೆ ರಾಜೀನಾಮೆ ನೀಡಿ, ರೈತರನ್ನು ನಾಗರೀಕರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟಿರುವ ಪಕ್ಷದ ಪೂರ್ಣಾವಧಿ ಕಾರ್ಯಕರ್ತರು.

ಭ್ರಷ್ಟಾಚಾರ, ಹಸಿರುಕಾರ್ಡ್, ನಾಗರೀಕ ಸೌಲಭ್ಯಗಳಿಗೆ ನಿರಂತರವಾಗಿ ಜನತೆಯ ಧ್ವನಿಯಾಗಿ ನಿಂತವರು.

ಶಿಡ್ಲಘಟ್ಟ - ಕೆ.ಎಂ.ವೆಂಕಟೇಶ




ಪಕ್ಷದ ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಕಾಂ. ಕೆ.ಎಂ.ವೆಂಕಟೇಶ ಸದಾ ಹಸನ್ಮುಖಿ ಮತ್ತು ಸ್ನೇಹ ಜೀವಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಗಳು ಮತ್ತು ರಾಜ್ಯ ಉಪಾಧ್ಯಕ್ಷರಾಗಿದ್ದ ಕೆ.ಎಂ.ವಿ. ಕುಂದಲಗುರ್ಕಿ ಗ್ರಾಮ ಪಂಚಾಯತನ್ನು ತಮ್ಮ ನಾಯಕತ್ವದಲ್ಲಿ ಜನರ ಪಂಚಾಯತ್ ಮಾಡಿ ಜನರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದವರು.

ಜಿಲ್ಲೆಯ ಎಡಪಂಥೀಯ ಚಳುವಳಿಯ ಹಿರಿಯ ಮುಖಂಡರಾದ ಕಾಂ. ಕೆ.ಎಂ.ವಿ. ಭೂ ಚಳುವಳಿ, ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ, ವಿಶೇಷವಾಗಿ ರೇಷ್ಮೆ ಬೆಳೆಗಾರರ ಅನೇಕ ಸಮಸ್ಯೆಗಳ ಬಗ್ಗೆ ಹಲವಾರು ಚಳುವಳಿ ಮಾಡಿದ್ದರು ಮತ್ತು ಹಾಲು ಉತ್ಪಾದಕರಿಗೆ ಹೆಚ್ಚು ಬೆಲೆ ನೀಡಲು ಒತ್ತಾಯಿಸಿ ಸಾವಿರಾರು ರೈತರು ಕೆಂ.ಎಂ.ವಿ.ನೇತೃತ್ವದಲ್ಲಿ ಚಳುವಳಿ ಮಾಡುತ್ತಿದ್ದಾಗ ಪೋಲೀಸರ ಗೋಲಿಬಾರ್ ಖಂಡಿಸಿ ಒಂದು ವಾರ ಉಪವಾಸ ಸತ್ಯಾಗ್ರಹ ಮಾಡಿದ್ದು ಇವರ ಹೋರಾಟದ ಬದುಕಿನ ಕೆಲವು ಘಟನೆಗಳಲ್ಲಿ ಒಂದು.

ಚಿಂತಾಮಣಿ ಜಿ.ವಿ.ಅಶ್ವತ್ಥನಾರಾಯಣ ರೆಡ್ಡಿ

ಕಳೆದ ನಾಲ್ಕು ದಶಕಗಳಿಂದ ಎಡಪಂಥೀಯ ಚಳುವಳಿ



ಮತ್ತು ಸಿಪಿಐ(ಎಂ) ಜತೆ ಕೆಲಸ ಮಾಡುತ್ತಿರುವ ಕಾಂ. ಜಿ.ವಿ.ಅಶ್ವತ್ಥನಾರಾಯಣರೆಡ್ಡಿ ಜಿಲ್ಲೆಯ ಹಾಗೂ ರಾಜ್ಯದ ಹಿರಿಯ ಕಮ್ಯುನಿಸ್ಟ್ ಮುಖಂಡರಲ್ಲಿ ಒಬ್ಬರು. ಅತ್ಯಂತ ಧೈರ್ಯಶಾಲಿ ಸಂಗಾತಿಯಾದ ಇವರು ಭೂಗ್ರಹಣ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸಿ, ಕೋಲಾರ ಜಿಲ್ಲೆಯಲ್ಲಿ ಕೃಷಿಕೂಲಿಕಾರರಿಗೆ ಭೂಮಿ ಕೊಡುವಲ್ಲಿ ಪ್ರಮುಖ ಪಾತ್ರವಹಿಸಿದವರು.

ರೈತ ಸಂಘಟನೆಯ ಪ್ರಮುಖ ನೇತಾರರಾದ ಇವರು ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರು ಮತ್ತು ಪಕ್ಷದ ಜಿಲ್ಲಾ ಸಮಿತಿ ಸದಸ್ಯರು.

ಹೊಸಪೇಟೆ - ಪ್ರಸನ್ನಕುಮಾರ್

ವಿದ್ಯಾರ್ಥಿ ಜೀವನ ದಿಂದಲೇ ಸ್ಪಂದನಶೀಲರಾದ



ಕಾಂ. ಪ್ರಸನ್ನಕುಮಾರ್ 1982 ರಲ್ಲಿ ಎಸ್‌ಎಫ್‌ಐನ ಜಿಲ್ಲಾಧ್ಯಕ್ಷರಾದರು. 1989 ರಿಂದ ಎಡಪಂಥೀಯ ರಾಜಕೀಯಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಸಿಪಿಐ(ಎಂ)ನ ಪೂರ್ಣಾವಧಿ ಕಾರ್ಯಕರ್ತರಾದರು.

ಡಿವೈಎಫ್‌ಐನ ಜಿಲ್ಲಾ ಉಪಾಧ್ಯಕ್ಷರಾಗಿದ್ದ ಇವರು, ಈಗ ಸಿಐಟಿಯು ರಾಜ್ಯ ಸಹ ಕಾರ್ಯದರ್ಶಿಗಳು ಮತ್ತು ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರು.

ಬಳ್ಳಾರಿ ಸ್ಟೀಲ್ ನೌಕರರು ಮತ್ತು ಕಂಪ್ಲಿ ಸಕ್ಕರೆ ಕಾರ್ಖಾನೆ ನೌಕರರ ಹೋರಾಟಗಳು ಪ್ರಮುಖಹೋರಾಟಗಳು. 'ವಿಜಯ ನಗರ ಉಕ್ಕು ಕರ್ನಾಟಕದ ಹಕ್ಕು' ಎಂದು ಪ್ರತಿಪಾದಿಸಿ ಅದಕ್ಕಾಗಿ ನಿರಂತರವಾಗಿ ಚಳುವಳಿಗಳನ್ನು ಸಂಘಟಿಸಿದವರು.


ಗ್ರಾಮ ಪಂಚಾಯತ್ ನೌಕರರ ಸಂಘ, ಅಂಗನವಾಡಿ ಹೀಗೆ ಸಮಸ್ತ ದುಡಿಯುವ ಜನರ ಪರವಾಗಿ ಹೋರಾಡುತ್ತಿರುವವರು ಸಂಗಾತಿ ಕಾಂ. ಆರ್.ಪ್ರಸನ್ನಕುಮಾರ್.

ಕಮಲಾಪುರ(ಮೀ) - ಮಾರುತಿಮಾನಪಡೆ

ಕಳೆದ 19 ವರ್ಷಗಳಿಂದ ಗುಲ್ಬರ್ಗ ಜಿಲ್ಲೆಯ ರೈತ ಚಳುವಳಿಯ ವಿವಿಧ ಜವಾಬ್ದಾರಿಗಳನ್ನೊತ್ತು ದುಡಿಯುತ್ತಿರುವ ಕಾಂ. ಮಾರುತಿ ಮಾನಪಡೆ ಕರ್ನಾಟಕದ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಅಧ್ಯಕ್ಷರು, ಅಖಿಲ ಭಾರತ ಕಿಸಾನ್ ಸಭಾದ ಕಾರ್ಯಕಾರಿ ಸಮಿತಿ ಸದಸ್ಯರು.

ಆರೋಗ್ಯ ಕಾರ್ಯಕರ್ತನಾಗಿ ಸರ್ಕಾರಿ ಸೇವೆಯಲ್ಲಿದ್ದ ಅವರು ರಾಜ್ಯ ಸರ್ಕಾರಿ ನೌಕರರ ಸಂಘದ ಕ್ರಿಯಾಶೀಲ ಕಾರ್ಯಕರ್ತನಾಗಿ ದುಡಿದವರು. ನರಗುಂದ-ನವಲಗುಂದ ರೈತ ಚಳುವಳಿಯಿಂದ ಪ್ರಭಾವಿತರಾಗಿ ರೈತ ಸಂಘ ಕಟ್ಟಲು ಮುಂದಾಗಿ, ಭೂಮಿಗಾಗಿ, ನೀರಾವರಿಗಾಗಿ, ತೊಗರಿ ಬೆಳೆಗಾರರ ಹಿತರಕ್ಷಣೆಗಾಗಿ ಹೋರಾಡುತ್ತಿರುವವರು.

ಕನಿಷ್ಠ ಸೌಲಭ್ಯಗಳಿಲ್ಲದ ಪಂಚಾಯತ್ ನೌಕರರು, ಅಂಗನವಾಡಿ ನೌಕರರು, ಎ.ಬಿ.ಸಿ. ಕಾರ್ಮಿಕರ




ಹೋರಾಟ, ರಾಜಶ್ರೀ ಸಿಮೆಂಟ್ ಕಾರ್ಖಾನೆ ಕಾರ್ಮಿಕರ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

1987 ರಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ, ಜಿಲ್ಲೆಯಲ್ಲಿ ಅತಿ ಹೆಚ್ಚು ಮತ ಪಡೆದು ಆಯ್ಕೆಯಾದವರು ಎಂಬ ಖ್ಯಾತಿ ಅವರದು. ಜಿಲ್ಲಾ ಪರಿಷತ್‌ನಲ್ಲಿ ಅನೇಕ ಜನಪರ ತೀರ್ಮಾನಗಳನ್ನು ಕೈಗೊಳ್ಳಲು ಒತ್ತಾಯಿಸಿ ಯಶಸ್ವಿಯೂ ಆಗಿದ್ದಾರೆ. ಗಂಡೋರಿ ನಾಲಾ ಯೋಜನೆಗೆ ಹೋರಾಡಿ ಯಶಸ್ವಿಯಾಗಿರುವುದು ಹೋರಾಟಗಳ ಪ್ರಮುಖ ಯಶಸ್ವಿಗಳಲ್ಲೊಂದು.

ಉಳ್ಳಾಲ- ಬಿ.ಮಾಧವ

ಕಳೆದ 35 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ



ಕಾರ್ಮಿಕ ಚಳುವಳಿಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಬಿ.ಮಾಧವರವರು ಸಿಐಟಿಯು ರಾಜ್ಯ ಕಾರ್ಯದರ್ಶಿಗಳು, ರಾಜ್ಯ ಸಮಿತಿ ಉಪಾಧ್ಯಕ್ಷರೂ, ಅಖಿಲ ಭಾರತ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿರುತ್ತಾರೆ ಮತ್ತು ಕಳೆದ 55 ವರ್ಷಗಳ ಭವ್ಯ ಇತಿಹಾಸವಿರುವ 'ಸೌತ್ ಕೆನರಾ ವೈಲ್ ವರ್ಕರ್ಸ್ ಯೂನಿಯನ್' ನ ಪ್ರಧಾನ ಕಾರ್ಯದರ್ಶಿಗಳು.

ಎಲ್.ಐ.ಸಿ. ನೌಕರರಾಗಿ ನೌಕರರ ಮುಖಂಡನಾಗಿ ಬೆಳೆದು ಬಂದ ಕಾಂ. ಮಾಧವರವರು, ವಿಮಾ ನೌಕರರ ಸಂಘಟನೆಯಲ್ಲಿ ಅಖಿಲ ಭಾರತ ಮಟ್ಟದವರೆಗೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಎಂ.ಎ. ಎಲ್.ಎಲ್.ಬಿ. ಪದವೀಧರರಾದ ಮಾಧವರವರು ಉತ್ತಮ ವಾಗ್ಮಿ ಲೇಖಕ ಮತ್ತು ಭಾಷಾಂತರಕಾರರು. ಕಾರ್ಮಿಕ ವರ್ಗದ ಚಳುವಳಿ ಮತ್ತು ವೈಜ್ಞಾನಿಕ ಸಮಾಜವಾದದಕುರಿತು ಆಳವಾದ ಅಧ್ಯಯನ ನಡೆಸಿರುವ ಅವರು, 1988 ರಲ್ಲಿ ಸಿಐಟಿಯು ನಿಯೋಗದಲ್ಲಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿದ್ದರು.

ದೇವದುರ್ಗ(ಮೀ) - ಚಂದ್ರಪ್ಪಹೊಸ್ಕೇರಾ


ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ.ಚಂದ್ರಪ್ಪ ಹೊಸಕೇರಾ



ಅವರು, ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರು ಮತ್ತು ರಾಯಚೂರು-ಕೊಪ್ಪಳ ಜಿಲ್ಲಾ ಸಮಿತಿ ಸದಸ್ಯರು.

ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆಗೆ ಸೇರಿದ ಕಾಂ.ಚಂದ್ರಪ್ಪ, ಎಸ್‌ಎಫ್‌ಐನ್ನು ರಾಯಚೂರು ಜಿಲ್ಲೆಯಾದ್ಯಂತ ಅತ್ಯಂತ ಬಲಿಷ್ಠ ಸಂಘಟನೆಯಾಗಿ ಕಟ್ಟಲು ದುಡಿದವರು. ರಾಯಚೂರು ಜಿಲ್ಲಾಕಾರ್ಯದರ್ಶಿಯಾಗಿ, ರಾಜ್ಯ ಉಪಾಧ್ಯಕ್ಷರಾಗಿ ಮತ್ತು ಕೇಂದ್ರ ಸಮಿತಿ ಸದಸ್ಯರಾಗಿ ದುಡಿದ ಚಂದ್ರಪ್ಪ, ರಾಯಚೂರು ಜಿಲ್ಲೆಯಲ್ಲಿ ಡೊನೇಷನ್, ಶುಲ್ಕ ಹೆಚ್ಚಳದ ವಿರುದ್ಧ ಯಶಸ್ವಿ ಚಳುವಳಿಯನ್ನು ಸಂಘಟಿಸಿದವರು. ವಿದ್ಯಾರ್ಥಿ ಜೀವನದ ನಂತರ ಈಗ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಿರುವ ಯುವಕ.


ಹಾನಗಲ್ - ಫಕೀರಪ್ಪಹೋತ್ನಳ್ಳಿ



ಪ್ರಸ್ತುತ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರು, ಜಿಲ್ಲಾ ಮುಖಂಡರು ಆದ ಕಾಂ. ಫಕೀರಪ್ಪ ಹೋತನಹಳ್ಳಿರವರು ಕೃಷಿಕೂಲಿಕಾರರ ಬವಣೆಗಳನ್ನು ಹೋಗಲಾಡಿಸಲು ಕೃಷಿಕೂಲಿಕಾರರನ್ನು ಸಂಘಟಿಸಲು ಮುಂದಾಗಿ, ಈಗ ಸಿಪಿಐ(ಎಂ) - ಧಾರವಾಡ ಜಿಲ್ಲಾ ಮುಖಂಡ ರಾಗಿ ಬೆಳೆದಿದ್ದಾರೆ. ಹಾನಗಲ್‌ನಲ್ಲಿ ನಡೆಯುತ್ತಿರುವ ಭೂಮಿಗಾಗಿನ ಕೃಷಿಕೂಲಿಕಾರರ ಹೋರಾಟಗಳಿಗೆ ನೇತೃತ್ವ ಕೊಡುತ್ತಿರುವ ಕೀರ್ತಿ ಇವರದು.



ಬಾಬಾ ಬುಡನ್‌ಗಿರಿ ಇನ್ನೊಂದು ಅಯೋಧ್ಯೆ ಆಗಗೊಡುವುದಿಲ್ಲ



ಸುರತ್ಕಲ್, ಭಟ್ಕಳದ
ರಕ್ತಪಾತ ಸ್ಯಾಂಪಲ್‌ಮಾತ್ರ!
ಕರ್ನಾಟಕದ
ಕೋಮು ಸಾಮರಸ್ಯ-ಶಾಂತಿ
ಕೆಡಿಸ ಹೊರಟಿರುವ
ಕೋಮುವಾದಿ
ಬಿಜೆಪಿ ಮೈತ್ರಿಕೂಟವನ್ನು
ಸೋಲಿಸಿ

ಕರ್ನಾಟಕದಲ್ಲಿ ಕೋಮುವಾದದ ಸೂಲಗಿತ್ತಿಯಾದ ಪಟೇಲ್, ಹೆಗಡೆ, ಜಾರ್ಜ್ ದುಷ್ಟಕೂಟ ಸೋಲಿಸಿ

ಜಾತ್ಯಾತೀತ ಕರ್ನಾಟಕವನ್ನು ರಕ್ಷಿಸಲು

ಸಿಪಿಐ(ಎಂ)ಗೆ ನಿಮ್ಮ ಮತ

ಐಕ್ಯರಂಗ

ಪಶ್ಚಿಮ ಬಂಗಾಳದಲ್ಲಿ ಎಡರಂಗ-ಜ್ಯೋತಿಬ

22 ವರ್ಷಗಳಿಂದ ಸುಭದ್ರ ಸರ್ಕಾರ-ಸಮರ್ಥ ನಾಯ



- ★ ಸಮಗ್ರ ಭೂಸುಧಾರಣೆ, ವಿಶ್ವದ ಗ ಸೆಳೆದ ಪಂಚಾಯತ್ ರಾಜ್ಯ ಗ್ರಾ ಅಭಿವೃದ್ಧಿಯ ಪರ್ಯಾಯ ದಾರಿ
- ★ ಜನಸಾಮಾನ್ಯರ ಕೊಳ್ಳುವ ಶಕ್ತಿ ಹೆಚ್ಚಿಸುವ ಜನಪರ ಅಭಿವೃದ್ಧಿ
- ★ ರೈತ-ಕಾರ್ಮಿಕರ ಹಕ್ಕುಗಳ ರಕ್ಷಣೆ, ವಿಸ್ತರಣೆ
- ★ ಕೋಮು ಸಾಮರಸ್ಯ-ಶಾಂತಿ ರಕ್ಷಣ
- ★ ಕಾರ್ಯಕ್ರಮ ಆಧಾರಿತ ಪಕ್ಷಗಳ ರ
- ★ ದಕ್ಷ ರೇಶನ್ ವಿತರಣೆ



ಕರ್ನಾಟಕದಲ್ಲಿ ಜನಪರ
ಮೂರನೇ ಪರ್ಯಾಯಕ್ಕಾಗಿ

ಕರ್ನಾಟಕದ ಸಮಗ್ರ, ಸಮಾನ ಅಭಿವೃದ್ಧಿಗಾಗಿ

ಸಿಪಿಐ(ಎಂ)ಗೆ ನಿಮ್ಮ ಮತ

ಐಕ್ಯರಂಗ

ಪೋಖ್ರಾನ್ ಬಿತ್ತಿ, ಕಾರ್ಗಿಲ್ ಬೆಳೆದವರು




ಪೋಖ್ರಾನ್ ಒಂದು ದೊಡ್ಡಪ್ರಮಾದ

- ✓ ದುಬಾರಿ ಅಣ್ವಸ್ತ್ರ ಪೈಪೋಟಿ 50 ಸಾವಿರ ಕೋಟಿ ರೂ.
- ✓ ಹೆಚ್ಚಿದ ಘರ್ಷಣೆಯ ಸಾಧ್ಯತೆ ಹೆಚ್ಚು ಅಭದ್ರತೆ
- ✓ ಅಮೆರಿಕ ಮೂಗು ತೂರಿಸಲು ಅವಕಾಶ
- ✓ ಸಿಟಿಬಿಟಿಗೆ ಸಹಿ ಹಾಕಲು ಹೆಚ್ಚಿದ ಒತ್ತಡ
- ✓ ಆರ್ಥಿಕ ಬಲವಿಲ್ಲದೆ ಬರಿ ಅಣ್ವಸ್ತ್ರದಿಂದ ಸೂಪರ್‌ಪವರ್ ಸ್ಥಾನ ಅಸಾಧ್ಯ

ಕಾರ್ಗಿಲ್ ಕದನ ಪೋಖ್ರಾನ್II ನಿರ್ಲಕ್ಷ

- ● ಅಣುಯುದ್ಧದ ಹೆಸರಲ್ಲಿ ಅಮೆರಿಕ ಮಧ್ಯಪ್ರವೇಶ ಮಾಡೀತು ಎಂಬ ನೆಚ್ಚಿಕೆಯಿಂದ ಕಾರ್ಗಿಲ್‌ನಲ್ಲಿ ಪಾಕಿಸ್ತಾನಿ ನುಸುಳಿಕೆ
- ● ಆಗಸ್ಟ್ 98 ರಲ್ಲಿ ಕಾರ್ಗಿಲ್‌ನಲ್ಲಿ ನುಸುಳಿಕೆಯ ಮುನ್ನೆಚ್ಚರಿಕೆಗೆ ಕಿವಿಗೊಡದ ಸರ್ಕಾರ
- ● 300 ಚದರ ಕಿ.ಮಿ. ಆಕ್ರಮಿಸುವಾಗಲೂ ನಿದ್ದೆ ಮಾಡುತ್ತಿದ್ದ ಸರ್ಕಾರ
- ● ನಾನೂರಕ್ಕೂ ಹೆಚ್ಚು ಸೈನಿಕರ ಬಲಿ
- ● ಕೊನೆಗೂ ಅಮೆರಿಕದ ಮಧ್ಯಸ್ಥಿಕೆಗೆ ತಲೆಬಾಗುವ ಪರಿಸ್ಥಿತಿ





ಐಕ್ಯರಂಗ

ಪೋಖ್ರಾನ್, ಕಾರ್ಗಿಲ್, ಅಡ್ಮಿರಲ್ ಭಾಗವತ್ ವಜಾ ಇತ್ಯಾದಿಗಳಿಂದ

ದೇಶದ ಭದ್ರತೆಗೆ ಅಪಾಯ ಒಡ್ಡಿರುವ ಬಿಜೆಪಿಯನ್ನು ಸೋಲಿಸಿ

ರಾಷ್ಟ್ರೀಯ ಒಮ್ಮತದಿಂದ ದೇಶದ ಭದ್ರತೆ ಸಾರ್ವಭೌಮತೆ ಕಾಪಾಡುವ


ಸಿಪಿಐ(ಎಂ)ಗೆ ನಿಮ್ಮ ಮತ



ಈರುಳ್ಳಿ ಬೆಲೆ ಕೆ.ಜಿ.ಗೆ 80 ರೂಪಾಯಿ.........
ಆಲೂಗಡ್ಡೆ ಬೆಲೆ ಕೆ.ಜಿ.ಗೆ 40 ರೂಪಾಯಿ.......

...ನ್ನೇನು ನಿರೀಕ್ಷಿಸಿದ್ದೀರಿ?

ಕಾಳಸಂತೆಕೋರರ ಸರ್ಕಾರದಿಂದ!
ಉದಾರೀಕರಣದಲ್ಲಿ ಕಾಂಗ್ರೆಸ್‌ನ್ನು ಮೀರಿಸುತ್ತೇವೆ ಎಂದವರಿಂದ!



ಕಾಂಗ್ರೆಸ್‌ನ್ನ ಖಂಡಿತಾ ಅವರು ಮೀರಿಸಿದ್ದಾರೆ!

- ✓ **ಹತ್ತಿ, ತೊಗರಿ ಬೇಳೆ ರೈತರ ಆತ್ಮಹತ್ಯೆ**
- ✓ **ಕಲಬೆರಕೆ ಸಾಸಿವೆ ಎಣ್ಣೆಯಿಂದ ದಿಲ್ಲಿಯಲ್ಲಿ ಸಾವು**
- ✓ **ರೇಶನ್ ಬೆಲೆಯಲ್ಲಿ ಏರಿಕೆ, ಪ್ರಮಾಣದಲ್ಲಿ ಕಡಿತ**
- ✓ **ಉಗ್ರಾಣ ತುಂಬಿದೆ, ಹೊಟ್ಟೆ ಹಸಿದಿದೆ**

ಐಕ್ಯರಂಗ

ಈರುಳ್ಳಿ ಬೆಲೆ ಏರಿಕೆಗೆ ಸರ್ಕಾರ ಏನು ಮಾಡಲು ಸಾಧ್ಯವಿಲ್ಲ........
ಕಾಳಸಂತೆ ಅಪರಾಧವಲ್ಲ
\- ವಾಜಪೇಯಿ ಉವಾಚ

ಬಿಜೆಪಿ ಕಾಂಗ್ರೆಸ್‌ಗಳ ಜನವಿರೋಧಿ ಆರ್ಥಿಕ ನೀತಿ ತಿರಸ್ಕರಿಸಿ

ಪರ್ಯಾಯ ಜನಪರ ನೀತಿಗಳಿಗಾಗಿ

ಸಿಪಿಐ(ಎಂ)ಗೆ ನಿಮ್ಮ ಮತ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ